ಮಾನವ್ಯ ಕವಿ

ಬಿ. ಎ. ಸನದಿ

ಸಂಪಾದಕರು :

ಬಿ. ವ್ಹಿ. ಗುಂಜೆಟ್ಟಿ

ಕರ್ನಾಟಕ ವಿದ್ಯಾವರ್ಧಕ ಸಂಘ

ಧಾರವಾಡ

ಮಾನವ್ಯ ಕವಿ

ಬಿ. ಎ. ಸನದಿ

ಸಂಪಾದಕರು :

ಬಿ. ವ್ಹಿ. ಗುಂಜೆಟ್ಟಿ

ಕರ್ನಾಟಕ ವಿದ್ಯಾವರ್ಧಕ ಸಂಘ

ಧಾರವಾಡ

Manavya Kavi B. A. Sanadi : A collection of Articles. Edited by : Prof. B. V. Gunjetti, General Secretary, Karnatak Vidyavardhaka Sanga, Dharwad, Published by : Karnatak Vidyavardhaka Sangh, Dharwad-580 001

First Impression : December 2003

Price : 10 Rupees

Pages : 8+82

ಮೊದಲ ಮುದ್ರಣ : ಡಿಸೆಂಬರ ೨೦೦೩

ಪುಟಗಳು : ೮+೮೨

ಬೆಲೆ : ೧೦ ರೂ.

ಮುದ್ರಕರು :

ಮನೋಹರ ಮುದ್ರಣಾಲಯ
ಹಳೆ ದಲಾಲ ಮಾರ್ಕೆಟ್
ಧಾರವಾಡ - ೫೮೦ ೦೦೧
ದೂರವಾಣಿ : ೨೭೯೦೦೩೦, ೨೭೪೧೯೮೪

ಪ್ರಾಸ್ತಾವಿಕ ನುಡಿ

'ಮಾನವ್ಯ ಕವಿ' ಬಿ. ಎ. ಸನದಿ ಈ ಪುಸ್ತಿಕೆಯನ್ನು ಕನ್ನಡಿಗರ ಕೈಗೆ ಸಮರ್ಪಿಸಲು ಅತ್ಯಂತ ಸಂತೋಷವಾಗುತ್ತಿದೆ. ಕವಿ ಸನದಿ ತಮ್ಮ ಅನುಪಮ ಸಾಹಿತ್ಯಸೃಷ್ಟಿಯಿಂದ ಕನ್ನಡ ಸಾರಸ್ವತವನ್ನು ಶ್ರೀಮಂತಗೊಳಿಸಿದ್ದಾರೆ. ನಾಡು-ಹೊರನಾಡುಗಳಲ್ಲಿ ಕನ್ನಡ ಕಸ್ತೂರಿಯ ಕಂಪು ಹರಡಿ ಧನ್ಯರೆನಿಸಿದ್ದಾರೆ. ಸಮಸ್ತ ಕನ್ನಡಿಗರ ಪ್ರೀತಿ-ಗೌರವಾದರಗಳಿಗೆ ಪಾತ್ರರಾಗಿದ್ದಾರೆ.


ಶ್ರೀ ಬಿ. ಎ. ಸನದಿ ಅವರು ಕರ್ನಾಟಕದ ಅತ್ಯಂತ ಹಳೆಯದಾದ ನಾಡು-ನುಡಿಯ ಹೆಮ್ಮೆಯ ಕನ್ನಡ ಗುಡಿಯನಿಸಿದ ಕರ್ನಾಟಕ ವಿದ್ಯಾವರ್ಧಕ ಸಂಘದ ಗೌರವ ಉಪಾಧ್ಯಕ್ಷರಾಗಿ ಅದರ ಹಿರಿಮೆ-ಗರಿಮೆಗಳಿಗೆ ಪಾತ್ರರಾಗಿದ್ದಾರೆ. ಶ್ರೀಯುತರು ತಮ್ಮ ಅಧಿಕಾರಾವಧಿಯಲ್ಲಿ ಬೃಹತ್ ಮುಂಬಯಿಯಲ್ಲಿ ಅಲ್ಲಿಯ ಕರ್ನಾಟಕ ಸಂಘದ ಸಹಯೋಗದಲ್ಲಿ ಕನ್ನಡ ಸಮ್ಮೇಳನ ಆಯೋಜಿಸಿ ಒಂಬತ್ತು ದಿನಗಳ ಕಾಲ ನಿರಂತರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಕಾರಣರಾದರಷ್ಟೇ ಅಲ್ಲದೆ ಆ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಯಶಸ್ವಿಗೊಳಿಸಿದುದು ನಮ್ಮ ಸಂಘದ ಚರಿತ್ರೆಯಲ್ಲಿ ದಾಖಲಿಸುವಂತಹದಾಗಿದೆ.

ಶ್ರೀ ಸನದಿಯವರಿಗೆ ೧೮ ನೇ ಅಗಷ್ಟ ೨೦೦೩ ರಂದು ಎಪ್ಪತ್ತು ವಸಂತಗಳು ಸಂದ ನಿಮಿತ್ತ ಅವರ ಜೀವನ ಹಾಗೂ ಕಾವ್ಯದ ಒಂದು ಕಿರುನೋಟವನ್ನು ಪ್ರಕಟಿಸುವ ಪ್ರಯತ್ನ ಇಲ್ಲಿ

ಮಾಡಲಾಗಿದೆ. ಈ ಪುಸ್ತಿಕೆ ಸನದಿ ಕವಿ ಕಾವ್ಯದ ಓದಿಗೆ ಒಂದು ಮಾದರಿ ಆಗುವದೆಂಬ ವಿಶ್ವಾಸ ನಮ್ಮದಾಗಿದೆ.

ನಮ್ಮ ವಿಜ್ಞಾಪನೆಯನ್ನು ಗೌರವಿಸಿ ನಾಡಿನ ಹಿರಿಯ ಲೇಖಕರಾದ ಸನ್ಮಿತ್ರರಾದ ಡಾ. ಶಾಮಸುಂದರ ಬಿದರಕುಂದಿ, ಡಾ. ಜಿ. ಎಂ. ಹೆಗಡೆ, ಡಾ. ಎಂ. ಜಿ. ಹೆಗಡೆ, ಡಾ. ಕಮಲಾ ಹಮ್ಮಿಗೆ ಹಾಗೂ ಡಾ. ಬಸವರಾಜ ಸಾದರ ಅವರು ಅಭ್ಯಾಸಪೂರ್ಣವಾದ ಲೇಖನಗಳನ್ನು ಬರೆದುಕೊಟ್ಟು ಸಹಕರಿಸಿದ್ದಾರೆ. ಅವರೆಲ್ಲರ ಉಪಕಾರವನ್ನು ಸ್ಮರಿಸುತ್ತ ವಂದನೆಗಳನ್ನು ಸಲ್ಲಿಸುವೆ. ನಮ್ಮ ಎಲ್ಲ ಕಾರ್ಯಚಟುವಟಿಕೆಗಳಿಗೆ ಬೆನ್ನುತಟ್ಟಿ ಪ್ರೋತ್ಸಾಹ ನೀಡುತ್ತ ಬಂದಿರುವ ಸಂಘದ ಅಧ್ಯಕ್ಷರಾದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಅವರಿಗೆ, ತಮ್ಮ ಅನುಪಮ ಸಹಾಯ ಸಹಕಾರವೀಯುತ್ತ ಬಂದಿರುವ ಕಾರ್ಯಕಾರೀ ಸಮಿತಿ ಸದಸ್ಯರೆಲ್ಲರಿಗೆ ವಂದನೆಗಳನ್ನು ಸಲ್ಲಿಸುವೆ. ಅಂದವಾಗಿ ಮುದ್ರಿಸಿಕೊಟ್ಟ ಮನೋಹರ ಮುದ್ರಣಾಲಯದ ಶ್ರೀ ರವಿ-ಚಂದ್ರು ಸಹೋದರರಿಗೆ ವಂದನೆಗಳು. ಸಹೃದಯ ಕನ್ನಡಿಗರು ಈ ಚಿಕ್ಕ ಪುಸ್ತಿಕೆಯನ್ನು ಆದರಿಂದ ಸ್ವಾಗತಿಸುವರೆಂದು ಹಾರೈಸುವೆ.

ಬಿ. ವ್ಹಿ. ಗುಂಜೆಟ್ಟಿ
ಸಂಪಾದಕರು



ಮಾನವ್ಯ ಕವಿ

ಬಿ. ಎ. ಸನದಿ

ಅನುಕ್ರಮಣಿಕೆ

ಸೂರ್ಯಪ್ರಕಾಶ ತುಂಬಿದ ವ್ಯಕ್ತಿ
ಬಿ. ಎ. ಸನದಿ

ಡಾ. ಪಾಟೀಲ ಪುಟ್ಟಪ್ಪ

ಬಾಬಾಸಾಹೇಬ (ಬಿ.ಎ.) ಸನದಿಯವರು ಕರ್ನಾಟಕತ್ವವನ್ನು ತಮ್ಮೊಳಗೆ ಮೈಗೂಡಿಸಿಕೊಂಡು ಒಂದು ಮೂರ್ತಿ ಆದವರು. ಅವರು ಕರ್ನಾಟಕದವರೆಷ್ಟೋ ಅಷ್ಟೇ ಭಾರತದವರೂ ಆಗಿದ್ದಾರೆ. ಜಾತಿಯ ಯಾವ ಸೋಂಕೂ ಇಲ್ಲದ ಅಪ್ಪಟ ರಾಷ್ಟ್ರೀಯವಾದಿ ಅವರು.

ಒಬ್ಬ ಒಳ್ಳೆಯ ಮುಸ್ಲಿಂ, ಒಬ್ಬ ಒಳ್ಳೆಯ ಕನ್ನಡಿಗ, ಒಬ್ಬ ಒಳ್ಳೆಯ ಭಾರತೀಯ ಹೇಗೆ ಇರುತ್ತಾನೆಂದು ಕೇಳಿದರೆ ನಾವು ಈ ಸನದಿಯ ಕಡೆಗೆ ಬೆರಳೆತ್ತಿ ತೋರಿಸಬಹುದು.

ಸನದಿಯವರು ಬಹಳಷ್ಟು ಪ್ರದೇಶಗಳನ್ನು ನೋಡಿದ್ದಾರೆ. ವಿಪುಲ ಜನರನ್ನು ಕಂಡಿದ್ದಾರೆ. ಎಲ್ಲಿ ಯಾರಲ್ಲಿ ಏನಿದೆ ಎನ್ನುವುದನ್ನು ಅವರು ಕಂಡುಕೊಂಡಿದ್ದಾರೆ.

ಅವರಲ್ಲಿ ಜನರನ್ನು ಒಳಹೊಕ್ಕು ನೋಡುವ ಯಾವುದೋ ಅತೀಂದ್ರಿಯ ಶಕ್ತಿ ಇದೆ. ಭಾರತದ ಯಾವ ಪ್ರದೇಶವೂ ಅಪರಿಚಿತವಲ್ಲ ಎನ್ನುವಂತೆ ಅವರು ತಮ್ಮ ಹರಹು ಬೆಳೆಸಿಕೊಂಡಿದ್ದಾರೆ.

ಅನಿಸುವ ಹೃದಯ, ನೋಡುವ ದೃಷ್ಟಿ ಹೊಂದಿರುವ ಅವರು ಶಬ್ದಗಳನ್ನು ಲೀಲಾಜಾಲವಾಗಿ ಬಳಸುವ ಅಭಿವ್ಯಕ್ತಿ ಸಾಮರ್ಥ್ಯವನ್ನು ಪಡೆದಿದ್ದಾರೆ. ಅವರ ಕವಿತೆ, ಕಥೆ, ನಾಟಕ, ವ್ಯಕ್ತಿಚಿತ್ರ ಎಲ್ಲವೂ ಹೃದ್ಯವಾಗಿವೆ. ಅನುಭವದ ಆಳದಿಂದ ಬಂದ ಅವರ ರಚನೆಗಳು ನೇರವಾಗಿ ಹೃದಯಕ್ಕೇ ಹೋಗುತ್ತವೆ.

ಎಲ್ಲರಿಗೂ ಕಂಡಿರುವುದನ್ನೇ ಸನದಿಯವರು ನೋಡಿರುತ್ತಾರೆ. ಆದರೆ ಅವರು ನೋಡುವುದರಲ್ಲಿ ಬೇರೆ ದೃಷ್ಟಿಯೇ ಇರುತ್ತದೆ. ಅವರಲ್ಲಿರುವ ಕವಿದೃಷ್ಟಿ ಈ ಕೆಲಸವನ್ನು ಅವರಿಂದ ಮಾಡಿಸಿರುತ್ತದೆ.

ಸನದಿಯವರು ಸೃಷ್ಟಿಸಿರುವ ರಚನೆಗಳು ನಿಸ್ಸಂದೇಹವಾಗಿಯೂ ದೊಡ್ಡವು. ಅದರ ಬಗೆಗೆ ಎರಡು ಅಭಿಪ್ರಾಯಗಳಿಲ್ಲ. ಆದರೆ, ವ್ಯಕ್ತಿ ಸನದಿಯವರು ಆ ರಚನೆಗಳಿಗಿಂತಲೂ ದೊಡ್ಡವರು.

ಅವರಂಥ ವ್ಯಕ್ತಿಗಳನ್ನು ಸುವರ್ಣ ಅಳೆಯುವ ತ್ರಾಸಿನಲ್ಲಿಯೇ ಅಳೆಯಬೇಕು. ಅವರ ಜತೆ ಅಳೆದಾಗ ಸುವರ್ಣದ ತೂಕವೇ ಕಡಿಮೆ ಎನಿಸುತ್ತದೆ.

ಅವರು ಹೋದಲ್ಲೆಲ್ಲ ಬಹು ವಿಪುಲವಾದ ಸೂರ್ಯಪ್ರಕಾಶವನ್ನು ಕೊಂಡೊಯ್ಯುತ್ತಾರೆ. ಮುಖ ಮುದುಡಿಕೊಂಡಿರುವ ಜನರು ತುಂಬಿರುವಂಥ ಸಮಾಜದಲ್ಲಿ ಸನದಿಯವರಂಥ ಜನ ಬೇಕು. ಅವರು ಹಸನ್ಮುಖದ ಆರೋಗ್ಯಕರ ಮನಸ್ಸನ್ನು ಹೊಂದಿದ್ದಾರೆ.

ಸಮಾಜ ಸ್ವಾಸ್ಥ್ಯ ಸುಧಾರಿಸಬೇಕಾದರೆ ಬಾಬಾಸಾಹೇಬ ಸನದಿಯವರಂಥ ಜನರೇ ಬೇಕು. ಅವರ ಬರವಣಿಗೆಯಲ್ಲಿ ಆರೋಗ್ಯ ಇದೆ. ಆಶಾಭಾವನೆ ಇದೆ.

ನಾವು ತಿಳಿದ ಎಷ್ಟೋ ವ್ಯಕ್ತಿಗಳ ಬಗೆಗೆ ಅವರು ನಾವು ತಿಳಿಯದಿರುವ ಅನೇಕ ಸಂಗತಿಗಳನ್ನು ತಿಳಿಸಿಕೊಟ್ಟಿದ್ದಾರೆ. ಅವರು ಮುಂಬಯಿಯಲ್ಲಿ ನೆಲೆನಿಂತು ವಿಭಿನ್ನ ಮನೋಧರ್ಮದ ಕನ್ನಡಿಗರನ್ನು ಒಂದೇ ಸೂತ್ರದಲ್ಲಿ ಹಿಡಿದು ಸಮೀಪಕ್ಕೆ ತಂದಿದ್ದಾರೆ. ಬೆಸುಗೆ ಬಿಡಿಸುವ ಜನ ಇದ್ದಾರೆ. ಆದರೆ ಸನದಿ ಅವರಂತೆ ಬೆಸುಗೆ ಕೂಡಿಸುವ ಜನ ಇಲ್ಲ.

ooo

'ಮಾನವ್ಯ ಕವಿ' ಶ್ರೀ ಬಿ. ಎ. ಸನದಿ

ಪ್ರೊ. ಬಿ. ವ್ಹಿ. ಗುಂಜೆಟ್ಟಿ

'ಮಾನವ್ಯಕವಿ' ಎಂಬ ಉಪಾಧಿಗೆ ಪಾತ್ರರಾಗಿರುವ ಕವಿ ಬಿ. ಎ. ಸನದಿ ಅವರು ಕನ್ನಡ ಸಾರಸ್ವತ ಪ್ರಪಂಚದ ಶ್ರೀಮಂತಿಕೆಯನ್ನು ಹೆಚ್ಚಿಸಿದ ಮಹಾನುಭಾವರು. ಕಥೆ, ನಾಟಕ, ವಿಮರ್ಶೆ, ವ್ಯಕ್ತಿಚಿತ್ರ, ಮಕ್ಕಳ ಸಾಹಿತ್ಯ, ಅನುವಾದ ಇವೇ ಮೊದಲಾದ ಸಾಹಿತ್ಯ ಪ್ರಕಾರಗಳಲ್ಲಿ ಕೃಷಿ ಮಾಡಿದ್ದರೂ ಸಾಹಿತ್ಯ ಪ್ರಪಂಚದಲ್ಲಿ ಅವರು 'ಕವಿಸನದಿ' ಎಂದೇ ಪ್ರಸಿದ್ಧರಾಗಿದ್ದಾರೆ. ಕರ್ನಾಟಕದ ಒಳಗೆ ಹಾಗೂ ಹೊರಗೆ ವಿಶೇಷ ಗೌರವ ಆದರಗಳಿಗೆ ಪಾತ್ರರಾಗಿದ್ದಾರೆ. ಪ್ರತಿಭೆ, ಪಾಂಡಿತ್ಯಗಳೊಡನೆ ಅಂತಃಕರಣ, ಸಹೃದಯತೆಗಳನ್ನಳವಡಿಸಿಕೊಂಡಿರುವ ಅವರು ಸರಳತೆ, ನಿರಾಡಂಬರಕ್ಕೆ ಇನ್ನೊಂದು ಹೆಸರಾಗಿದ್ದಾರೆ.

ಬೆಳಗಾವಿಯ ಸುಂದರ ಪರಿಸರದ ಪಕ್ಕದ ಹಳ್ಳಿ ಸಿಂದೊಳ್ಳಿ. ಅಲ್ಲಿ ಅಹಮ್ಮದ ಸಾಹೇಬನ ಅಕ್ಕರೆಯ ಸುಪುತ್ರನಾಗಿ ೧೮-೮-೧೯೩೩ ರಂದು ಜನಿಸಿದ ಮಗನೇ ಬಾಬಾಸಾಹೇಬ. ಬಾಲ್ಯದಲ್ಲಿಯೇ ತಾಯಿಯನ್ನು ಕಳೆದುಕೊಂಡ ಬಾಬಾಸಾಹೇಬನಿಗೆ ಅಹಮ್ಮದ ಸಾಹೇಬನೇ ತಂದೆ-ತಾಯಿ ಎರಡೂ ಆಗಿ ಅಕ್ಕರೆಯಿಂದ ಬೆಳೆಸಿದರು. ಇವರ ಮನೆಯಮಾತು ಉರ್ದು ಆಗಿದ್ದರೂ ಹಳ್ಳಿಯ ಪರಿಸರದಲ್ಲಿ

ಓರಗೆಯವರೊಂದಿಗೆ ಕನ್ನಡವನ್ನೇ ಅಪ್ಪಿಕೊಂಡು ಆದರ್ಶ ನಿಜ ಕನ್ನಡಿಗರೆನಿಸಿದ್ದಾರೆ. ಜಾನಪದ ಕವಿ ಹಾಗೂ ಲಾವಣಿಕಾರರೂ ಆಗಿದ್ದ ತಂದೆಯ ಕವಿ ಹೃದಯವನ್ನು ಎಳೆವಯದಲ್ಲಿ ಬಳುವಳಿ ಪಡೆದು ಬೆಳೆದರು. ಸಿಂದೋಗಿಯ ಪ್ರಾಥಮಿಕ ಶಾಲೆಯಲ್ಲಿ ಬುದ್ಧಿಶಾಲಿ ವಿದ್ಯಾರ್ಥಿಯೆನಿಸಿದ್ದ ಅವರು ಮುಂದೆ ಬೆಳಗಾವಿಯ ಜಿ. ಎ. ಹಾಯಸ್ಕೂಲಿನಲ್ಲಿ ಮಿಂಚಿದರು. ಅನಂತರ ಲಿಂಗರಾಜ ಕಾಲೇಜಿನಲ್ಲಿ ತಮ್ಮ ಪ್ರತಿಭೆಯ ಬೆಳಗು ಹೊಮ್ಮಿಸಿದರು. ಕವಿ ಡಿ. ಎಸ್. ಕರ್ಕಿ, ಎಸ್. ಡಿ. ಇಂಚಲರಂಥ ಪ್ರಾಧ್ಯಾಪಕ ಕವಿಗಳ ಸಹಚರ್ಯದಲ್ಲಿ ಕಾವ್ಯ ಕನ್ನಿಕೆಯ ಕೈಹಿಡಿದರು. ಕಾಲೇಜಿನ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತ ಪ್ರಾಧ್ಯಾಪಕ ವೃಂದದ ಪ್ರೀತಿಯ ಶಿಷ್ಯರೆನಿಸಿ ೧೯೫೪ ರಲ್ಲಿ ಪದವಿ ಪರೀಕ್ಷೆಯಲ್ಲಿ ಉತ್ತಮ ದರ್ಜೆಯಲ್ಲಿ ಪಾಸಾದರು. ಮುಂದೆ ಶಿಕ್ಷಕ ತರಬೇತಿ ಪರೀಕ್ಷೆಯನ್ನು ಪಾಸುಮಾಡಿ ಬೆಡಕಿಹಾಳ-ಶಮನೇವಾಡಿಯ ಹೈಸ್ಕೂಲಲ್ಲಿ ಶಿಕ್ಷಕರಾದರು. ವಿದ್ಯಾರ್ಥಿಸ್ತೋಮದ ಮೆಚ್ಚಿನ ಮಾಸ್ತರರಾದರು. ಕೆಲಕಾಲಾನಂತರದಲ್ಲಿ ರಾಜ್ಯಸರಕಾರದ ಸಮಾಜ ಶಿಕ್ಷಣ ಇಲಾಖೆಯಲ್ಲಿ ಶಿಕ್ಷಣಾಧಿಕಾರಿಯಾಗಿ ಬೆಳಗಾವ ಜಿಲ್ಲೆಯ ರಾಯಭಾಗ ತಾಲೂಕಿನಲ್ಲಿ ಸೇವೆ ಸಲ್ಲಿಸಿದರು. ತದನಂತರ ಶ್ರೀಯುತರು ಬೆಂಗಳೂರಲ್ಲಿ ಕರ್ನಾಟಕ ಸರಕಾರದ ವಾರ್ತಾ ಇಲಾಖೆಯ ಪಂಚಾಯತ ರಾಜ್ಯ ಪತ್ರಿಕೆಯ ಸಂಪಾದಕೀಯ ವಿಭಾಗದಲ್ಲಿ ನೇಮಕಗೊಂಡರು. ಆ ಪತ್ರಿಕೆಯು ಹೊಸ ಆಯಾಮದೊಂದಿಗೆ ವಿನ್ಯಾಸದೊಂದಿಗೆ ಸುಂದರವಾಗಿ ಪ್ರಕಟಗೊಳ್ಳುವುದಕ್ಕೆ ಕಾರಣರಾದರು. ಶ್ರೀಯುತರು ಇಲ್ಲಿಯೂ ಬಹುಕಾಲ ನಿಲ್ಲದೆ ಭಾರತ ಸರಕಾರದ ವಾರ್ತಾ ಇಲಾಖೆಯಲ್ಲಿ

ಕ್ಷೇತ್ರ ಪ್ರಚಾರಾಧಿಕಾರಿಯಾಗಿ ನೇಮಕಗೊಂಡರು. ಕಲಬುರ್ಗಿ ವಿಭಾಗದಲ್ಲಿ ಜನಾನುರಾಗಿಯಾಗಿ ಕಾರ್ಯನಿರ್ವಹಿಸಿದರು. ಅಲ್ಲಿಂದ ಮುಂದೆ ಬಡತಿ ಪಡೆದುಕೊಂಡು ೧೯೬೮ ರಲ್ಲಿ ಕ್ಷೇತ್ರ ಪ್ರದರ್ಶನಾಧಿಕಾರಿಯಾಗಿ ಗುಜರಾತದ ಅಹಮದಾಬಾದಿಗೆ ಹೋದರು. ತದನಂತರ ಮಹಾರಾಷ್ಟ್ರ, ಗೋವಾ ರಾಜ್ಯಗಳಿಗೂ ವರ್ಗವಾಗಿ ಹೋಗಿ ಪ್ರಶಂಸನೀಯವಾದ ರೀತಿಯಲ್ಲಿ ಕೆಲಸಗೈದು ಯಶಸ್ವಿಯಾದರು. ಅಲ್ಲಿಂದ ಮುಂದೆ ಮುಂಬೈ ಮತ್ತು ಪಣಜಿ ಆಕಾಶವಾಣಿ ಕೇಂದ್ರಗಳಿಗೆ ವರ್ಗವಾಗಿ ಹೋಗಿ ಕಾರ್ಯಕ್ರಮ ನಿರ್ವಹಣಾಧಿಕಾರಿಗಳಾಗಿ ಗಣನೀಯವಾಗಿ ಸೇವೆಸಲ್ಲಿಸಿ ೩೧ ಅಗಷ್ಟ ೧೯೯೧ ರಲ್ಲಿ ನಿವೃತ್ತಿ ಹೊಂದಿದರು.

ಶ್ರೀ ಸನದಿ ಅವರು ಮುಂಬಯಿ ಆಕಾಶವಾಣಿ ಕೇಂದ್ರದಲ್ಲಿ ಕನ್ನಡದ ಕಾರ್ಯಕ್ರಮಗಳಿಗೆ ವಿಶೇಷ ಜೀವಕಳೆ ತುಂಬಿದರು. ಕನ್ನಡ ಕಾರ್ಯಕ್ರಮದ ಮೌಲಿಕತೆಯನ್ನು ಹೆಚ್ಚಿಸಿದರು. ಹೊಸ ಹೊಸ ಪ್ರತಿಭೆಗಳನ್ನು ಗುರುತಿಸಿದರು. ಬೆಳೆಯಲನುವೂ ಮಾಡಿದರು. ಅವರ ನಿಸ್ಪೃಹ-ನಿರ್ವ್ಯಾಜ, ನಿರ್ಮತ್ಸರ ಸೇವೆಯನ್ನು ಗುರುತಿಸಿದ ಮುಂಬೈ ಕನ್ನಡಿಗರು ಅವರನ್ನು ಈಗಲೂ ತಮ್ಮ ಮಾರ್ಗದರ್ಶಕನೆಂಬಂತೆ ಪ್ರೀತಿ ಗೌರವಗಳಿಂದ ಕಾಣುತ್ತಲಿದ್ದಾರೆ. ಅವರನ್ನು ಮುಂಬಯಿಯಲ್ಲಿಯೇ ನಿವೃತ್ತಿಯ ನಂತರವೂ ಉಳಿಸಿಕೊಳ್ಳಬೇಕೆಂಬ ಹಂಬಲದ ಮುಂಬಯಿ ಕನ್ನಡಿಗರು ಒಲ್ಲದ ಮನಸ್ಸಿನಿಂದ ಕುಮಟಾಕ್ಕೆ ಬೀಳ್ಕೊಟ್ಟರೆಂಬುದು ಎಲ್ಲರಿಗೂ ತಿಳಿದ ವಿಷಯ. ಬಹುಶಃ ಈ ರೀತಿಯಾಗಿ "ಇವ ನಮ್ಮವ, ಇವ ನಮ್ಮವ, ಇವ ನಮ್ಮವ" ಎಂದು ಮುಂಬಯಿ ಮರಾಠಿಗರ ಹಾಗೂ ಕನ್ನಡಿಗರ ಮನಸ್ಸುಗಳನ್ನು ಗೆದ್ದ "ಸರಕಾರಿ ಅಧಿಕಾರಿ(ನೌಕರ)ಯಾದವರು ವಿರಳ" ಎಂದು ಹೇಳಿದರೆ

ತಪ್ಪಾಗಲಾರದು. ಶ್ರೀ ಸನದಿ ಅವರು ಇದು ವರೆಗಿನ ತಮ್ಮ ಬಾಳದಾರಿಯಲ್ಲಿ ಎಲ್ಲೆಲ್ಲಿ ಸೇವೆಯನ್ನು ಸಲ್ಲಿಸಿ ಬಂದಿರುವರೋ ಅಲ್ಲೆಲ್ಲ ತಮ್ಮ ಕಾರ್ಯದಕ್ಷತೆಯ ಛಾಪು ಮೂಡಿಸಿದ್ದಾರೆ. ಸ್ಥಳೀಯರ ಪ್ರೀತಿ ವಿಶ್ವಾಸಗಳನ್ನು ಗಳಿಸಿ ಆದರ್ಶರೆನಿಸಿದ್ದಾರೆ.

ಶ್ರೀ ಸನದಿ ಅವರು ಬಾಲ್ಯದಿಂದಲೇ ಕವಿಹೃದಯ ಕಸಿವೊಡೆದು ಬೆಳೆದವರು. ಎಳೆಯರಿರುವಾಗಲೇ ತಂದೆಯವರು ಹಾಡುತ್ತಿದ್ದ ಜಾನಪದ ಹಾಡುಗಳಿಗೆ, ಲಾವಣಿ ಹಾಡುಗಳ ಗತ್ತುಗಳಿಗೆ ತನ್ಮಯಗೊಂಡು ಮನಸ್ಸು ಮಾರುಗೊಟ್ಟವರು. ಆ ಹಾಡುಗಳ ಹೃದ್ಯತೆಗೆ ತಲೆದೂಗಿದವರು. ತಾವೂ ಪದಗಳೆಂಬ ಮಣಿಗಳನ್ನು ಭಾವವೆಂಬ ದಾರದಲ್ಲಿ ಪೋಣಿಸಿ ಹಾಡಲೆತ್ನಿಸಿದರು. ಹಿರಿಕವಿಗಳ ಹಾರೈಕೆ ಹೊತ್ತು ಕವನ ಕೃಷಿಗೈದರು. ಯುವಕವಿಯಾಗಿ ಬೆಳೆದರು. ಹಿರಿಕವಿಯಾಗಿ ಬೆಳಗಿದರು. ತಮ್ಮ ಮೇಲೆ ಪ್ರಥಮ ಹಂತದಲ್ಲಿ ಪ್ರಭಾವ ಬೀರಿದ ಕವಿಗಳನ್ನೂ ಸಹ ಮೀರಿ ಬೆಳೆದು ಹೆಸರು ಮಾಡಿದರು. ವಿದ್ಯಾರ್ಥಿದೆಸೆಯಿಂದಲೇ ತಮ್ಮನ್ನು ಕನ್ನಡದ ಚಟುವಟಿಕೆಗಳಿಗೆ ಸಮರ್ಪಿಸಿಕೊಂಡು, ಮರಾಠಿ ವಾತಾವರಣಕ್ಕೆದುರೆಣಿಸಿ ಕನ್ನಡದ ಕಂಪು ಹರಡಿ ಹೊಮ್ಮಿಸಿದವರು. ಅದನ್ನು ಇಂದೂ ತ್ರಿಕರಣಪೂರ್ವಕವಾಗಿ ಅನುಸರಿಸಿ ನಡೆದಿಹರು.

ಶ್ರೀ ಬಿ. ಎ. ಸನದಿ ಅವರು ಸಾಹಿತ್ಯರಂಗದ ಯಾವುದೇ ಪಂಥವಾಗಲಿ ಮಠಕ್ಕಾಗಲಿ ಅಂಟಿಕೊಳ್ಳದೆ 'ಮನುಜಮತ'ವೇ ತಮ್ಮ ಧ್ಯೇಯವನ್ನಾಗಿಸಿಕೊಂಡು ಬದುಕು ಸಾಗಿಸುತ್ತಿಹರು. ಒಂದು ಕಡೆ ಸರಕಾರದ ಸೇವೆ, ಇನ್ನೊಂದುಕಡೆ ಸಮಾಜಸೇವೆ. ಈ ಎರಡನ್ನೂ ತಮ್ಮ ಎರಡು ಕಣ್ಣಾಗಿಸಿಕೊಂಡು ಕಾರ್ಯಮಾಡಿದರೂ

ಅಂತರಂಗದಲ್ಲಿ 'ಕಾವ್ಯದ ಕಣ್ಣ'ನ್ನು ಅರಳಿಸಿಕೊಂಡಿದ್ದಾರೆ. ಅಂತೆಯೆ ಅವರ ಕಾವ್ಯದಲ್ಲಿ ಅವರಿವರೆನ್ನುವ ಭೇದವನೆಣಿಸದೆ ಅಖಂಡ 'ಭಾರತೀಯ ಭ್ರಾತೃತ್ವದ' ಭಾವವನ್ನು ಕಂಡುಕೊಳ್ಳಬಹುದಾಗಿದೆ. 'ಮಾನವತೆ'ಯ ಮೇಲ್ಮೆಯನ್ನು ಗುರುತಿಸಬಹುದುದಾಗಿದೆ.

ಶ್ರೀ ಬಿ. ಎ. ಸನದಿ ಅವರು ಕನ್ನಡದ ಶ್ರೇಷ್ಠ ಹಿರಿಯ ಕವಿಗಳೆನಿಸಿರುವಂತೆ ಹೃದ್ಯವಾದ ಗದ್ಯ ವೈಚಾರಿಕ ಲೇಖಕರಾಗಿದ್ದಾರೆ. ಸಹೃದಯ ವಿಮರ್ಶಕರಾಗಿದ್ದಾರೆ, ಸೃಜನಶೀಲ ಉತ್ತಮ ಬರಹಗಾರರಾಗಿದ್ದಾರೆ, ಮನೋಜ್ಞ ಕಥೆಗಾರರಾಗಿದ್ದಾರೆ. ಪರಿಣತ ನಾಟಕಕಾರರಾಗಿದ್ದಾರೆ. ಹೃದ್ಯ ವ್ಯಕ್ತಿಚಿತ್ರಗಳ ಪೆನೊರಮಾದ ನಿರ್ಮಾತೃವಾಗಿದ್ದಾರೆ. ಎಳೆಯ ಮನಸ್ಸುಗಳನ್ನು ತಟ್ಟುವ ಮುಟ್ಟುವ ಮಕ್ಕಳ ಸಾಹಿತ್ಯ ಸೃಷ್ಟಾರರಾಗಿದ್ದಾರೆ, ಬಹುಶ್ರುತ ಉತ್ತಮ ಅನುವಾದಕರೂ ಆಗಿದ್ದಾರೆ. ಸಮರ್ಥ ಸಂಪಾದಕರಾಗಿದ್ದಾರೆ. ಇವೆಕ್ಕೆಲ್ಲ ಕಳಶವಿಟ್ಟಂತೆ ಶ್ರೀಯುತರು ಕಿರಿಯ ಯುವಬರೆಹಗಾರರಿಗೆ ಉತ್ತೇಜಕರಾಗಿರುವುದಲ್ಲದೆ ಮಾರ್ಗದರ್ಶಕರೂ ಆಗಿದ್ದಾರೆ. ಸಾಹಿತ್ಯಿಕ ಸಂಘ-ಸಂಸ್ಥೆಗಳೊಂದಿಗೆ ನಂಟು ಬೆಳೆಸಿಕೊಂಡು ಆ ಸಂಸ್ಥೆಗಳನ್ನು ಬೆಳೆಸಿದ್ದಾರೆ. ಜೊತೆಗೆ ತಾವೂ ಬೆಳೆದಿದ್ದಾರೆ. 'ಮಾನವ್ಯ'ಕವಿ ಎಂಬ ಉಪಾಧಿಗೂ ಪಾತ್ರರಾಗಿದ್ದಾರೆ. ಶ್ರೀ ಸನದಿ ಅವರು ದೇಶದ ನಾನಾ ಭಾಗಗಳನ್ನು ಸುತ್ತಿರುವುದಲ್ಲದೆ, ವಿದೇಶ ಸಂಚಾರವನ್ನು ಕೈಕೊಂಡು ತಮ್ಮ ಅಸ್ಖಲಿತವಾದ ವಾಣಿಯಿಂದ ಬಹುಶ್ರುತವಾದ ಪಾಂಡಿತ್ಯದಿಂದ ಜನಮನವನ್ನು ಗೆದ್ದಿದ್ದಾರೆ. ಜೊತೆಗೆ ತಮ್ಮ ವ್ಯಕ್ತಿತ್ವವನ್ನೂ ವಿಕಸಿಸಿಕೊಂಡಿದ್ದಾರೆ.

ಶ್ರೀ ಬಿ. ಎ. ಸನದಿ ಅವರು ೧೯೮೯ ರ ಕಾಲಕ್ಕಾಗಲೇ ಮುಂಬೈ ಠಾಣೆ ಪರಿಸರದ ವಿಕಲಾಂಗ ಕವಿಗಳನ್ನು ಸೇರಿಸಿ ಮುಂಬಯಿಯಲ್ಲಿ

ಕವಿಸಮ್ಮೇಳನವನ್ನು ಏರ್ಪಡಿಸಿ ಯಶಸ್ವಿಗೊಳಿಸಿದುದು ಆಕಾಶವಾಣಿಯ ಚರಿತ್ರೆಯಲ್ಲಿನೇ ಪ್ರಥಮವಾದದ್ದೆಂದು ದಾಖಲಿಸುವಂತಹದಾಗಿದೆ. ಹಾಗೆಯೇ ನಮ್ಮ ಕರ್ನಾಟಕ ವಿದ್ಯಾವರ್ಧಕ ಸಂಘದ ಸಹಯೋಗದೊಂದಿಗೆ ಮುಂಬಯಿ ಕನ್ನಡ ಸಂಘದ ಮೂಲಕ ಒಂಬತ್ತುದಿನಗಳ ಕಾಲ ನಿರಂತರ 'ಕನ್ನಡ ಸಮ್ಮೇಳನ'ವನ್ನು ಯಶಸ್ವಿಗೊಳಿಸಲು ಕಾರಣರಾದರೆಂಬುದೂ ಇತಿಹಾಸದಲ್ಲಿ ದಾಖಲಿಸುವಂತಹದಾಗಿರುವುದು ಸತ್ಯ. ಶ್ರೀಯುತರು ನಮ್ಮ ಸಂಘದ ಗೌರವ ಉಪಾಧ್ಯಕ್ಷರಾಗಿ ಧಾರವಾಡ-ಮುಂಬೈಗಳ ಕನ್ನಡ ಸಂಘಗಳನ್ನು ಬೆಸೆದು 'ಕನ್ನಡ ಸಮ್ಮೇಳನ' ಅಭೂತವೆನ್ನುವಂತೆ ಜರುಗಿಸಲು ಕಾರಣರಾದುದನ್ನು ನಾವು ಅತ್ಯಂತ ಕೃತಜ್ಞತೆಯಿಂದ ನೆನೆಯುತ್ತೇವೆ.

ಮುಂಬೈ ಆಕಾಶವಾಣಿ ಸೇವೆಯಿಂದ ೧೯೮೧ ರ ಅಗಷ್ಟ ತಿಂಗಳಲ್ಲಿ ನಿವೃತ್ತರಾದ ಮೇಲೆಯೂ ಶ್ರೀಯುತರು ಮುಂಬಯಿಯಲ್ಲಿಯೇ ಸುಮಾರು ೧೨ ವರ್ಷಗಳಕಾಲ ನೆಲೆನಿಂತು ಕನ್ನಡವನ್ನು ಕಟ್ಟುವ, ಬೃಹತ್ ಮುಂಬಯಿಯ ಬೇರೆ ಬೇರೆ ಭಾಗಗಳಲ್ಲಿರುವ ಕನ್ನಡ ಸಂಘಟನೆಗಳಿಗೆ ಶಕ್ತಿಸಂಜೀವಿನಿಯಾಗಿ ಬೆಳೆಸುವ, ಕನ್ನಡಿಗರ ಮನಸ್ಸುಗಳನ್ನು ಬೆಸೆಯುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರೆಂಬುದು ತಿಳಿದು ಬರುತ್ತದೆ. ಬೃಹನ್ ಮುಂಬಯಿ ಕನ್ನಡ-ಕನ್ನಡೇತರ ಸಂಘಟನೆಗಳೊಂದಿಗೆ ಅವರು ಪಡೆದ ಸಂಬಂಧ ಯಾರನ್ನೂ ವಿಸ್ಮಯಗೊಳಿಸುವಂತಹದಾಗಿದೆ.

ಕವಿ ಶ್ರೀ ಬಿ. ಎ. ಸನದಿ ಅವರು ಇದುವರೆಗೆ, ೧೭ ಕವನ ಸಂಕಲನಗಳನ್ನು ಒಂದು ಇಂಗ್ಲೀಷ ಕವನ ಸಂಕಲನವನ್ನು, ೩ ಕಥಾ

ಸಂಕಲನಗಳನ್ನು ೩ ವಿಮರ್ಶಾಗ್ರಂಥಗಳನ್ನು, ೨ ನಾಟಕಗಳನ್ನು, ೫ ಶಿಶುಸಾಹಿತ್ಯಕೃತಿಗಳನ್ನು, ೧ ಹರಟೆಯನ್ನು, ೫ ಸಂಪಾದನ ಗ್ರಂಥವನ್ನು, ಒಂದು ವ್ಯಕ್ತಿಚಿತ್ರಗಳನ್ನೊಳಗೊಂಡ ಕೃತಿಯನ್ನು, ಎಂಟು ಅನುವಾದ ಕೃತಿಗಳನ್ನು ನೀಡಿದ್ದಾರೆ. ಇನ್ನೂ ನೀಡುವ ಛಲವನ್ನು ಹೊಂದಿದ್ದಾರೆ. ಅವರ ಪ್ರತಿಭೆ ಇಂಗಿಲ್ಲ. ಕಲ್ಪನೆ ಮಾಸಿಲ್ಲ. ಚಿಂತನೆ ಉಡುಗಿಲ್ಲ, ಅನುಭವ ಬತ್ತಿಲ್ಲ, ಬಹುಶ್ರುತ ಓದು ನಿಂತಿಲ್ಲ, ವೈಚಾರಿಕತೆ ಮಾಸಿಲ್ಲ. ಈ 'ಬಿ.ಎ. ಸನದಿತನ' ಅವರ ಕಾವ್ಯ-ಸಾಹಿತ್ಯವನ್ನು ಶ್ರೀಮಂತಗೊಳಿಸಿದೆ. ಹಲವಾರು ಪ್ರಶಸ್ತಿಗಳನ್ನು ಪಡೆದುಕೊಳ್ಳಲು ಕಾರಣವಾಗಿದೆ. ರಾಜ್ಯಸಾಹಿತ್ಯ ಪ್ರಶಸ್ತಿ ಇರಲಿ, ಕಾವ್ಯಾನಂದ ಪುರಸ್ಕಾರವಿರಲಿ, ಭಾರತ ಸರಕಾರದ ಪುರಸ್ಕಾರವಿರಲಿ, ಚಿತ್ತರಗಿ-ಇಳಕಲ್‌ಮಠದ ವೀರಶೈವ ಸಾಹಿತ್ಯ ಪ್ರಶಸ್ತಿ, ಪ್ರೊ. ಭೂಸನೂರಮಠ ಪ್ರತಿಷ್ಠಾನ ಪ್ರಶಸ್ತಿ, ಗೊರೂರು ಪ್ರತಿಷ್ಠಾನ ಸಾಹಿತ್ಯ ಪ್ರಶಸ್ತಿ, ರಾಜ್ಯಸಾಹಿತ್ಯ ಅಕೆಡಿಮಿ ಪ್ರಶಸ್ತಿ, ಯಕ್ಸಂಬಾ ಗೆಳೆಯರ ಬಳಗದ ಕನ್ನಡ ಕುಲಭೂಷಣ ಪ್ರಶಸ್ತಿ, ಭಟ್‌ನಾಗರ ಟ್ರಸ್ಟ ಪ್ರಶಸ್ತಿ, ಸರ್ ಎಂ. ವಿಶ್ವೇಶ್ವರಯ್ಯ ಟ್ರಸ್ಟಿನ ನವರತ್ನ ಪ್ರಶಸ್ತಿ, ಸಂದೇಶಪ್ರಶಸ್ತಿ, ಮರಾಠಿ ಜಾನಪದ ಸಾಹಿತ್ಯ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಹೀಗೆ ಹಲವು ಹತ್ತು ಪ್ರಶಸ್ತಿಗಳು ಅವರನ್ನಲಂಕರಿಸಿದ್ದರೂ ಕಿಂಚಿತ್ತು ಸೊಕ್ಕು-ಆಢ್ಯತೆಗಳು ಅವರ ಬಳಿ ಸುಳಿದಿಲ್ಲ. 'ಬಾಗಿದ ತಲೆ, ಮುಗಿದ ಕೈ' ಅವರ 'ಮಾನವ್ಯಕವಿ' ಉಪಾಧಿಗೆ ಸಾಕ್ಷಿಯಾಗಿದೆ.

ಪತಿ ಸನದಿ ಅವರ ಶ್ರೇಯಸ್ಸಿಗೆ ಕಾರಣರಾದ ಪತ್ನಿ, ತಂದೆ ಸನದಿ ಅವರ ಕೀರ್ತಿಗೆ ಕಾರಣರಾದ ಮಕ್ಕಳು, ಸೊಬಗಿನ್ನೈಸಿರಿಯಿಂದ ಕೂಡಿದ 'ಕುಮಠಾ'ದ ಕಡಲತಡಿ ಪ್ರಕೃತಿ, ಓದಲು ಗ್ರಂಥರಾಶಿ, ಸಂಭಾಷಿಸಲು ನಾಡೆಲ್ಲ ಸಹೃದಯ ಬಳಗ ಪಡೆದುಕೊಂಡಿರುವ ಕವಿ.

ಬಿ. ಎ. ಸನದಿ ಸರ್ವಜ್ಞ ಕವಿ ಹೇಳಿದಂತೆ 'ಸ್ವರ್ಗಕ್ಕೆ ಕಿಚ್ಚು ಹಚ್ಚಿಂದರೇನೂ ಆಶ್ಚರ್ಯಪಡಬೇಕಿಲ್ಲ'. ಬದುಕಿನ ಬಗ್ಗೆ ಗಾಢವಾದ ಅನುರಕ್ತಿಯನ್ನೂ ಮಾನವೀಯ ಸಂಬಂಧಗಳ ಬಗ್ಗೆ ಅದಮ್ಯವಾದ ಶ್ರದ್ಧೆಯನ್ನೂ ಉಳಿಸಿಕೊಂಡು ಬಂದ 'ಸನದಿಯಂಥವರು ಸಾಹಿತ್ಯಿಕವಾಗಿ ಮಾತ್ರವಲ್ಲ, ಸಾಂಸ್ಕೃತಿಕವಾಗಿಯೂ ನಮಗೆ ಮುಖ್ಯರಾಗುತ್ತಾರೆ' ಎಂದು ಕವಿ ಡಾ. ಜಿ. ಎಸ್. ಶಿವರುದ್ರಪ್ಪನವರು ಹೇಳಿದ ಮಾತುಗಳು ಕವಿ ಸನದಿ ಅವರ ವ್ಯಕ್ತಿತ್ವಕ್ಕೆ ಬರೆದ ವ್ಯಾಖ್ಯಾನದಂತಿವೆ.

ಶ್ರೀ ಬಿ. ಎ. ಸನದಿ ಅವರು ಆರೋಗ್ಯ ಭಾಗ್ಯದೊಂದಿಗೆ ನೂರು ವಸಂತಗಳನ್ನು ಕಾಣಲಿ, ಕನ್ನಡ ಸಾರಸ್ವತಕ್ಕೆ, ಸಂಸ್ಕೃತಿಗೆ ಅನುಪಮವಾದ ಕೊಡುಗೆಗಳನ್ನು ಇನ್ನೂ ನೀಡುತ್ತ ಇರಲಿ ಎಂದು ಹಾರೈಸುವೆ.

೦೦೦

ಬಿ. ಎ. ಸನದಿಯವರ ಕಾವ್ಯದಲ್ಲಿ ಪ್ರಕೃತಿ, ಸಂಸ್ಕೃತಿ ಅನ್ವೇಷಣೆ

ಡಾ. ಶ್ಯಾಮಸುಂದರ ಬಿದರಕುಂದಿ

ಸಂಪನ್ನ ಜೀವನದ ಸ್ವಪ್ನಗಳ ಸತ್ಯತೆಯ
ಶೋಧನೆಯ ಸತ್ಪಥದಿ ಸಾಗುವವನು
....
ಜೀವನದ ವಿಕಸನಕೆ ಮೇಣ್‌ಜಗದ ಸಂತಸಕೆ
ಹಾಡುವುದೆ ಕವಿಗಿರುವುದೊಂದೆ ಧರ್ಮ.

(ಕವಿ : ೫೪ - ೫೫ ಪು.)

ಕವಿ ಬಾಬಾಸಾಹೇಬ ಅಪ್ಪಾಸಾಹೇಬ ಸನದಿಯವರ ಜೀವನ ಕಾವ್ಯದ ತುಂಬ ಭಾವುಕ ಪ್ರಕೃತಿ ಮತ್ತು ಬೌದ್ಧಿಕ ಸಂಸ್ಕೃತಿ ರೂಪುಗೊಂಡ ರೀತಿಗೆ, ಪ್ರಕಟಗೊಂಡ ನೀತಿಗೆ ಅವರ ಐನೂರಾ ಮೂವತ್ತೊಂದು ಕವಿತೆಗಳ 'ಸೂರ್ಯಪಾನ' ಸಂಕಲನ ಉತ್ತಮ ಸಾಕ್ಷಿಯಾಗಿದೆ. ಮೂವತ್ತೈದು ವರ್ಷದ ಕಾಲ, ಸನದಿಯವರು ಹುಟ್ಟು ನಾಡಿನಲ್ಲಿರಲಿ, ಹೊರನಾಡಿನಲ್ಲಿರಲಿ ಕವಿತೆಯೊಂದಿಗೆ ಬಾಳಿ, ವ್ಯವಹಾರದ ಬದುಕಿನಲ್ಲಿ ಕವಿತೆಯನ್ನೇ ನೋಡಿ, ಕನ್ನಡ ನುಡಿಯನ್ನೇ ಉಂಡು ಬೆಳೆದಿದ್ದಾರೆ. ಸೂರ್ಯಪಾನ ಹೂವಿನಂತಹ ಅವರ ವ್ಯಕ್ತಿತ್ವ ಸದಾ ಬೆಳಕು ಮತ್ತು ಬಿಸಿಲನ್ನು ಹೀರಿ

ಗಟ್ಟಿಗೊಳ್ಳಲು ಜೀವನ ಸೂರ್ಯನತ್ತಲೇ ಮುಖವನ್ನು ಹೊರಳಾಡಿಸಿದೆ. ರಮ್ಯ, ಬಂಡಾಯ, ನವ್ಯದ ಗುರುತು ಚೀಟಿಗಳನ್ನಂಟಿಸಿ ಸನದಿಯವರ ಕಾವ್ಯಕ್ಕೆ ಯಾವುದೇ ಶೈಕ್ಷಣಿಕ ಮಿತಿಯನ್ನು ಹಾಕಲು ರಸಿಕ ಮನಸ್ಸೆಂದೂ ಒಪ್ಪದು. ತೆರೆದ ಮನಸ್ಸಿನ ಉದಾರ ಧ್ಯೇಯ - ಧೋರಣೆಯ ಅವರ ಕಾವ್ಯದ ಹಿಂದಿರುವ ಚಿಂತನೆ ಹೀಗಿದೆ :

> ನಾ ನಂಬಿಕೊಂಡಿರುವ ನೆಲ ಮುಗಿಲ ಸಂಸಾರ
> ಇಂದು ನಿನ್ನೆಯದಲ್ಲ
> ನಾಳೆ ಮುಗಿಯುವುದಲ್ಲ
> ಸೃಷ್ಟಿಯಲಿ ನಡೆಯುವೀ
> ಸೃಷ್ಟಿಕ್ರಿಯೆಗಳಿಗೆಲ್ಲ
> ಸೂರ್ಯಚೇತನವುಳಿದು ಅನ್ಯ ಗತಿಯಿಲ್ಲ!

ರಮ್ಯಭಾವವಿದ್ದರೂ ಗುಂಗಿನಲಿ ಮೈಮರೆತ ಪದ - ಪದ್ಯ ಸರಣಿ ಸನದಿಯವರಲ್ಲಿ ಕಾಣದು ; ನವ್ಯ ವಿಚಾರವಿದ್ದರೂ ಬುದ್ಧಿಯ ಅರಳುವಿಕೆ, ಕೆರಳುವಿಕೆಯಿಂದಲೂ ಇವರು ದೂರ. ಸಂಸ್ಕರಣಗೊಂಡ ಮನೋಬುದ್ಧಿಯ ಯಾವುದೇ ಕವಿಯನ್ನು ಪ್ರಕೃತಿ ಸಹಜ ಹೆಣ್ಣು - ಗಂಡು ಲಿಂಗಭೇದದಿಂದ ಕಾಣಲಾಗದು. ಸ್ತ್ರೀಯಿರಲಿ, ಪುರುಷನಿರಲಿ ಪ್ರಕೃತಿಯ ಸತ್ಯ ಶಿವ ಸುಂದರದ ಗುಣಲಕ್ಷಣಗಳನ್ನು ಪಡೆದ ಕವಿ ಒಬ್ಬ ಪುರುಷನೇ. ನುಡಿಯ ಸೃಷ್ಟಿಕರ್ತ ಪುರುಷನು ಸ್ತ್ರೀರೂಪದ ಪ್ರಕೃತಿಯಲ್ಲಿ ಕಾಣುವ ಹೊರ ಚೆಲುವನ್ನು ಅದರಿಂದ ಒಳಗೆ ತನ್ನೊಳಗೆ ಉಂಟಾದ ಆನಂದವನ್ನು ಪ್ರಕಟಗೊಳಿಸಲು ಪಡುವ ತವಕವೇ ಕವನವಾಗುತ್ತದೆ. ಕವಿಗಿರುವುದು, ಕಾಣುವ ಪಡೆಯುವ ಸ್ವಂತ ಸತ್ವ, ಒಳ ತುಡಿತ. ಪಾರ್ವತಿಯ 'ಶಕ್ತಿ'ಯನ್ನು ಆತ್ಮೀಕರಿಸಿಕೊಂಡ ಪರಮೇಶ್ವರನು ಅರ್ಧನಾರೀಶ್ವರನಾಗಿ

'ನಟರಾಜ'ನಾಗಿ ಪರಿವರ್ತನೆಗೊಂಡು ನರ್ತಿಸುವುದು ಆನಂದದ ಉತ್ಕರ್ಷದಲ್ಲಿ; ಉತ್ಕಟತೆಯಲ್ಲಿ. ಹೆಂಗರುಳನ್ನು ಅಂತರ್ಗತ ಮಾಡಿಕೊಂಡ ಕವಿಯಲ್ಲಿ ಮಾರ್ದವ ಗುಣವಿರುವುದರಿಂದಲೇ ಕವಿತೆಯ ನುಡಿ, ಶೈಲಿ, ಮೃದುಪದ ಬಂಧದಿಂದ; ದೇಸೀ ಛಾಯೆ, ಶಿಷ್ಟತೆಯ ಅಲಂಕಾರದುಡಿಗೆಯಿಂದ ಕಂಗೊಳಿಸುವುದು. ಇದೇ ಕಲ್ಪನೆಯನ್ನು ಬೇಂದ್ರೆಯವರು ಒಂದು ಸೊಗಸಾದ ಪ್ರತಿಮೆಯ ನಿರ್ಮಾಣದಿಂದ ಮನಗಾಣಿಸಿದ್ದಾರೆ :

ಸಿಂಹ ಮುಖಕ್ಕಿದೆ ನವಿಲಿನ ಸೋಗೆ
ಶಕ್ತಿ ಶಾರದೆಯ ಮೇಳದ ಹಾಗೆ.

ಪುರುಷಸಿಂಹನ ಬೆನ್ನ ಮೇಲಿರುವ ಕೇಶರಾಶಿ ಬೇಂದ್ರೆ ಕಣ್ಣಿಗೆ ನವಿಲಿನ ಸುಂದರ ಸೋಗೆ (ಗರಿ)ಯಾಗಿ ಕಂಡದ್ದು ಚೆಲುವಿನ ದಿಟ, ದಿಟ್ಟ ದರ್ಶನದಿಂದಾಗಿ. ಕಾವ್ಯಸೃಷ್ಟಿಯಲ್ಲಿ ನಿಮಗ್ನನಾದ ಕವಿ, ಹೊರ ಜಗತ್ತಿನ ಲಿಂಗ, ಬಣ್ಣ, ರೂಪ (ಆಕಾರ), ಜಾತಿ, ವರ್ಗ, ಅಂತಸ್ತುಗಳ ವ್ಯತ್ಯಾಸಗಳಿಂದ ಬಾಧಿತನಾಗದೆ ಪ್ರಕೃತಿಯ ಅಭಿನ್ನ ಶಕ್ತಿಯಾಗಿ, ಸಾಮಾಜಿಕತೆಯ ಉತ್ಪನ್ನವಾದ ಉಕ್ತಿಯ (ನುಡಿಗಾರಿಕೆಯ) ಸಹಚರಿಯಾಗಿಬಿಡುತ್ತಾನೆ.

ಸನದಿಯವರು ಕೃಷ್ಣಾನದಿಯ ದಡದಲ್ಲಿಯ ಪರಿಸರದಲ್ಲಿ ಹುಟ್ಟಿ, ನಿಸರ್ಗದ ಬಾಲಕನಂತೆ, ಸ್ನೇಹ ಸಹವಾಸದ ಆಪ್ತತೆಯಲ್ಲಿ ಬೆಳೆದವರು. ಗಡಿನಾಡ ಕನ್ನಡದ ಸಂಸ್ಕೃತಿ ಅವರಿಗೆ ರಕ್ತಗತ ಗುಣ. ನಿಸರ್ಗ ಸಹಜ ಪ್ರೀತಿ, ಸಾಮರಸ್ಯದ ಕ್ರಿಯೆ ಮತ್ತು ಸಂಸ್ಕೃತಿ ಸಹಜ ಸಹನೆ, ಸಹಕಾರದ ತಿಳಿವಳಿಕೆ ಅವರನ್ನು ಕವಿಯಾಗಿ ರೂಪಿಸಿದೆ. ಸ್ಥಳ, ವಾತಾವರಣ, ಉದ್ಯೋಗ ಮಾರ್ಗ ಬದಲಾದಾಗಲೂ ಸನದಿಯವರೊಳಗಿನ ಕವಿ ಆತ್ಮನಿಷ್ಠೆ ಬದಲಾಯಿಸಿದವನಲ್ಲ.

ಕವಿತೆಯ ಸಮಾಜದಲ್ಲಿ ಆಗಾಗ ಅಭಿವ್ಯಕ್ತಿಯ ಮಾರ್ಗ, ಶೈಲಿ ಬದಲಾದಾಗಲೂ ತನ್ನ ಸೃಜನಶೀಲ ಶಕ್ತಿ-ಯುಕ್ತಿಗಳನ್ನು ಅಂತಂತೆ ಮಾರ್ಪಡಿಸಿಕೊಂಡವನಲ್ಲ. ಸನದಿ ಕೂಡ ಒಮ್ಮೊಮ್ಮೆ ವ್ಯವಹಾರ ಪ್ರಪಂಚದ ಮನುಷ್ಯನಾಗಿ ತಮ್ಮ ಪ್ರಕೃತಿ, ಪ್ರವೃತ್ತಿಗೆ ಭಿನ್ನವಾದ ರೀತಿಯಲ್ಲಿ ಕವಿತೆಯನ್ನು ಕಟ್ಟಲಿಕ್ಕೆ ಹವಣಿಸಿದ್ದುಂಟು. ಅಂಥಲ್ಲಿ ಅವರಿಗೆ ಸಾರ್ಥಕತೆಯ ತೃಪ್ತಿ ಲಭಿಸದೇ ಹೋಗಿರುವುದನ್ನು ಒಪ್ಪಿಕೊಳ್ಳಲೇಬೇಕಾಗಿದೆ : "ಎಲಾ ಶ್ರಾವಣದ ಮೋಡಾ", "ನಾ", "ಸಾಕು", "ಕವಿ ಮತ್ತು ಯೋಜನೆ", "ನಾನಾರನೂ ದ್ವೇಷಿಸುವುದಿಲ್ಲ", "ನನ್ನ ಪಾಡಿಗೆ ನನ್ನ ಬಿಡು" ಮೊದಲಾದ ಕೆಲವು ಪದ್ಯಗಳು ಇವು ಎಣಿಸಿದರೆ ಹನ್ನೆರಡಾಗಬಹುದು – ಸನದಿಯವರ ಸಹಜ ರಚನೆಗಳಾಗಿ ಅನುಭವಕ್ಕೆ ತಾಗುವುದಿಲ್ಲ. ಇವು ವಾಚ್ಯರೂಪವಾಗಿ ರಚಿತವಾಗಿರಲು ಕಾರಣ ಅವು ಕವಿಯ ಅಂತರಂಗದಿಂದ ಹೊಮ್ಮದೇ ಬಾಹ್ಯ ಪ್ರತಿಕ್ರಿಯೆಗೆ ಮರುಪ್ರತಿಕ್ರಿಯೆಯಾಗಿ ವ್ಯಕ್ತವಾಗಲು ಹವಣಿಸಿದ್ದು. ಸಾಮಾಜಿಕತೆಗೆ ಕೊಡುವ ಪ್ರತಿಕ್ರಿಯೆಯು ಸಂಕೀರ್ಣ ಕಲ್ಪನೆಯಿಂದ, ಇತಿಹಾಸದ ವಿಶ್ಲೇಷಣೆಯಿಂದ ಮೂಡಿ ಬರಬೇಕಾಗಿರುತ್ತದೆ. ಹೀಗೆ ಮೂಡಿಸುವಾಗ ಕವಿತೆಯ ನಡೆ (ಛಂದಸ್ಸು), ನುಡಿ (ವಿನ್ಯಾಸ)ಗಳೆರಡೂ ಹೊಸ ಅವತಾರ ತಾಳಬೇಕಾದ್ದು ಅನಿವಾರ್ಯ. ವೈರುಧ್ಯಗಳನ್ನು ಸೆಣಸಾಡಲು ಹಚ್ಚುವ, ಸಂಘರ್ಷವನ್ನು ಅರ್ಥಪೂರ್ಣವಾಗಿಸಲು ಕಟುಮಧುರವಾದ ವ್ಯಂಗ್ಯ ವಿಡಂಬನೆಯ ಶೈಲಿ ಮತ್ತು ಸಶಕ್ತವಾದ, ಗದ್ಯಗಂಧಿಯಾದ (ಆದರೆ ರ್ಹೆಟರಿಕ್ ವಾಗ್ಮಿತೆಯೂ ಆಗದ) ಮಾತಿನ ರೀತಿ ಅದು. ನವ್ಯಕವಿಗಳಲ್ಲಿ ಕೆಲವರು ಈ ಮಾರ್ಗದಲ್ಲಿ ನಡೆದು, ಮುನ್ನಡೆ ಸಾಧಿಸಿ ತೋರಿಸಿದ್ದಾರೆ. ಸನದಿಯವರು ವೃತ್ತಿಯಿಂದ ಬೋಧಕರು,

ಯೋಜಕರು, ವಿಧಾಯಕ ಮಾರ್ಗದಲ್ಲಿ ಶಿಸ್ತು - ಸಂಯಮಗಳಿಂದ ಇತ್ಯಾತ್ಮಕ ಮೌಲ್ಯಗಳನ್ನು ಪುನರ್ ನೆಲೆಸುವಂತೆ ಆಶಿಸಿದವರು. ಭಾವನಾ ಪ್ರಮಾಣತೆ ಸನದಿಯವರ ಪ್ರವೃತ್ತಿಯ ಲಕ್ಷಣ. ಅದಕ್ಕೆ ಪ್ರಕೃತಿಯ ಪ್ರಾಮಾಣಿಕತೆ, ಸಂಸ್ಕೃತಿಯ ಸಮತೂಕ, ಸಾಮರಸ್ಯದ ಕಲ್ಪನೆಯನ್ನವರು ಪೋಷಿಸಿಕೊಂಡು ಮೆಲುವಾಗಿ ಘೋಷಿಸಿಕೊಂಡು ಬಂದಿದ್ದಾರೆ :

ಈ ಮೌನದಂಗಳದಲಿ ಬೆಳೆದ ಗಿಡ - ಮರಗಳಲಿ
ಕೊಂಬೆಗಳ ಕಂಗಳಲಿ ಹೂವು ಹಣ್ಣಾದಾಗ
ಬೇರು ಭೂಮಿಯ ಸತ್ವ ನಂಬುತ್ತದೆ
ಗಾಳಿ ಬಾಂದೊಡಲ ತುಂಬುತ್ತದೆ.

('ಶಬ್ದಸೃಷ್ಟಿ')

ಮತ್ತು 'ನಾನೋ ಲೋಕದ ನಡುವೆ ಅಂತರ್ಮುಖಿ' ಎಂದು ಮಿತಿಗೊಳ್ಳುವ ಸನದಿಯವರು

ಒಂದರೊಲು ಒಂದಿಲ್ಲವೆಂಬುದೇನೋ ದಿಟವು
ಒಂದರೊಳು ಕುಂದಿಲ್ಲವೆನ್ನುವುದೆ ಸಂಶಯವು
ಕೋಟಿ ಜನ ಕೋಟಿ ಮನ !
ಬಗೆ ಬೇರೆ ಬೇರೆ !
ಸರ್ವರಂತಃಶಕ್ತಿಗೊಂದೆ ತೆರನಭಿವ್ಯಕ್ತಿ
ಸಾಧ್ಯವಿಲ್ಲವು !

(ಒಲವು - ಗೆಲುವು)

ಈ ತಿಳಿವಳಿಕೆ ಅವರಲ್ಲಿ ಸದಾ ಬೆಳೆಯುತ್ತಿದೆ. ತಾನು ಮತ್ತು ಜಗತ್ತಿನ ಅಸ್ತಿತ್ವವನ್ನು ಸತ್ಯ(ವಾಸ್ತವ)ವೆಂದು ಸಾಧಿಸುವ; ವ್ಯವಹಾರ ಜೀವನದಲ್ಲಿ ಸುಂದರವಾದ, ಮಾನವೀಯವಾದ 'ಶಿವ' ಗುಣ-

ಮೌಲ್ಯವಿದೆಯೆಂದು ಒಪ್ಪುವ ಸಾಧಿಸುವ ಹಾಗೂ ಗ್ರಾಮೀಣ ಮತ್ತು ನಾಗರಿಕವಾದ ಸಂಸ್ಕೃತಿಯೊಂದು ರೂಪುಗೊಂಡಿದೆಯೆಂದು ಮೆಚ್ಚುವ ಕವಿಯಾಗಿ ಅವರು ಉಳಿದಿದ್ದಾರೆ.

ಕವಿ ಸನದಿಯವರು ಕವಿತೆಯಲ್ಲಿ ದಾಖಲು ಮಾಡುವ ಪ್ರಕೃತಿಯು ವಾಸ್ತವದ್ದು. ಮೊದಲು ತಾವಿದ್ದ 'ಶಮನೇವಾಡಿ' ಯನ್ನು ಮನದುಂಬಿ ವರ್ಣಿಸುವ ಐದು ಸ್ಟಾಂಜಾಗಳ ಒಂದು ಪದ್ಯವು ಕಣವಿಯವರ 'ಭಾವಜೀವಿ' ಕವಿತೆಯನ್ನು ನೆನಪಿಸುವಂತಿದೆ. ಇದು ನೆಲ, ಮುಗಿಲು, ಹೊಲ, ತೋಟಗಳ ಸಮೃದ್ಧಿ, ಚೆಲುವನ್ನು ಶಬ್ದ ಚಿತ್ರ ಮಾಡುವದಕ್ಕೆ ಸೀಮಿತವಿಲ್ಲ. ಪ್ರಕೃತಿಯ ಮುಗ್ಧತೆ, ಒಳಿತಿನ ನಿಲುವು ಜನ ಸಮುದಾಯದಲ್ಲಿಯೂ ಪ್ರತಿಫಲಿತವಾಗಿದೆಯೆಂದು ಕವಿ ಗುರುತಿಸುತ್ತಾರೆ.

ಜನರಲಿ ಮಮತೆಯು ಜೀವನ ಸಮತೆಯು
ತನ್ನಿಂತಾನಾಗಿರೆ ಬೋಧ್ಯ
ಶಮನೇವಾಡಿಯ ಸವಿ - ಸೊಗಬಾಳಿನ
ಕತೆಯೋ ಸರ್ವರಿಗಿದೆ ವೇದ್ಯ !
ಸಂಸ್ಕೃತಿ ಪ್ರಕೃತಿಯ ಸುಂದರ ಸಂಗಮ-
ವಿಲ್ಲಿರೆ ಬಾಳ್‌ಸಿರಿ ತುಳುಕುತಿದೆ !
ಆ ಘನ ಜೀವನಸುಖವನು ಸೇವಿಸಿ
ಅಗಲಿ ಹೋಗಲೆದೆ ಅಳುಕುತಿದೆ !

(ಶಮನೇವಾಡಿ - ಪು ೭೪)

ಸನದಿಯವರ ಪ್ರೇಮ-ಪ್ರಣಯದ ಭಾವಜೀವನ ದಾಂಪತ್ಯದ ಸರಸ ಸುಂದರ ಚೌಕಟ್ಟಿನೊಳಗಿನದು. 'ತಾಜಮಹಲು' ರೂಪಕವನ್ನು

ಆವರಿಸಿಕೊಂಡು ಪ್ರಕಟವಾದ ಈ ಕವಿಯ ಭಾವಜೀವನ, ನಗರ - ನಾಗರಿಕತೆಯ ಕಡೆಗೆ ಆನುಷಂಗಿಕವಾಗಿ ಒಲಿದರೂ ಅಂತರಂಗದಲ್ಲಿ ಬಾಲ್ಯದ ಹಸಿರು ನೆನಪಿನ ಸಮೃದ್ಧಿಯೊಂದಿಗೆ ನೆಲೆಸಿರುವುದು ಹಳ್ಳಿಯಲ್ಲಿಯೇ. 'ನಮ್ಮ ಹಳ್ಳದ ಹೊಲ'ದ ಚಿತ್ರಣ ಮತ್ತೊಂದು 'ಶಮನೇವಾಡಿ'ಯ ಮುಂದುವರಿದ ಭಾಗವೆನಿಸುತ್ತದೆ.

ಮಳೆ ಬಂದು ನಿಂದಿರಲು
ಎರೆನೆಲವು ತೊಯ್ದಿರಲು
ಬೆರಳೂರಿ ಹೆಜ್ಜೆಯಿಡು ತೂಕದಿಂದ :
ಹಸಿರು ಹುಲ್ಲಿನ ಬಯಲ
ಬೈತಲೆಯ ಸೀಳ್ದಾರಿ
ಎದುರುಗಡೆ ನೋಡಿ ನಡೆ ಜೋಕೆಯಿಂದ

ಎಂದು ಕರಾವಳಿ - ಮಲೆನಾಡು ಮೂಲದಿಂದ ಬಂದ ಬಾಳ ಸಂಗಾತಿಗೆ ಪರಿಚಯಿಸುವ ಪರಿಯಲ್ಲಿ ಕವಿತೆ ಹುಟ್ಟಿದೆ.

ಬೇರೆ ದ್ರವ್ಯಗಳೇಕೆ
ಕೇದಗೆಯ ಹೊಡೆಗಳಲಿ
ರಸಿಕನಾಸಿಕ ಸೆಳೆವ ಗಂಧವಿರಲು !

ಎಂದು, ನೆಲ-ಗಾಳಿಯಲಿ ಹರಡಿರುವ ಪ್ರಕೃತಿಯ ಸೌಂದರ್ಯವನ್ನು ಪಂಚೇಂದ್ರಿಯಗಳ ಮೂಲಕ ಸವಿಯುತ್ತ, ಹೆಂಡತಿಗೂ ಸವಿಸುತ್ತ ಮುಂದೆ ನಡೆದ ಕವಿ, ಆಕೆಯನ್ನು ಪ್ರೀತಿಯಿಂದ ಮೂದಲಿಸುವ ಸಂಚಾರಿಭಾವ ಪ್ರಚೋದಿಸುವುದರಿಂದ-

ನಿನ್ನಂತೆ ಈ ಹಳ್ಳ
ಮೂಗು ಮುರಿಯುವ ಮೋಡಿ
ಮೊದಲೆ ಕಲಿತಿದೆ ನೋಡು ಅಂಕುಡೊಂಕು
ಕೋಪತಾಪದಿ ನಿನ್ನ
ಕಣ್ಣುಗಳು ತುಳುಕುವೊಲು
ಹೊರಸೂಸಲೊಮ್ಮೊಮ್ಮೆ ಬೆಳೆಯೆ ಮಂಕು !

ಎಂದು ಅರ್ಥಾಂತರನ್ಯಾಸದಿಂದ ನಿಸರ್ಗವನ್ನು ಬಣ್ಣಿಸುತ್ತಾರೆ. ಕವಿ ವಾಸ್ತವವಾದಿ. ಈತನ ಕನಸೂ ವಾಸ್ತವದ ಸಹಜತೆಯನ್ನು ಕಾಣುವಂತಹದು. ನಗರದಲ್ಲಿ ಉದ್ಯೋಗಿಯಾಗಿ ಉಪಜೀವನ ನಡೆಸುತ್ತಿರುವುದು ತಾತ್ಕಾಲಿಕ ವ್ಯವಸ್ಥೆ ; ನಿಸರ್ಗದ ಸುಖ - ಸೊಗಸು ಕೊಡುವ ಮಾನಸಿಕ, ದೈಹಿಕ ನೆಮ್ಮದಿ ಅಲ್ಲಿ ಲಭಿಸುವುದು ನಿರಂತರವಲ್ಲ. ಅದನ್ನು ನಂಬಿ ನೆಚ್ಚಿ ಕೊನೆತನಕ ಉಳಿಯುವುದಾಗಲಿಕ್ಕಿಲ್ಲ. ಹೊಸ ಸಂಸಾರ ಹೂಡಿದ ತರುಣ ಕವಿ ನಗರ ಬದುಕಿನ ಮೋಹಕ್ಕೆ ಒಳಗಾಗಿ ಕುರುಡನಾಗಿಲ್ಲ. ಅಂತೆಯೇ ಹೆಂಡತಿಗೆ ಹೇಳುವ ಕವಿಮಾತು :

ನಾಳಿನೆದೆಯೊಳಗೇನು
ಕಾಯ್ದಿಹುದೋ ನಮಗಾಗಿ !
ಇಂದಿನಿರುವಿಕೆಯೊಂದೆ ಕೊನೆಯದಲ್ಲ !
ಹೊತ್ತು ಬಂದರೆ ನಾವು
ಈ ನೆಲಕೆ ಹಣೆ ಹಚ್ಚಿ
ದುಡಿವ ಪಣಗೈವುದವಮಾನವಲ್ಲ !

'ನಮ್ಮ ಹಳ್ಳದ ಹೊಲ' ಬರಿ ವರ್ಣನಪರ ಪದ್ಯವಾಗದೆ, ಸಂಸಾರ ಸಂಸ್ಕೃತಿಯ ರೂಪರೇಷೆಯನ್ನು ಕಲ್ಪಿಸುವ ಆತ್ಮಕತೆಯೂ

ಆಗಿರುವುದು ಆಕಸ್ಮಿಕವಲ್ಲ. ಮುಂಬೈ, ಅಹ್ಮದಾಬಾದ್‌ಗಳಲ್ಲಿ ಬಹುಕಾಲ ಸಾಂಸಾರಿಕ ಜೀವನವನ್ನು ಯಶಸ್ವಿಯಾಗಿಯೆ ನಡೆಸಿದ ಸನದಿಯವರು ನಿವೃತ್ತಿಯ ಅವಧಿಯನ್ನು ನಿಮಿತ್ತಕ್ಕೆಂಬಂತೆ ಹತ್ತು ವರ್ಷ ಮುಂಬೈಯಲ್ಲಿ ಕಳೆದು ಮರಳಿ ಬಂದದ್ದು ಹೆಂಡತಿಯ ತವರು ನೆಲೆ ಕುಮಟಾಕ್ಕೇ. 'ಬ್ಯಾಕ್ ಟು ದ ನೇಚರ್' ಎಂದ ವರ್ಡ್ಸ್‌ವರ್ತ್ ಕವಿ. ಸನದಿಯವರೂ ಮರಳಿ ನಿಸರ್ಗದುಡಿಗೆ ಸೇರಿದ್ದು ತಮ್ಮ ತಾರುಣ್ಯದ ಒಂದು ಒಳ ಶಪಥದಿಂದಾಗಿಯೇ ಇರಬೇಕು. ಅದು ಅವ್ಯಕ್ತವಲ್ಲ :

'ಸೌಂದರ ಸಂಚಯದೀ ಸವಿಯನುಭವ
ಸೊಗವೀಯುತ್ತಿರೆ ಮನ್ಮನಕೆ
ಜಗವೀ ಸೊಗವುಣಲದೆ ಹೊಸ ಕಳೆಯನು
ಬಳೆಯದೆ ಮಾನವ ಜೀವನಕೆ'

ಎಂದು ಈ ಕವಿ ಅಂದುಕೊಂಡದ್ದು; ವಾಸ್ತವದಲ್ಲಿ ಸಾಧ್ಯವಾದುದು ಕಾವ್ಯ ಸಂಕಲ್ಪದ ವಿಲಕ್ಷಣ ಪರಿಣಾಮ ಅಂತನ್ನಬಹುದೇನೋ. ಸನದಿಯವರು 'ಆಕಾಶವಾಣಿ' ಇಲಾಖೆಯ ಕಾರ್ಯಕ್ರಮ ಅಧಿಕಾರಿಯಾಗಿ ಉದ್ಯೋಗ ಮಾಡುತ್ತಿದ್ದಾಗಲೂ ತನ್ನ ಬೇರುಗಳು ಹುಟ್ಟಿ ಬೆಳೆದ ಮಣ್ಣಿನಲ್ಲಿ; ಆ ಮಣ್ಣಿನೊಂದಿಗೇ ಇದ್ದ ನೆಲ-ಹೊಲಗಳನ್ನು; ನದಿ-ತೊರೆಗಳ ಹರಿವನ್ನು ಮರೆತವರಲ್ಲ. ಪ್ರಕೃತಿಯಿಂದ ಪಡೆದ ಗುಣ-ಗೌರವವನ್ನು ಕೃತಜ್ಞತೆ ಭಾವದೊಂದಿಗೆ ಉಳಿಸಿಕೊಂಡು ತಮ್ಮ ಕಾರ್ಯಕ್ಕೆ ಸಂಸ್ಕೃತಿಯ ಸುಂದರ ಲೇಪನವನ್ನು ನೀಡುತ್ತ ಬೆಳೆದವರು. ಹಳ್ಳಿಗನೊಬ್ಬನ ಸರಳತೆ, ಆತ್ಮೀಯತೆ, ಅಕೃತಕ ಸೌಜನ್ಯ, ಸಭ್ಯತೆ ಸನದಿಯವರ ಕಾರ್ಯ ಸಂಸ್ಕೃತಿಯಲ್ಲಿ ಹಾಸು ಹೊಕ್ಕಾಗಿದ್ದವು. ಜನಸಾಮಾನ್ಯರ ನೋವು-ನಲಿವನ್ನು ಬಿಂಬಿಸುವ

ದೃಷ್ಟಿಯೊಂದು ಅವರಲ್ಲಿ ಸಹಜವಾಗಿಯೇ ಒಡಮೂಡಿತ್ತು. ಅಧಿಕಾರಿಯಾಗಿಯೂ ಶಿಕ್ಷಕನ ಸಹೃದಯತೆ, ಮಾರ್ಗದರ್ಶಕನ ಸಹನೆ-ಸುಶೀಲತೆ ಸನದಿಯವರ ವ್ಯಕ್ತಿತ್ವವನ್ನು ಸಾರ್ವಜನಿಕವಾಗಿ ರೂಪಿಸಿ ಬೆಳಗಲು ಸಹಾಯಕಾರಿಯಾಗಿದ್ದವು. ಪ್ರಕೃತಿ ಸಂಸ್ಕೃತಿಯ ಅವಿರುದ್ಧವಾದ ಸಂಬಂಧವನ್ನು ಬೆಸೆದುಕೊಂಡು, ಯಾಂತ್ರಿಕ ವಾತಾವರಣದಲ್ಲಿ ಬಾಳುವುದು, ಯಶಸ್ವಿಯಾಗಿಯೇ ಬದುಕುವುದು ಸುಲಭವೇನಲ್ಲ. ಸನದಿಯವರು ಕವಿಯಾಗಿದ್ದರಿಂದ ಅದನ್ನು ಸುಲಭವಾಗಿ ಸಾಧಿಸಿದರು.

ನಾನು ಮಣ್ಣಿನ ಮಗನ ಮಗನಾಗಿ ಬೆಳೆದವನು
ಮಣ್ಣಿನಿಂದಲೇ ಬದುಕ ಕಂಡಿರುವೆನು
ನನ್ನ ತಾಯಿಯ ತಬ್ಬಿಕೊಂಡಿರುವ ಮಣ್ಣಿನೊಳೆ
ತಾಯಿಯೊಲವಿನ ಸೊಗವನುಂಡಿರುವೆನು

....

ಮಣ್ಣು ಮನುಜನ ಆದಿ-ಅಂತ-ರಂಗ !
ಮಣ್ಣಿನಾರಾಧನೆಯ ತಂತ್ರ ತಿಳಿದರೆ ಜಗಕೆ
ಮಣ್ಣಿನೊಳೆ ಕಂಡೀತು ಸುಖದ ಶೃಂಗ !

ಪ್ರಕೃತಿ ಪ್ರೇರಿತವಾದ ಮತ್ತು ಮಣ್ಣಿನಿಂದ ಪೋಷಿತವಾದ ಸಂಸ್ಕೃತಿಯನ್ನು ಕವಿ ಸನದಿಯವರು ಉದ್ದಕ್ಕೂ ರೂಪಿಸಿಕೊಂಡು ಬಂದಿದ್ದಾರೆ. ಅವರ ಸಂಸ್ಕೃತಿಯ ಇಮ್ಮುಖಗಳು ಸುಮುಖಗಳಾಗಿ ವೈಯಕ್ತಿಕ ಮತ್ತು ಸಾರ್ವತ್ರಿಕ ಜೀವನ ರಂಗದಲ್ಲಿ ಅವರು ಗಳಿಸಿದ ಭಾವನಿಷ್ಠ ಸಫಲ ನೋಟಗಳಾಗಿ ಮತ್ತೆ ಮತ್ತೆ ಕಾಣುತ್ತವೆ. 'ತಾಜಮಹಲು' ಕವನ ಸನದಿಯವರ ರಚನೆಗಳಲ್ಲಿಯೇ

ಅತ್ಯುತ್ತಮವಾದುದು ; ಭಾವ ಗೀತೆಯ ಗೇಯತೆ, ಭಾವದೀಪ್ತತೆ, ಚಿರಂತನತೆಯ ಅಂಶಗಳು ಈ ಶಿಲ್ಪದಲ್ಲಿ ಅವಿನಾಭಾವಿಯಾಗಿ ಸೇರಿಕೊಂಡ ಬಗೆಯೇ ಅದ್ಭುತವಾದುದು. ವಾಸ್ತುಶಿಲ್ಪವಾಗಿ ಆಗ್ರಾದ ಆ ಕಟ್ಟಡ ಕವಿಯ ಕಣ್ಣಿಗೆ ಕಂಡದ್ದು;

ಹಾಲ್ಗಡಲ ಕನಸು ಕೆನೆಗೊಂಡು ಬಂದ
　　ಪೂರ್ಣೇಂದು ತಂದ ನೌಕೆ
ಬೆರಳು ಸೋಂಕಿದರೆ ಹರಳು ಒಗೆದವೊಲು
　　ನೋಯಬಹುದು ಜೋಕೆ
ಗಾಳಿಯಲ್ಲಿ ತಾ ಲಾಳಿಯಂತೆ ಸಂಚರಿಸುತಿರುವ ಪ್ರೇಮ
　　ಮನುಜಕುಲದ ಕಣ್ಣೆದುರಿಗಿರಿಸಿತೇ
　　ಇಂಥ ಅಮೃತ ಧಾಮ !

....

ಅಚ್ಚಳಿಯದಿರುವ ಚೆಲುವಿಕೆಗೆ ಕಲೆಯು
　　ಕೊಟ್ಟಿರುವ ನಿರ್ಮಲಾಕ್ಷಿ
ಪ್ರೇಮವೆಂಬುದೊಂದಿಹುದು ಲೋಕದೊಳಗೆಂಬ
　　ಸ್ಮೃತಿಗೆ ಸಾಕ್ಷಿ.

(ತಾಜಮಹಲು)

'ಪ್ರೇಮವೆಂಬುದು ರೂಪರಹಿತ; ಅದಕ್ಕೆ ವ್ಯಾಖ್ಯೆ ಕೊಡುವುದೂ ಕಠಿಣ ; ಆದರೆ ಮಮತಾಜಳ ಮೇಲಿನ ಆ ರಾಜಶಿಲ್ಪಿಯ ಪ್ರೇಮ 'ಉಳಿ'ದುದು ಒಂದು ವಾಸ್ತುಶಿಲ್ಪದ ರೂಪದಲ್ಲಿ. ಭೂವಲಯವನ್ನೇ ಆಳಬಲ್ಲ ಮನುಜನ ಒಲವು ಬಲವುಳ್ಳದ್ದು ಪ್ರೇಮಕ್ಕಿರುವ ಈ ಬಲ, ಕವಿಯ ಕಲ್ಪನೆಯ ಆರ್ದ್ರ ದೃಷ್ಟಿಯಿಂದ ಕೂಡಿದ್ದು ಎನ್ನುವುದಕ್ಕೆ ತಾಜಮಹಲಿನ ತುಂಬ ಚೆದುರಿರುವ ಹಲವು ಪ್ರೇಮ

ಕವನಗಳ ವೈವಿಧ್ಯವೇ ಸಾಕ್ಷಿಯಾಗಿದೆ. ಸನದಿಯವರು ಈ ಪ್ರೇಮ ಕವನಗಳ ಮೂಲಕ ಕಟ್ಟಿಕೊಡುವ ಸಂಸ್ಕೃತಿ - ಭಾರತೀಯ ಕುಟುಂಬ ಪದ್ಧತಿಯದು. ಬಾಳಸಂಗಾತಿಯಾಗುವವಳು ಮೊದಲ ಸಲ 'ನವವಧು'ವಾಗಿ ಕಾಣಿಸಿದಾಗ ನೋಡಿ ಒಪ್ಪಿಕೊಂಡು ಬಂದ ನಂತರ, ಮದುವೆಯೆಂಬ ಔಪಚಾರಿಕ ಸಮಾರಂಭದಲ್ಲಿ ಬಹಿರಂಗವಾಗಿ ಆಕೆಯನ್ನು ಸ್ವೀಕರಿಸುವ ತನಕ ಕವಿಗೆ ಆತುರ ಕಾತರಗಳ ಸ್ವಚ್ಛಂದ ಸಂಚಾರೀ ಕಲ್ಪನೆಗಳಿಲ್ಲ; ಅಲ್ಲಿ ನೆಲೆಗೊಂಡಿರುವುದು ಸ್ಥಾಯೀ ಭಾವಗಳು. ಆಕೆ ಕೊಟ್ಟ ಕರವಸ್ತ್ರವನ್ನು ನೆನೆಸುವ ಕವಿ-

> "ತನ್ನ ನೆನಪಿಗೆ ಕಣ್ಣ ಕೋರೈಸುವೀ ಸಣ್ಣ
> ಕಾಣ್ಕೆಯಿತ್ತಳು ಮುದದ ಸಾಣೆ ಹಿಡಿದು
> ಅವಳೆನ್ನ ಮನೆ ತುಂಬ ಬರುವವರೆಗೀ ಹೂವೆ
> ಜೊತೆಯಾಗಿ ನಲಿಸುವುದು ಜೀವ ಮಿಡಿದು !"

ಎಂದು ಧನ್ಯಭಾವ ತಾಳಿಕೊಳ್ಳುತ್ತಾನೆ. ಹೆಣ್ಣನ್ನು ಆಕೆಯ ಚೆಲುವಿಕೆಗಾಗಿ ಮೆಚ್ಚಿ ಪ್ರೀತಿಯಿಂದ ಬಣ್ಣಿಸುವ ಗಂಡುಕವಿಗಳಿಗೆ, ಸಾಮಾಜಿಕವಾಗಿ, ಕೌಟುಂಬಿಕವಾಗಿ ಆಕೆ ತಮ್ಮ ಸಹಜೀವಿ ಎನ್ನುವ ಅರಿವಾಗಲಿ, ಒಲುಮೆಯಾಗಲಿ ಇರುವುದು ಕಮ್ಮಿ. ಹೆಂಡತಿ, ಎರಡನೆಯ ದರ್ಜೆ ವ್ಯಕ್ತಿ (second sex) ಎನ್ನುವ ಸಂಕುಚಿತತೆಯೇ ಜಾಸ್ತಿ. ಬೇಂದ್ರೆಯವರು ಮೊದಲ ಸಲ ತಮ್ಮ ಹೆಂಡತಿಯನ್ನು 'ಸಖೀ' ಎಂದು ಭಾವಿಸಿದ ಕವಿ. ಆಕೆಯನ್ನು ಮುನಿಸು ಮರೆತು ಕುಣಿಯಲು ಬಾ' ಕರೆದ ಸರಸ ಕವಿ. ಕುವೆಂಪು ಕೂಡ, ಮದುವೆಯಾಗಿ ಸಂಸಾರ ನಡೆಸಿ ಎಷ್ಟೋ ದಿನಗಳ ಮೇಲೆ ಹೆಂಡತಿಯೊಂದಿಗಿನ ಒಡನಾಟವನ್ನು ನೆನೆದು 'ಪ್ರೇಮ ಮಂಚಕ್ಕೆ ಬಾ' ಎಂದು ಕರೆದರು

ಕವಿತೆಗಳಲ್ಲಿ. ರೋಮ್ಯಾಂಟಿಕ್ ಕವಿಗಳು ತಾವು ಪ್ರೀತಿಸಿದ ಹೆಣ್ಣಿನ ಬಗ್ಗೆ ಎಷ್ಟೋ ಹೃದಯ ತುಂಬಿ ಬರೆದರಾದರೂ 'ಹೆಂಡತಿ' ಸ್ಥಾನಕ್ಕೆ ಆಕೆ ಬಂದಾಗ ದೃಷ್ಟಿ ವಿಮುಖರಾದರು. ಭಾರತೀಯ ಸಂಸ್ಕೃತಿಯಲ್ಲಿ ಹೆಂಡತಿ ಸಹವರ್ತಿನಿ, ಸಹಧರ್ಮಿಣಿ. ಅಂತೆಯೇ ಆಕೆ ಸಖಿ. ಸನದಿಯವರು ಹೆಂಡತಿಯ ಆಗಮನದ ಕ್ಷಣಗಳಿಂದ ಆರಂಭಿಸಿ ಆಕೆ ಸಂತಾನ ಭಾಗ್ಯ ಕರುಣಿಸುವ ತಾಯಿಯಾಗುವ ವರೆಗೂ ಆಕೆಯನ್ನು ಕಾಣುವ, ಒಳಗೊಳ್ಳುವ, ಸಹಸಂಚಾರಿಯಾಗಿ ತಿರುಗಾಡುವ ಕ್ಷಣಗಳನ್ನು ಕವಿತೆ ಮಾಡುತ್ತಾರೆ. 'ನನ್ನ ಜಾಣೆ' ಕವನ, ಸಖಿಯ ಗುಣಗಾನವಾಗಿದೆ. 'ಹೊಸ ಒಲೆ' ನವ ವಧುವಾಗಿ ತನ್ನ ಮನೆ ತುಂಬಿದವಳನ್ನು ಕಾಳಜಿ, ಕನಿಕರದಿಂದ ಕಾಣುವ ಕವಿಯ ಹೃದಯ-ವಿಶಾಲತೆಯ ದಾಖಲೆ. ಇದಕ್ಕೆ ಸಂವಾದಿಯಾಗಿರುವ ಪದ್ಯ 'ಸಮರ್ಪಣೆ'. ಕವಿ ಹೆಂಡತಿಯ ದನಿಯನ್ನಿಲ್ಲಿ ಬಹಿರಂಗಪಡಿಸುತ್ತಾರೆ. ಬೇಂದ್ರೆಯವರ 'ನಾನು ಬಡವಿ' ಕವನದ ಭಾವವೇ ಇಲ್ಲಿ ಪುನರುಕ್ತಿಗೊಂಡಿದೆ. ದಾಂಪತ್ಯಧರ್ಮದ ಉತ್ಕಟ ಅಭಿವ್ಯಕ್ತಿ ಕೊನೆಯ ನುಡಿಯಲ್ಲಿ ಮಾರ್ದವವಾಗಿದೆ.

> ನಿಮ್ಮ ಬೆರಳಿನ ಮೇಲೆ ಮೆರೆವ ಉಂಗುರದಲ್ಲಿ
> ನನ್ನ ಹೃದಯದ ರಕ್ತಬಿಂದುವಿಡುವೆ !
> ನನ್ನ ಪ್ರೀತಿಯೊಳಿನಿತು ಕೊರತೆ ಕಂಡರೆ ಹೇಳಿ
> ಜೀವಶಿಕ್ಷೆಯ ಕೊಟ್ಟರೂ ನಗುತ ಪಡೆವೆ !

ಸನದಿಯವರ ಹೆಂಗರುಳು ದಾಂಪತ್ಯ ಜೀವನದ ಕಷ್ಟ-ನಷ್ಟಗಳನ್ನು ಅನುಭವಿಸುತ್ತಲೇ ಮಾಗುವ ಪರಿ 'ಹೊಯ್ದಾಟ' ಪದ್ಯದಲ್ಲಿದೆ. ಐದು ತಿಂಗಳ ಗರ್ಭಿಣಿ ಹೆಂಡತಿ ಚೊಚ್ಚಲ ಬಾಣಂತಿತನಕ್ಕಾಗಿ ತವರಿಗೆ ಹೊರಡಲೇಬೇಕು. ಗಂಡನನ್ನು ಒಬ್ಬಂಟಿ ಬಿಡುವುದು, ಅಗಲುವುದು,

ಅಗಲಿದಾಗ ಆತ ಪಡುವ ತ್ರಾಸು ತೊಂದರೆಗಳನ್ನು ನೆನೆಸುವುದು ಪದ್ಯದ ತುಂಬ ಭಾವಾಂದೋಲನದಲ್ಲಿ ತೊಡಗಿದೆ. ತಾನು, "ಎರಡು ಮನೆಗಳ ಕೊಂಡಿಯೊಲು ಜೀಕಾಡುತ್ತಿರುವ ಜೀವ" ಎಂಬ ಅವಳ ಅನಿಸಿಕೆ, ಪದ್ಯದ ಸ್ಥಾಯೀ ಭಾವ.

ಗಂಡನ ವಿರಹದ ಒದ್ದಾಟವನ್ನು 'ಭಾವ ಬಂಧ' ಕವನದಲ್ಲಿ ಸೆರೆ ಹಿಡಿಯುವಾಗ ಸನದಿಯವರು ಮೇಘ ಸಂದೇಶದ ಯಕ್ಷನ ಭಾವಾವೇಶವನ್ನು ಅನುಸರಿಸುತ್ತಾರೆ :

ನಿನ್ನ ಕಿರುಬೆರಳಿನಲಿ ಹರಳಿನುಂಗುರವಿಡಿಸಿ
ತುಟಿಗೊತ್ತಿಕೊಂಡಿದ್ದ ಮಧುರ ಸ್ಮೃತಿಯು
ತುಂಬಿದಾಗಸದಲ್ಲಿ ಸೆಳೆ ಮಿಂಚು ಸುಳಿದಂತೆ
ಮನದಿ ಮೂಡಿದರಾಯ್ತು ಮಂಕುಮತಿಯು.

ಆದರೆ ದಾಂಪತ್ಯದ ಮೊದಲ ಸಫಲತೆಯ ಲಕ್ಷಣಗಳು ಕವಿಗೆ ಅರ್ಥವಾಗದಿರುವುದು, ಮುಗ್ಧತೆಯ ಪರಾಕಾಷ್ಠೆ. ಅನುಭವದ ಕೊರತೆಯಿಂದಾಗಿ, ಹೆಂಡತಿಯ ಸಪ್ಪೆ ಸಪ್ಪೆ ವರ್ತನೆ ತಪ್ಪು ತಪ್ಪು ಮಾತಿನಿಂದಾಗಿ ಕಳವಳ ಹುಟ್ಟಿಸುತ್ತದೆ. ಹತ್ತಿರವಿದ್ದರೂ ಅರ್ಥವಾಗದ ಅವಳ ದೈಹಿಕ ಪ್ರತಿಕ್ರಿಯೆಗಳು ಅವಳಿಗೇ ಅವ್ಯಕ್ತ ನೋವು ಹುಟ್ಟಿಸುತ್ತಿರುವುದು ಪದ್ಯದ ಭಾವಲೋಕದಲ್ಲಿ ನಾಟಕೀಯವಾಗಿ ಬೆಳೆಯುತ್ತದೆ. ಬೇಂದ್ರೆಯವರ 'ಪೋರ-ಪೋರಿ' ಪದ್ಯದ ಭಾವಸಂದರ್ಭ ನೆನಪಿಗೆ ಬರುತ್ತದೆ. ಇಲ್ಲಿ ಎಳೆಯ ದಂಪತಿಗಳ ಕಳವಳ- ತಳಮಳಗಳನ್ನು ಶಮನಗೊಳಿಸಲು ನೆರೆಮನೆಯ ಮುದುಕಿ ನಡುವೆ ಬರುತ್ತಾಳೆ. ಕಥನ ಕವನದ ಹಾಗೆ

ರೂಪುಗೊಂಡ ಕವಿತೆ, ರಮ್ಯಭಾವದ ಸಂತೃಪ್ತಿಯಿಂದ ಕೊನೆಗೊಳ್ಳುತ್ತದೆ.

ಇವಳ ಗಲ್ಲವ ಚಿವುಟಿ
ಮುದುಕಿ ನುಡಿದುದ ಕೇಳಿ
ಹಿಗ್ಗಿತೆದೆ ಹೊಸ ಜೀವ ಬರುವುದೆನಿಸಿ ।

ದಾಂಪತ್ಯಗೀತೆಗಳಿಂದಲೇ ತುಂಬಿರುವ 'ತಾಜಮಹಲು' ಸಂಕಲನ ಪ್ರೀತಿ, ಮಮತೆ, ವಾತ್ಸಲ್ಯ, ವಿರಹ, ಮಿಲನ, ಕಾತರ, ಕಳವಳ, ಸಮಾಧಾನ, ಸಂತಸ, ಸಂತೃಪ್ತಿಗಳ ಭಾವಕೋಶಗಳಿಂದ ಸಮೃದ್ಧಿಯಾಗಿದೆ. ಕುಟುಂಬ ಸಂಸ್ಕೃತಿಯ ಇಡಿಯ ಚಿತ್ರವೊಂದು ಇಲ್ಲಿ ಮೂಡಿ ನಿಲ್ಲುತ್ತದೆ. ''ಪ್ರತಿಬಿಂಬ''ದ 'ಪದಾರ್ಥ' ಹಾಗೂ ''ಒಂದು ವರುಷದ ಮೇಲೆ'' ಕವನಗಳೂ ಇದೇ ಭಾವ ಸಂದರ್ಭಕ್ಕೆ ಸೇರುವ ಹಾರ್ದಿಕ ರಚನೆಗಳು.

ಕವಿ ಸನದಿಯವರು ಗ್ರಾಮೀಣ ಸಂಸ್ಕೃತಿಯ ಮಳೆ, ಗಾಳಿಯನ್ನುಂಡು ಬೆಳೆದವರು. ವೃತ್ತಿಯನ್ನವರು ಆರಿಸಿಕೊಂಡರೊ ಅಥವಾ ವೃತ್ತಿಯು ಅವರನ್ನು ಅರಸಿಕೊಂಡು ಬಂದಿತೋ ಅದು ಅವರ ಮನೋ ಪ್ರಕೃತಿಗೂ, ವಾತಾವರಣದ ಸಂಸ್ಕೃತಿಗೂ ಅನುರೂಪವಾಗಿಯೇ ಉಳಿಯಿತು. ನಾಡಿನ ಸಂಸ್ಕೃತಿ, ನುಡಿಯ ಸಂಸ್ಕೃತಿಗಳನ್ನು ಕಟ್ಟುವ ಸೃಜನಶೀಲ ವೃತ್ತಿ ಅವರದಾಯಿತು. ಜನ ಸಂಸ್ಕೃತಿಯೊಂದಿಗೆ ತಮ್ಮ ವ್ಯಕ್ತಿತ್ವವನ್ನು ಗುರುತಿಸಿಕೊಳ್ಳಲು ಮತ್ತು ಕಾವ್ಯದ ಧ್ಯೇಯ-ದಿಕ್ಕುಗಳನ್ನು ಸಂಸ್ಕೃತಿಪರವಾಗಿ ರೂಪಿಸಿಕೊಳ್ಳಲು ಅವರಿಗೆ ಅವರ ವೃತ್ತಿ ಪೂರಕವೇ ಆಯಿತು. 'ಆಕಾಶವಾಣಿ'ಯ ''ಬಹುಜನ ಹಿತಾಯ, ಬಹುಜನ ಸುಖಾಯ'' ಎನ್ನುವ ಧ್ಯೇಯ

ವಾಕ್ಯ (Motto) ಸನದಿಯವರ ಕಾವ್ಯದ ಗುರಿಯೇ ಆಗಿರುವುದು ಆಕಸ್ಮಿಕವಾದುದಲ್ಲ. 'ವೀರ ಕಂಕಣ' ಸಂಕಲನವಿಡೀ, ವೀರರಸ ಪ್ರೇರಿತ ಪದ್ಯಗಳಿಂದ ತುಂಬಿದೆ. ''ಹಿಂದೀ ಚೀನೀ ಭಾಯಿ ಭಾಯಿ'' ಎಂದುಸುರಿ, ನೆಹರೂ ಜತೆ ಪಂಚಶೀಲ ಒಪ್ಪಂದಕ್ಕೆ ಸಹಿ ಹಾಕಿ, ಶಾಂತಿ-ಸಹನೆಯ ಭಾರತದ ಸುಪ್ತ ಶೌರ್ಯ ಚೇತನ ೧೯೬೨ ಜ್ವಾಲಾಮುಖಿಯಾಗಿ ಉಕ್ಕಿತು. ''ನಮ್ಮ ಸತ್ತ್ವವ ಕೆಣುಕುವಾಟಕೆ ಭೀತಿಯೇತಕೆ ಏಳಿರೋ! ತತ್ತ್ವಹೀನರ ಹೆಣಕೆ ಸತ್ಯದ ಹೂವನೇರಿಸಿ ಹೂಳಿರೋ'' ಸನದಿಯವರು ಪದಗಳಲ್ಲಿ ತೊಟ್ಟ ವೀರ ಕಂಕಣದ ಹಿಂದೆ ಕನ್ನಡ ನಾಡಿನ ವೀರ ಚರಿತೆಯ ಪ್ರೇರಣೆ ಇದೆ.

> "ಮದ್ದಿಗೊಂದೆಲೆ ಬೇಡಿದರೆ ಬೆಟ್ಟವನೆ ತಂದಿಟ್ಟ
> ದಿಟ್ಟ ಭಕ್ತನು ನಮ್ಮ ಆಂಜನೇಯ'' ಹಾಗೂ

.....''ನಮ್ಮ ಒಂದೊಂದುಗುರು ಪರಶುರಾಮನ ಕೊಡಲಿ'' ಎಂದು ನಾಡ ಸಾಮೂಹಿಕ ಶಕ್ತಿ ಕೆಚ್ಚುಗಳನ್ನು ರೂಪಕವಾಗಿಸುವಲ್ಲಿ ಪ್ರಕಟವಾಗುವ ಇತಿಹಾಸ-ಪುರಾಣಗಳ ಪ್ರಜ್ಞೆ ಸನದಿಯವರು ರೂಪಿಸಿಕೊಂಡ ಸಂಸ್ಕೃತಿಯ ಸುಂದರ ಆಕೃತಿಯಾಗಿದೆ.

OOO

ಸನದಿಯವರ ಕಾವ್ಯದಲ್ಲಿ ಭಾರತೀಯತೆ

ಡಾ. ಜಿ. ಎಂ. ಹೆಗಡೆ

ಆಧುನಿಕ ಕನ್ನಡ ಕಾವ್ಯಪರಂಪರೆಯಲ್ಲಿ ಬಿ. ಎ. ಸನದಿಯವರ ಕಾವ್ಯ ವಿಶಿಷ್ಟವಾದದ್ದು. ಎಂ. ಅಕಬರ ಅಲಿ, ಕೆ. ಎಸ್. ನಿಸಾರ ಅಹಮ್ಮದರ ಕಾವ್ಯದಂತೆ ಸನದಿ ಕಾವ್ಯ ಕನ್ನಡ ಸಂಸ್ಕೃತಿ ಪರಂಪರೆಯಲ್ಲಿ ಹರಿಯುತ್ತ ಬಂದಿದೆ. ಸನದಿಯವರು ಮುಂಬಯಿಯಲ್ಲಿದ್ದುಕೊಂಡು ಕನ್ನಡ ಕವಿತೆಗಳನ್ನು ಬರೆಯುತ್ತ ಬಂದವರು. ಅವರ ಕಾವ್ಯ ಸಮೃದ್ಧವಾದದ್ದು. ನಾಲ್ಕು ದಶಕಕ್ಕೂ ಹೆಚ್ಚು ಕಾಲದಿಂದ ಸನದಿಯವರ ಪ್ರತಿಭೆ ಕಾವ್ಯಸೃಷ್ಟಿಯಲ್ಲಿ ತೊಡಗಿಕೊಂಡಿದೆ. 'ಆಶಾಕಿರಣ', 'ನೆಲಸಂಪಿಗೆ', 'ತಾಜಮಹಲು', 'ಹಿಮಗಿರಿಯ ಮಡಿಲಲ್ಲಿ', 'ಧ್ರುವಬಿಂದು', 'ವೀರಕಂಕಣ', 'ಪ್ರತಿಬಿಂಬ', 'ಸೀಮಾಂತರ', 'ಮುಂಬೈ ಮಳೆ', 'ಮನೆ ಮನೆಗೆ ಬೇಲಿ', 'ಗೀತಗುಂಜನ', 'ಸಂಭವ', 'ಮರುಭೂಮಿ' ಹೀಗೆ ಹದಿಮೂರು ಕವಿತಾ ಸಂಕಲನಗಳನ್ನು ಪ್ರಕಟಿಸಿದ ಬಿ. ಎ. ಸನದಿಯವರು ಆರುನೂರಕ್ಕೂ ಹೆಚ್ಚು ಕವಿತೆಗಳನ್ನು ಬರೆದಿದ್ದಾರೆ. ಸನದಿ ಸಮಗ್ರ ಕಾವ್ಯ 'ಸೂರ್ಯಪಾನ' ೧೯೯೫ರಲ್ಲಿಯೇ ಪ್ರಕಟವಾಗಿದೆ.

ಸನದಿನವರ ಕಾವ್ಯದ ಬಗೆಗೆ ಕಾಲಕಾಲಕ್ಕೆ ವಿಮರ್ಶೆ ಪ್ರಕಟವಾಗುತ್ತ ಬಂದಿದೆ. ಸಾಹಿತ್ಯಲೋಕದ ಹಿರಿಯರಾದ ರಂ. ಶ್ರೀ ಮುಗಳಿ, ದ. ರಾ. ಬೇಂದ್ರೆ, ಸಿದ್ಧಯ್ಯ ಪುರಾಣಿಕ, ವಿ. ಕೃ. ಗೋಕಾಕ,

ಪು. ತಿ. ನರಸಿಂಹಾಚಾರ್, ಕೆ. ರಾಘವೇಂದ್ರರಾವ್, ಶಂಕರ ಮೊಕಾಶಿ ಪುಣೇಕರ, ಚೆನ್ನವೀರ ಕಣವಿ, ಜಿ. ಎಸ್. ಶಿವರುದ್ರಪ್ಪ, ಎಲ್. ಎಸ್. ಶೇಷಗಿರಿರಾವ್ ಮೊದಲಾದವರು ಸನದಿ ಕಾವ್ಯದ ವಿಶಿಷ್ಟತೆಯನ್ನು ಅವರ ಕವಿತಾ ಸಂಕಲನಕ್ಕೆ ಬರೆದ ಮುನ್ನುಡಿಯಲ್ಲಿ ಪ್ರಸ್ತಾಪಿಸಿದ್ದಾರೆ. ಗೌರೀಶ ಕಾಯ್ಕಿಣಿ ಅವರು ಸನದಿಯವರನ್ನು 'ಮಾನವ್ಯದ ಕವಿ' ಎಂದು ಕರೆದಿದ್ದಾರೆ.

ಸನದಿಯವರ ಕಾವ್ಯದಲ್ಲಿ ಭಾರತೀಯತೆ, ಮಾನವತಾವಾದ ಎದ್ದು ಕಾಣುತ್ತದೆ. ಮುಸ್ಲಿಂ ಸಂವೇದನೆಗಿಂತ ಭಾರತೀಯ ಸಂವೇದನೆ ಸನದಿ ಕಾವ್ಯದುದ್ದಕ್ಕೂ ಅಂತಸ್ಥವಾಗಿರುವದನ್ನು ನಾವು ಕಾಣುತ್ತೇವೆ. ಭಾರತೀಯ ಸಂಸ್ಕೃತಿ ಪರಂಪರೆಯ ಪ್ರೀತಿ ಮತ್ತು ಆಸ್ಥೆಯನ್ನು ಸನದಿಯವರ ಕಾವ್ಯ ಸಾಬೀತುಪಡಿಸುತ್ತದೆ. ಕನ್ನಡ ಕಥನ ಸಾಹಿತ್ಯದಲ್ಲಿ ಫಕೀರ ಮಹಮ್ಮದ ಕಟ್ಪಾಡಿ, ಸಾರಾ ಅಬೂಬಕರ, ಬೋಳವಾರ ಮಹಮ್ಮದ ಕುಞ್ಞಿ ಮೊದಲಾದವರು ಮುಸ್ಲಿಂ ಸಂವೇದನೆಯನ್ನು ಸಾಹಿತ್ಯದಲ್ಲಿ ತಂದ ಹಾಗೆ ಕನ್ನಡ ಕಾವ್ಯದಲ್ಲಿ ಸನದಿಯವರು ತಮ್ಮನ್ನು ಆ ನಿಟ್ಟಿನಲ್ಲಿ ತೊಡಗಿಸಿಕೊಳ್ಳಲಿಲ್ಲ. ಸನದಿಯವರ ಜೀವನ ದೃಷ್ಟಿಕೋನ ಭಿನ್ನವಾದದ್ದು. ಭಾರತದ ಏಕತೆ, ಸಮಗ್ರತೆ, ಪ್ರಗತಿಯಲ್ಲಿ ಆಳವಾದ ಆಸ್ಥೆಯನ್ನು ಸನದಿಯವರು ಅಭಿವ್ಯಕ್ತಿಸುತ್ತ ಬಂದಿದ್ದಾರೆ. ಭಾರತೀಯ ಸಂಸ್ಕೃತಿ ಬಹುಮುಖೀ ನೆಲೆಯಲ್ಲಿ ಬೆಳೆದಿರುವಂಥದು. ಏಕತೆಯಲ್ಲಿ ವೈವಿಧ್ಯತೆಯನ್ನು ಸಾರುವ ಭಾರತೀಯ ಸಂಸ್ಕೃತಿಯ ಬಗೆಗೆ ಪ್ರೀತಿ, ಶ್ರದ್ಧೆಯನ್ನು ಬೆಳೆಸುವದು ಸನದಿಯವರ ನಿರಂತರ ಗುರಿಯಾಗಿದೆ. ಅವರು ಆರಂಭದ 'ಆಶಾಕಿರಣ'ದಿಂದಲೇ ಶಾಂತಿ, ಮಮತೆ, ಸಮತೆಯ ಬಗೆಗೆ ಚಿಂತಿಸುತ್ತ ಬಂದಿದ್ದಾರೆ. 'ನೆಲ ಸಂಪಿಗೆ'ಯ 'ಐಕ್ಯಗಾನ'ದಲ್ಲಿ ಅವರು ಘೋಷಿಸಿದ್ದು ಹೀಗೆ :

ಕನ್ನಡದ ಕುಲವೊಂದೆ, ಭಾರತದ ನೆಲವೊಂದೆ
ಜೀವಕೋಟಿಯ ಕೋಟೆಗೋಡೆಯೊಂದೆ !
ಒಂದೊಂದಕಿನ್ನೊಂದು ಛಂದವಾಗಿರಲಿಂದು
ವಿಶ್ವಶಾಂತಿಯ ಗೀತ ವಿಶ್ವಕೊಂದೆ !

ಜಗದ ಜನಗಣಗಳಲಿ ನಮ್ಮ ಮನ ಮನಗಳು
ಜೀವರಸದೊಲು ಹರಿಯೆ ಐಕ್ಯಭಾವ
ಏಕೆ? ಏಕೀಕರಣ? ನುಡಿಗೆ ಗಡಿಯಾಭರಣ?
ಎಂದವರ ಎದುರಿನೊಳೆ ನಾಡಿನುದಯ?

ಕನ್ನಡದ ಸತ್ವವನು ಭಾರತದ ತತ್ವವನು
ಮೇಳವಿಸೆ ಈ ಮಧುರ ಮಿಲನಗಾನ
ನಾಳೆ ಬಹ ಸಂತಾನಕೇಕತೆಯ ಸಂಪೂರ್ಣ
ಕಲ್ಪನೆಯ ಕೊಟ್ಟೀತು ಕಾಲಮಾನ.[೧]

ಭಾರತ ಸ್ವತಂತ್ರವಾದ ಮೇಲೆ ಹಿಮಗಿರಿಯ ಕಂದರದಲ್ಲಿ ಯೋಧರು ದೇಶ-ರಕ್ಷಣೆಗಾಗಿ ಭಾರತ ಚೀನ ಯುದ್ಧದಲ್ಲಿ ಪಾಲ್ಗೊಳ್ಳಬೇಕಾಯಿತು. ಅಂಥಹ ಸಂದರ್ಭದಲ್ಲಿ ಸನದಿಯವರು ಭಾರತೀಯ ಯೋಧರನ್ನು ಜಾಗೃತಗೊಳಿಸಿ ದೇಶಭಕ್ತಿಯ ಸ್ಫೂರ್ತಿ ತುಂಬಿದ ಪದ್ಯಗಳನ್ನು ಬರೆದದ್ದು ಗಮನಾರ್ಹವಾಗುತ್ತದೆ.

ಯಾವ ವಾಯು ವಲಯದಲ್ಲಿ
ಜನ್ಮವೆತ್ತಿ ಬಂದೆವೋ
ಯಾವ ಮರದ ನೆರಳಿನಲ್ಲಿ
ತಂಪನುಣಲು ನಿಂದೆವೋ

೧. 'ಐಕ್ಯಗಾನ', ಸೂರ್ಯಪಾನ ಸಮಗ್ರಕಾವ್ಯ, ಪುಟ ೭೮

ಯಾವ ನದಿಯ ನೀರು ಕುಡಿದು ಮುಂದೆ ನಡೆಯಲೆಂದೆವೋ
ಅಂಥ ಪುಣ್ಯಭೂಮಿಯಿತ್ತ ಕರೆಯನಿಂದು ಕೇಳಿರೊ
ಗಿಡುಗಗಣ್ಣಿನಿಂದ ನನ್ನ ಮಾನ ಕಾಯಲೇಳಿರೋ!

ಯಾವ ದೇಶ ಮುಕ್ತಿಗಾಗಿ
ಭಕ್ತಿಯಿಂದ ದುಡಿದೆವೋ
ಯಾವ ರಾಷ್ಟ್ರಋಣಕೆ ಬಾಗಿ
ಮಡಿವೆವೆಂದು ನುಡಿದೆವೋ
ಯಾವ ಮಣ್ಣು ಕಣಗಳಲ್ಲಿ ನಮ್ಮ ಅನ್ನ ಪಡೆವೆವೋ
ಅಂಥ ನೆಲದ ಮಕ್ಕಳೆಲ್ಲ ಕಿವಿ ನಿಗುರಿಸಿ ಕೇಳಿರೊ!
ಪ್ರಭೆಯ ಮೇಲೆ ಹಲ್ಲೆಗೈದ ತಮದಿ ತಮವ ಹೂಳಿರೋ! [೨]

'ಯಾವ ಯೋಗನಿದ್ರೆಯಲ್ಲಿ ಏನು ಕನಸ ಕಂಡೆನೊ' ಎಂಬ ಕವಿಬೇಂದ್ರೆ ಸಾಲನ್ನು ನೆನಪಿಗೆ ತರುವ ಈ ಪದ್ಯದಲ್ಲಿ ಸನದಿಯವರು ಧೀರರಂತೆ ಬಾಳಲು ಯೋಧರಿಗೆ ಕರೆ ನೀಡಿದ್ದಾರೆ. 'ಹಿಮಗಿರಿಯ ಮಡಿಲಲ್ಲಿ' ಸಂಕಲನದ ಬೇರೆ ಬೇರೆ ಪದ್ಯಗಳು ಸನದಿಯವರ ದೇಶಭಕ್ತಿಯನ್ನು ಪ್ರಚುರಪಡಿಸುತ್ತವೆ. ಹಚ್ಚೇವು ಕನ್ನಡ ದೀಪ' ಎಂಬ ಹಾಡಿನಂತೆ 'ಬೆಳಗೇವು ಭಾರತ ಸ್ವರೂಪ' ಅಭಿಮಾನದ ಹಾಡನ್ನು ಸನದಿಯವರು ಹಾಡಿದ್ದಾರೆ.

ಬೆಳಗೇವು ಭಾರತ ಸ್ವರೂಪ
ನಮ್ಮೊಲವನುಂಡು
ಎದ್ದಿರಲಿ ಬಂಡು
ಆ ಪುಂಡರೆದೆಯ ಸಿಗಿದೇವು!

---

೨. 'ಧೀರರಂತೆ ಬಾಳಿರೊ!' ಸೂರ್ಯಪಾನ ಸಮಗ್ರಕಾವ್ಯ, ಪುಟ ೧೩೭

ಈ ಖಂಡದೊಳಗೆ
ಭಂಡಾಸೆಗಳಿಗೆ
ಬಿದ್ದವರನೆಲ್ಲ ಬಿಗಿದೇವು
ಹೆಬ್ಬಾವ ಹೊಡೆದು
ಜಗದೆದುರು ಹಿಡಿದು
ಹಿಮಗಿರಿಯ ಆಚೆ ಹುಗಿದೇವು!

ಹುಲುಮನದ ತಾಪ
ಹೆಚ್ಚಿರುವ ಭೂಪ
ಪಡಬಹುದು ನಾಳೆ ಪರಿತಾಪ
ಬೆಳಗೇವು ಭಾರತ ಸ್ವರೂಪ! [೩]

ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಭಾರತೀಯರು ಸ್ವಾತಂತ್ರ್ಯ ರಕ್ಷಣೆಗಾಗಿ ಹೋರಾಡಬೇಕಾಗಿ ಬಂದಿದೆ. ಸ್ವಾತಂತ್ರ್ಯಕ್ಕಾಗಿ ಬಲಿದಾನ ಮಾಡಿದ ದೇಶದಲ್ಲಿ ಪರಕೀಯರ ಆಕ್ರಮಣಕ್ಕೆ ಆಸ್ಪದವಿಲ್ಲ. ಹಿಮಗಿರಿಯ ಮಡಿಲಲ್ಲಿ ದೇಶಕ್ಕಾಗಿ ಹೋರಾಡುವವರ ಯೋಧರ ತ್ಯಾಗ, ರಾಷ್ಟ್ರಪ್ರೇಮ ಉಜ್ವಲ ಅಭಿಮಾನಗಳಿಗೆ ಕವಿ ಸನದಿಯವರು ಅರ್ಥಪೂರ್ಣ ಅಭಿವ್ಯಕ್ತಿ ನೀಡಿದ್ದಾರೆ. ಹಿಂದಿ-ಚೀನಿ ಭಾಯಿ ಭಾಯಿ ಎಂದು ಕೂಗಿದ ಬಾಯಿ ಹಗೆಯಾಗಿ ನಿಂತ ಸಂದರ್ಭದಲ್ಲಿ ಸನದಿಯವರು ಕವಿತೆಯ ಮೂಲಕ ಕೊಟ್ಟ ಉತ್ತರ ಗಮನಾರ್ಹವಾಗುತ್ತದೆ.

ಅಂಜುಗುಳಿಗಳೆ ನಾವು?
ತಪ್ಪು ತಿಳಿದಿರಿ ನೀವು!
ಹಾಕಿಯೆ ತೋರುವೆವು ನಿಮ್ಮ ಹೆಣರಾಶಿ!

೩. 'ಬೆಳಗೇವು!' ಸೂರ್ಯಪಾನ ಸಮಗ್ರಕಾವ್ಯ, ಪುಟ ೧೪೯

ಆತ್ಮಬಲ ವಿಶ್ವಬಲ
ಹುರಿಗೊಳಿಸಿ ಹೋರುವೆವು
ಸತ್ತರು, ಬದುಕಿದರು, ರಣ ಪುಣ್ಯಕಾಶಿ! [೪]

'ಸಮರವಾಣಿ', 'ಯೋಧರಿಗೆ ನಮನ', 'ದೀಕ್ಷೆ ತೊಡು', 'ನರ ನರಗಳು ಹುರಿಗೊಳ್ಳಲಿ', 'ಗಡಿಗಳ್ಳರಿದ್ದಾರೆ ಎಚ್ಚರಿಕೆ', 'ಅಭಯವಾಣಿ', ಮೊದಲಾದ ಕವಿತೆಗಳಲ್ಲಿ ಸನದಿಯವರು ಭಾರತದ ರಾಷ್ಟ್ರಭಕ್ತಿಯ ವಾಣಿಯನ್ನು ಮೊಳಗಿಸಿದ್ದಾರೆ. ಭಾರತದ ಮೇಲೆ ಚೀನಿ ದಾಳಿಯನ್ನು ಕಟುವಾಗಿ ಖಂಡಿಸಿ ಭಾರತ ಚೀನಿಯರನ್ನು ಹಿಮ್ಮೆಟ್ಟಿಸಲು ಸದಾಸನ್ನದ್ಧವಾಗಿದೆ. ಭಾರತದ ಸೇನೆ ಸಶಕ್ತವಾಗಿದ್ದು ವೈರಿಗಳು ಹಿಮಗಿರಿಯಲ್ಲಿ ನುಸುಳಿ ಬರದಂತೆ ಮಾಡುವಲ್ಲಿ 'ವೀರಕಂಕಣ' ಕಟ್ಟಿಕೊಂಡಿದೆ ಎಂದು ಸನದಿಯವರು ಉದ್ಗರಿಸಿದ್ದಾರೆ. ಸನದಿಯವರ ರಾಷ್ಟ್ರಪ್ರೇಮ, ದೇಶಭಕ್ತಿ ಶ್ರೀಸಾಮಾನ್ಯರನ್ನು ಎಚ್ಚರಿಸುವಲ್ಲಿ ಪ್ರೇರಕವಾಣಿಯಾಗಿದೆ.

ಸ್ವತಂತ್ರ ಭಾರತವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬೆಳವಣಿಗೆ ಹೊಂದಿದೆ. ಜಾತ್ಯಾತೀತ ರಾಷ್ಟ್ರವೆಂದು ಪ್ರಪಂಚದಲ್ಲಿ ಹೆಸರಾಗಿದ್ದರೂ ಭಾರತದಲ್ಲಿ ಜಾತೀಯ, ಮತೀಯ ಗಲಭೆಗಳು ಆಗುತ್ತ ಬಂದಿವೆ. ಇದರಿಂದ ಅಶಾಂತಿ, ಕ್ರೌರ್ಯ, ತಲ್ಲಣಗಳು ಹೆಚ್ಚಿವೆ. ಇಂಥ ಸಂದರ್ಭಗಳಲ್ಲಿ ಕವಿಯಾದ ಸನದಿಯವರು ಕವಿತೆಗಳ ಮೂಲಕ ಗಲಭೆ, ಹಿಂಸೆಯನ್ನು ಖಂಡಿಸುವ ಕವಿತೆಗಳು ಅವರ ಸಮಗ್ರಕಾವ್ಯದಲ್ಲಿ ನಮಗೆ ದೊರೆಯುತ್ತವೆ. ಗುಜರಾತ್‌ನಲ್ಲಿ ಗಲಭೆ ನಡೆದಾಗ ದೇಶವೇ ತಲ್ಲಣಗೊಂಡದ್ದು ಈಗ ಇತಿಹಾಸ. ೧೯೬೯ ರಲ್ಲಿ

---

೪. 'ಹಿಮಗಿರಿಯ ಮುಡಿಯಲ್ಲಿ' ಸೂರ್ಯಪಾನ ಸಮಗ್ರಕಾವ್ಯ ಪುಟ ೧೩೩

ಅಹಮ್ಮದಾಬಾದ್‌ನಲ್ಲಿ ಮತೀಯ ಗಲಭೆ ನಡೆದಾಗ ಕವಿ ಸನದಿಯವರು 'ಈಶ್ವರ ಅಲ್ಲಾ' ಕವಿತೆ ಬರೆದರು.

ಈಶ್ವರ ಅಲ್ಲಾ ತೇರೇ ನಾಮ
ಸಬಕೋ ಸನ್ಮತಿ ದೇ ಭಗವಾನ್
ಶತಮಾನ ಗೀತ
ಯುಗಯುಗದ ಗೀತ
ಬುವಿಯನೆಲ್ಲಾ ಒಮ್ಮೆ ತೊಳೆದು ಹಾಕುವ ಪ್ರಳಯ
ಬಂದು ಹೋಗುವವರೆಗೂ
ಸಜ್ಜನರು ದಣಿಯದೆಯೆ ಹಾಡಿಯಾರು
'ಈಶ್ವರ ಅಲ್ಲಾ ತೇರೇ ನಾಮ' [೫]

ಹಾದಿಬೀದಿಯಲಿ ಭಾರೀ ಮಾರಾಮಾರಿ ಆಗುತ್ತಿರುವದರ ಬಗ್ಗೆ ಕವಿಗೆ ಪಶ್ಚಾತ್ತಾಪವಿದೆ. ಎಷ್ಟು ಸಲ 'History repeats itself' ದ್ವೇಷ-ರೋಷದ ದಾಳಿಗೆ ಕೊನೆಯೆಂದು? ಎಂದು ಆತಂಕಪಡುವ ಕವಿ ಹಿತವಾದ ಮಾತಿನಿಂದ ಜನರನ್ನು ಎಚ್ಚರಿಸುತ್ತಾರೆ.

ಒಂದೇ ಕಲ್ಲಿನ ಶಿಲ್ಪ
ಗುಡಿ ಗುರುದ್ವಾರಗಳು
ಒಂದೇ ಕಲ್ಲಿನ ಶಿಲ್ಪ
ಮಹಲು ಮಸಜೀದುಗಳು
ಒಂದೇ ಕಲ್ಲಿನ ಶಿಲ್ಪ
ಚರ್ಚು ಚೈತ್ಯಾಲಯ
ಒಂದೇ ಕಲ್ಲಿನ ಶಿಲ್ಪ

---

೫. 'ಈಶ್ವರ ಅಲ್ಲಾ' ಸೂರ್ಯಪಾನ ಸಮಗ್ರಕಾವ್ಯ, ಪುಟ ೩೦೨

ಸ್ತೂಪ ಮಠ ಶಿವಾಲಯ
ಒಂದೇ ಕಲ್ಲಿನ ಶಿಲ್ಪ
ಕೋಟಿ ಕೊತ್ತಳಗಳು
ಕಲ್ಲಿನೊಳು ನಿಂದಿಹವು
ನೂರು ಜನಜೀವನದ ಬಾವುಟಗಳು!
ಯಾವ ಬಾವುಟ ಕಪ್ಪು
ಯಾವ ಬಾವುಟ ತಪ್ಪು
ಯಾತಕಯ್ಯಾ ನಮ್ಮ ಅಂಗಳದಿ ವಾದ!
ಕಟ್ಟಲಾಗದ ನಮ್ಮ ಕೈಗಳಿಗೆ ಏತಕ್ಕೊ
ಕೆಡಹಿ ನೋಡುವ ಹುಲುವಿನೋದ!
ಅನಿತನಿತು ಬಂದ ಬೆಳೆ
ಈಗ ತಾನೇ ಕೊಯ್ದು ಒಟ್ಟಿರುವ ಬಣವೆಯಲಿ
ಬೆಂಕಿ ಕಡ್ಡಿಯ ಗೀರಿ ಒಗೆದ ಮೋದ! [೬]

ಕವಿ ಸನದಿಯವರಿಗೆ ಭಾರತದ ಸಾಮಾಜಿಕ ಜೀವನ ಕಲುಷಿತಗೊಳ್ಳುತ್ತಿರುವ ಬಗ್ಗೆ ತೀವ್ರ ವಿಷಾದವಿದೆ. ತಮ್ಮ ಎಲ್ಲ ಕವನಸಂಕಲನಗಳಲ್ಲಿ ಸಾಮಾಜಿಕ ಪ್ರಜ್ಞೆಯ ಕವನಗಳನ್ನು ಬರೆದು ಮಾನವೀಯ ಸ್ಪಂದನವನ್ನು ಅಭಿವ್ಯಕ್ತಿಸಿದ್ದಾರೆ. 'ಮನೆ ಮನೆಗೆ ಬೇಲಿ' ಅರ್ಥಪೂರ್ಣ ಶೀರ್ಷಿಕೆಯ ಕವಿತೆಯ ಮೂಲಕ ವಾಸ್ತವ ಸ್ಥಿತಿ ನಮ್ಮ ಅರಿವಿಗೆ ಬರುವಂತೆ ಮಾಡಿದ್ದಾರೆ.

ಮೋಹಗಳ ಬೇಲಿ
ದಾಹಗಳ ಬೇಲಿ
ತುಂಬಿದಭ್ಯಾಸಕ್ಕೆ ಖಾಲಿ ರಖವಾಲಿ

---

೬. 'ಈಶ್ವರ ಅಲ್ಲಾ' ಸೂರ್ಯಪಾನ ಸಮಗ್ರಕಾವ್ಯ, ಪುಟ ೩೦೪

ಬಯಲ ದೈವತಗಳಿಗೆ
ಧರ್ಮ ಮಂದಿರಗಳಿಗೆ
ನೀತಿ ನಿಯಮಾವಳಿಯ ಸೂಕ್ತ್ರಗಳ ಬೇಲಿ
ಜಾತಿ ಉಪಜಾತಿಗಳ ಕಟ್ಟುಪಾಡಿನ ಬೇಲಿ
ಸಣ್ಣ ಬೇಲಿಯ ಬದಿಗೆ ಮತ್ತೊಂದು ಬೇಲಿ
ಅಡಿಗಡಿಗೆ ಗಡಿಯಾಗಿ ತಡೆಯಿಡುವ ಬೇಲಿ [೭]

ಭಾರತೀಯರು ಪರಸ್ಪರ ಅಪನಂಬಿಕೆ, ಅವಿಶ್ವಾಸಗಳಲ್ಲಿ ಬದುಕುತ್ತಿದ್ದಾರೆ. ವ್ಯಕ್ತಿ-ವ್ಯಕ್ತಿಯ ನಡುವೆ, ಮತ-ಮತಗಳ ನಡುವೆ ಗೋಡೆ ಎದ್ದು ನಿಂತಿದೆ. ದ್ವೇಷ, ಅಸೂಯೆ ತಾಂಡವವಾಡುತ್ತಿದೆ. ಮನುಜ ಮನುಜನಂತಾಗಿ ಬಾಳಲಿಕೆ ಏಸು ಜೀವಮಾನ ಬೇಕು? ನಾಡು ನಾಡಿನಲಿ ಸಮರ ಸಂಘರ್ಷವೇತಕೆ? 'ಒಳಗಿನ ಧಗೆಯಲಿ ಬೇಯುವ ಬಗೆಯಲಿ ಅರಳುವವೇ ಹೂವು?'[೮] ಎಂದು ಮಾರ್ಮಿಕವಾಗಿ ಪ್ರಶ್ನಿಸುವ ಸನದಿಯವರು ಭಾರತದ ಅಭಿವೃದ್ಧಿಯ ಕನಸುಗಾರರೂ ಆಗಿದ್ದಾರೆ. ಸನದಿಯವರಿಗೆ 'ತಾಯಿ ಭಾರತಿ'ಯ ಮೇಲೆ ಅಪಾರ ಪ್ರೀತಿ ಗೌರವ. ಅದಕ್ಕಾಗಿಯೇ ಅವರು ಬರೆದ ಈ ಸಮೂಹಗೀತ ಗೀತಗುಂಜನವಾಗಿದೆ.

ಅರುಣ ಛಾಯೆ ಕಿರಣವಾಗಿ
ಬೆಳಗಿರೆ ಬಾನಾಂಗಣ
ಕರಣ ಕರಣದಲ್ಲಿ ನಿನ್ನ
ಸ್ಫುರಣ ಸ್ಫುರಣವೀ ದಿನ.

---

೭. 'ಮನೆ ಮನೆಗೆ ಬೇಲಿ' ಸೂರ್ಯಪಾನ ಸಮಗ್ರಕಾವ್ಯ, ಪುಟ ೩೪೫-೩೪೭

೮. 'ಅರಳುವವೇ ಹೂವು?' ಸೂರ್ಯಪಾನ ಸಮಗ್ರಕಾವ್ಯ, ಪುಟ ೩೯೦

ನಿನ್ನ ಬರವ ಕಾಯುತಿಹವು
ಗಿಡಮರದೆಲೆ ತೋರಣ
ತರುಲತೆಗಳ ಮುಗಿದ ಮುಗುಳು
ಇಬ್ಬನಿಗಳ ರಿಂಗಣ!

ನಿನ್ನ ಚರಣಗಳಿಗೆ ನಮ್ಮ
ಹರಣ ಸುಮನ ದರ್ಪಣ
ಹಣೆಗೆ ತಿಲಕದೊಡನೆ ನಮ್ಮ
ಹೃದಯ ರಕ್ತ ಚಂದನ!

ಭುವನ ಶಾಂತಿದಾತೆ ನಿನಗೆ
ಇದೋ ಕರುಳಿನಾರತಿ
ಭರತವರ್ಷದೊಡತಿ ನೀನು
ನಮ್ಮ ತಾಯಿ ಭಾರತಿ!

ನಮ್ಮ ಜನದ ಮನದ ಬನದ
ವರದೆ ನೀನು ಭಾರತಿ
ಬೆಳಗು ಬೈಗು ನಿನ್ನ ಸೆರಗು
ನಮಗೆ ನೀನೆ ಭಗವತಿ ![೯]

ಆಕಾಶವಾಣಿಯಲ್ಲಿ ಮತ್ತೆ ಮತ್ತೆ ಅನುರಣಿಸುವ 'ತಾಯಿ ಭಾರತಿ' ಸನದಿಯವರ ಹೃದಯದ ಸ್ಪಂದನವಾಗಿದೆ. ೧೯೯೨ ರ ಡಿಸೆಂಬರ್ ೫ ರಂದು ಅಯೋಧ್ಯೆಯಲ್ಲಿ ನಡೆದ ಘಟನೆ ದೇಶವನ್ನು ತಲ್ಲಣಗೊಳಿಸಿದ ಸಂದರ್ಭದಲ್ಲಿ ಸನದಿಯವರು 'ಕಾಯಬೇಕು' ಕವಿತೆ ಬರೆದು ತಮಗಾದ ದುಃಖ ವಿಷಾದವನ್ನು ತೋಡಿಕೊಂಡಿದ್ದು

---

೯. 'ತಾಯಿ ಭಾರತಿ' ಸೂರ್ಯಪಾನ ಸಮಗ್ರಕಾವ್ಯ, ಪುಟ ೪೦೮

ಗಮನಾರ್ಹವಾದದ್ದು. ಧರ್ಮದ ಹೆಸರಿನಲ್ಲಿ ಮುಗ್ಧ ಜನರು ಪಡುವ ದುಃಖ-ದುಮ್ಮಾನಗಳನ್ನು ಕವಿ ನೋವಿನಿಂದ ನಿರೂಪಿಸುತ್ತಾರೆ.

ನಾಲ್ಕಾಣೆಯ ಕೂಲಿಯಲ್ಲಿ
ದಿನಗಳೆಯುವ ದೀನರಿಗೆ
ಎಳೆಯರಿಗೆ ಹೆಂಗಳೆಯರಿಗೆ
ಯಾವ ಕೈ ಹೊಡೆಯಿತೋ ಆಕಸ್ಮಿಕ ಗುಂಡು!
ಕೊನೆಗಣ್ಣಿನ ಕಡೆನೋಟಕೆ ಕಂಡುದೆಲ್ಲಾ
ಯಮದೂತರ ದಂಡು!
ದಿನಕೆ ದಿನ ಮೀರಿಸುವೊಲು
ಗಾಳಿಯಲ್ಲಿ ವಿಷತುಷಾರ
ನೆಲದ ಮೇಲೆ ನೆತ್ತರ
ದೈವಭಕ್ತಿಯಮಲಿನಲ್ಲಿ ಅಗಣಿತ ಜನಸಂಹಾರ !
ಒಂದೆ ನೆಲದ ಮೊಲೆಯುಂಡವರೊಲವು
ಅಗ್ನಿಗಾಹಾರ. [೧೦]

ದೇಶದ ತುಂಬ ನಡೆದ ಹಿಂಸಾಚಾರದಲ್ಲಿ ಎಷ್ಟು ಜನ ಅಸುನೀಗಿದರು. ಹುಟ್ಟಿನಲ್ಲಿ ಯಾವ ಜಾತಿ? ಸತ್ತ ಮೇಲೆ ಯಾವ ಜಾತಿ? ಯಾವ ದೈವ ಯಾವ ಧರ್ಮ ಭೂಮಿ ಬಾನಿಗೆ ರಕ್ತದ ಈ ಕಡಲಿನಲ್ಲಿ ಶಾಂತಿ ಯಾರಿಗೆ? ಕವಿ ಸನದಿಯವರ ಕಾವ್ಯದಲ್ಲಿ ರೊಚ್ಚು ಪ್ರತೀಕಾರ, ಹಿಂಸೆ, ಆಕ್ರೋಶಕ್ಕೆ ಎಡೆಯಿಲ್ಲ. ಸನದಿಯವರು ಸರ್ವಧರ್ಮ ಸಮಭಾವದಿಂದಲೇ ತಮ್ಮ ಕಾವ್ಯ ಸಂವೇದನೆಯನ್ನು ವಿಚಾರ ಲಹರಿಯನ್ನು ಅಭಿವ್ಯಕ್ತಿಸುತ್ತಾರೆ. ಸಜ್ಜನಿಕೆ, ಸಹೃದಯತೆ,

---

೧೦. 'ಕಾಯಬೇಕು' ಮರುಭೂಮಿ, ಪುಟ ೧೭

ಸಮನ್ವಯ ಗುಣಗಳು ಸನದಿಯವರ ಕವಿ ವ್ಯಕ್ತಿತ್ವದ ವಿಶಿಷ್ಟತೆಯಾಗಿರುವದನ್ನು ನಾವು ಕಾಣುತ್ತೇವೆ. ಆದ್ದರಿಂದಲೇ ಅವರು ಹೇಳುತ್ತಾರೆ.

ವಿಶ್ವದ ಪರಿವಾರದಲ್ಲಿ
ಸಕಲರಿಗೂ ಸ್ವಾಗತ!
ಮತಮತಗಳ ತಿರುಳಿನಲ್ಲಿ
ಕಂಡನಿತೂ ಸಹಮತ!
ಭಿನ್ನವೆಂದು ಬಗೆದರೂನು
ಸಹಜೀವನ ಸಮ್ಮತ!
ಪರಕೀಯತೆ ಪರದೆಯಾಚೆ
ಯಾವುದೇಕೆ ಪರಮತ?
ಮನುಜ ಮನುಜನನುಜನೆಂದು
ಒಪ್ಪಿ ಅಪ್ಪಿಕೊಂಬ ಕ್ಷಣವೆ
ಸಹಜೀವನ ಸಂಕೇತ! ೧೧

ಸಹಜೀವನ ಭಾರತೀಯ ಸಾಮಾಜಿಕ ಬದುಕಿನ ಆದರ್ಶ. ಆದ್ದರಿಂದಲೇ ಭಾರತೀಯರು ಮಾನವತೆಯ ಆರಾಧಕರಾಗಬೇಕು. ಸನದಿಯವರು ಭಾರತೀಯತೆ ಮತ್ತು ಭಾರತೀಯ ಸಂಸ್ಕೃತಿಯನ್ನು ತಮ್ಮ ಕಾವ್ಯದ ತುಂಬ ಅನಾವರಣಗೊಳಿಸುತ್ತಾ ಉದಾರವಾದಿ ನಿಲುವನ್ನು ಪ್ರಕಟಿಸುತ್ತಾರೆ. ಸನದಿಯವರು ತಮ್ಮ ಕಾವ್ಯದ ಮೂಲಕ ಮಾನವತಾವಾದಿ ಧೋರಣೆಗಳನ್ನು ಗಟ್ಟಿಗೊಳಿಸುತ್ತಾರೆ. ವಾಸ್ತವ ಪ್ರಜ್ಞೆ ಅವರ ಕಾವ್ಯದಲ್ಲಿ ಎದ್ದು ಕಾಣುವ ಅಂಶವಾಗಿದೆ.

---

೧೧. 'ಕಾಯಬೇಕು' ಮರುಭೂಮಿ ಪುಟ ೧೭

ಬಹುಮುಖಿ ಸಂಸ್ಕೃತಿಯ ಭಾರತದ ಸಾಮಾಜಿಕ ಸಮಾನತೆ ಸರ್ವಧರ್ಮ ಸಮಭಾವವನ್ನು ಸನದಿ ತಮ್ಮ ಕವಿತೆಗಳಲ್ಲಿ ಧ್ವನಿಸುತ್ತಾರೆ. ಮುಸ್ಲಿಂ ಭಾವನೆ ಕಣ್ಮರೆಯಾಗಿ ಭಾರತೀಯ ಮನಸ್ಸಿನ ತುಡಿತ ಕಾವ್ಯಾಭಿವ್ಯಕ್ತಿಯಾಗಿರುವದೇ ಸನದಿ ಕಾವ್ಯದ ವಿಶಿಷ್ಟತೆಯಾಗಿದೆ. ರಾಷ್ಟ್ರಪ್ರೇಮದ ಹೆಸರಿನಲ್ಲಿ ಹಿಂದೂ-ಮುಸ್ಲಿಂರ ನಡುವೆ ಗೆರೆ ಕೊರೆದು ಭೇದ ಹುಟ್ಟಿಸುವ ರಾಜಕಾರಣಿಗಳನ್ನು ಕವಿ ಸನದಿ 'ಯಾವ ದೇಶದಲ್ಲಿ ಮೈದಾಳಿದ್ದು ನಿಮ್ಮ ಜೀವಕೋಶ' [೧೨] ಎಂದು ತರಾಟೆಗೆ ತೆಗೆದುಕೊಳ್ಳುತ್ತಾರೆ. ಹುಟ್ಟಿದ ಮನೆಯಲಿ ಅಡಿಗಡಿಗೆ ಗೋಡೆ ಕಟ್ಟಬೇಡಿ, ಈ ನೆಲ ನಮ್ಮದು ಎಂದರೆ ರಾಷ್ಟ್ರಭಕ್ತಿಗದು ನಿದರ್ಶನ. ಸುಮ್ಮನೆ ಪ್ರದರ್ಶನ ಮಾಡಬೇಡಿ ಎಂಬ ಕಿವಿಮಾತು ಹೇಳುತ್ತಾರೆ. ಸನದಿಯವರಲ್ಲಿ ಜಾತ್ಯಾತೀತ ಜೀವನ ಶ್ರದ್ಧೆಯಿದೆ. ಮನುಷ್ಯನನ್ನು ಗಾಢವಾಗಿ ಪ್ರೀತಿಸುವ ಗುಣವಿದೆ. 'ಸಂಭವ' ಸಂಕಲನದಲ್ಲಿ ಬರುವ ಕವಿತೆಯಲ್ಲಿ ಸನದಿಯವರು ಏಸು, ಮದರ್ ಥೆರೆಸಾ ಬಗ್ಗೆ ಬರೆಯುತ್ತಾರೆ. ಗೋಕರ್ಣದ ಬಗ್ಗೆ ಬರೆಯುತ್ತಾರೆ. ಆದರೆ ಮಕ್ಕಾ ಮಸೀದಿಯ ಬಗ್ಗೆ ಬರೆಯುವದಿಲ್ಲ. ಸನದಿ ಭಾರತೀಯತೆಯ ಬಗ್ಗೆ ಚಿಂತಿಸುತ್ತಾ ಅಂತರಾಷ್ಟ್ರೀಯತೆಯ ಬಗೆಗೆ ಆಲೋಚಿಸುತ್ತಾರೆ. ನೆಲ್ಸನ್ ಮಂಡೇಲಾ ಬಗ್ಗೆ ಬರೆಯುತ್ತ ವರ್ಣಭೇದ ನೀತಿಯ ವಿರುದ್ಧದ ಧ್ವನಿಯನ್ನು ಪ್ರಕಟಿಸುತ್ತಾರೆ. ಒಟ್ಟಿನಲ್ಲಿ ಕವಿ ಸನದಿಯವರು ಯಾವ ಪಂಥ ಪ್ರಣಾಲಿ ಬದ್ಧತೆಯ ಸುಳಿಗೆ ಸಿಕ್ಕದೆ ನಿಜವಾದ ಕಾವ್ಯಶ್ರದ್ಧೆಯಿಂದ ಭಾರತೀಯ ಕವಿ ಸಂವೇದನೆಯಿಂದ ತಮ್ಮ ಕವಿತೆಗಳನ್ನು ಆಕೃತಿಗೊಳಿಸಿದ್ದಾರೆ. ಅವರ

೧೨. 'ರಾಷ್ಟ್ರಪ್ರೇಮ' ಮರುಭೂಮಿ, ಪುಟ ೨೭

ಕವಿತೆಗಳು ಸಮಾನತೆ, ಸೋದರತೆ, ಬಂಧುತ್ವವನ್ನು ಅನಾವರಣಗೊಳಿಸುವಲ್ಲಿ ಯಶಸ್ವಿಯಾಗಿವೆ.

ಯಾರು ನಂಬಲಿ ಬಿಡಲಿ
ಯಾರೆಲ್ಲರ ಖುಷಿಗಾಗಿ
ಸುಮ್ಮಸುಮ್ಮನೆ ನಾನಾರನೂ ದ್ವೇಷಿಸುವದಿಲ್ಲ
ಹಲವರಲಿ ಕೆಲವರದೇ ಜುಟ್ಟು ಹಿಡಿದೆಳೆದು
ಅನಾಮತ್ತಾಗಿ ಎತ್ತಿ ನೆಲಕೆ ಎಸೆಯುವದಿಲ್ಲ
ಶತಶತಮಾನಗಳಿಂದ
ನಿಮ್ಮ ಕೃಪಾಛತ್ರದಡಿ ತುಂಬಿಟ್ಟ
ದ್ವೇಷಗಳ ಬೀಜಗಳ ಕಣಜವನೆ ಕಿತ್ತಿ
ಕಡಲಿಗೆಸೆಯುವ ತನಕ
ಸುಮ್ಮಸುಮ್ಮನೆ ನಾನಾರನೂ ದ್ವೇಷಿಸುವದಿಲ್ಲ.

ದ್ವೇಷ, ಅಸೂಯೆ, ಹಿಂಸೆಯ ಬೆಂಕಿಯನ್ನು ಕಡಲಿಗೆಸೆಯುವ ತವಕ ಸನದಿಯವರ ಕಾವ್ಯದಲ್ಲಿ ಸ್ಥಾಯಿಯಾಗಿದೆ. ಅವರ ಕಾವ್ಯದಲ್ಲಿ ಮೌಲ್ಯಗಳ ಮೆರವಣಿಗೆಯನ್ನೇ ಕಾಣುತ್ತೇವೆ.

೦೦೦

ಸನದಿಯವರ ಕಾವ್ಯಾನುವಾದ - ಕೆಲವು ಟಿಪ್ಪಣಿಗಳು

ಎಂ. ಜಿ. ಹೆಗಡೆ

ಸನದಿಯವರ ಅನುವಾದ ಸಾಹಿತ್ಯ ತುಂಬ ವಿಸ್ತಾರವಾದದ್ದೇನೂ ಅಲ್ಲ. ಅವರ ಎಲ್ಲಾ ಕವನ ಸಂಕಲನಗಳಲ್ಲೂ ಒಂದೊ, ಎರಡೊ ಅನುವಾದಿತ ಕವನಗಳಿವೆ. ಇವು ಶೇಕ್ಸಪಿಯರ್‌ನಿಂದ ಹಿಡಿದು ಹೇಮಂತ ಕುಲಕರ್ಣಿ ವರೆಗೆ ಬೇರೆ ಬೇರೆ ಕವಿಗಳು ಬೇರೆ ಬೇರೆ ಕಾಲಘಟ್ಟದಲ್ಲಿ ಬರೆದ ಇಂಗ್ಲೀಷ್ ಕವನಗಳ ಅನುವಾದಗಳು. ಇತ್ತೀಚೆಗೆ ಅಬ್ರಹಾಂ ಲಿಂಕನ್‌ನ ಕವನಗಳ ಅನುವಾದದ ಪುಟ್ಟ ಸಂಕಲನವನ್ನು ಅವರು ಪ್ರಕಟಿಸಿದ್ದಾರೆ. ತುಂಬ ಹಿಂದೆಯೇ ಮಾಡಿದ್ದ ಖಲಿಲ್ ಜಿಬ್ರಾನ್‌ನ The wanderer (ಸಂಚಾರಿ) ಅನುವಾದ ಕೂಡ ಈಗ ಕೆಲವು ತಿಂಗಳ ಹಿಂದೆ ಬಂದಿದೆ. ಇವುಗಳೊಂದಿಗೆ ಮರಾಠಿಯಿಂದ ಕೆಲವು ಕವನಗಳು, ಹಿಂದಿಯಿಂದ ಒಂದು ಕಾದಂಬರಿ, ನಾಲ್ಕು ಜೀವನ ಚಿತ್ರಗಳು ಹಾಗೂ ಎರಡು ಮಕ್ಕಳ ಸಾಹಿತ್ಯ ಕೃತಿಗಳನ್ನು ಅನುವಾದಿಸಿರುವುದನ್ನು ಸೇರಿಸಿಕೊಂಡರೆ ಈ ಚಿತ್ರ ಪೂರ್ತಿಯಾದಂತಾಗುತ್ತದೆ. ಪ್ರಸ್ತುತ ಅವರ ಕಾವ್ಯಾನುವಾದವನ್ನಷ್ಟೇ ಗಮನಿಸಿ ಸಿದ್ಧಪಡಿಸಿದ್ದು.

ಸನದಿಯವರ ಅನುವಾದ ಮಾರ್ಗವನ್ನು ಒಂದು ಬಗೆಯ 'ಮಧ್ಯಮ ಮಾರ್ಗ' ಎಂದು ಗುರುತಿಸಬಹುದು. ಅಂದರೆ ಮೂಲ ಕೃತಿಯನ್ನು ಪದಶಃ ಭಾಷಾಂತರಿಸಲು ಅವರು ಇಷ್ಟಪಡುವುದಿಲ್ಲ; ಮತ್ತೆ, ತೀರ ಸ್ವಾತಂತ್ರ್ಯವಹಿಸಿ ಪುನಃ ಸೃಷ್ಟಿಗೂ ಮುಂದಾಗುವುದಿಲ್ಲ. ಅನುವಾದಕ್ಕೆಂದು ಎತ್ತಿಕೊಂಡ ಪರಕೀಯ ಕೃತಿಯನ್ನು ಕನ್ನಡ ಭಾಷೆ / ಸಂಸ್ಕೃತಿಗೆ ಅನ್ಯವೆನ್ನಿಸದ ರೀತಿಯಲ್ಲಿ, ಕನ್ನಡ ಕವನವೇ ಎಂದು ಅನಿಸುವ ಬಗೆಯಲ್ಲಿ ಅನುವಾದಿಸುವ ದಾರಿ ಇದು. ಈ ಮಾರ್ಗದ ಆದ್ಯರು ಬಿ. ಎಂ. ಶ್ರೀಕಂಠಯ್ಯನವರು. 'ಇಂಗ್ಲೀಷ್ ಗೀತೆಗಳು' ಸಂಕಲನದ 'ಅರಿಕೆ'ಯ ಮಾತಿನಲ್ಲಿ ಶ್ರೀಯವರು ಹೀಗೆನ್ನುತ್ತಾರೆ :

> 'ಇಲ್ಲಿ ಕೊಟ್ಟಿರುವ ಕವನಗಳೆಲ್ಲ ಇಂಗ್ಲೀಷ್ ಕಾವ್ಯಮಾಲೆಯ ನಾಯಕರತ್ನಗಳೆಂದು ಅಂದುಕೊಂಡವಲ್ಲ... ಆಗಾಗ್ಗೆ ಓದುತ್ತಿರುವಾಗ ನನ್ನ ಮನಸ್ಸಿಗೊಪ್ಪಿ, ನನ್ನ ಕೈಮೀರದುವಾಗಿ ಕಂಡುಬಂದ ಗೀತಗಳಿವು'.

ಸನದಿಯವರ ಕಾವ್ಯಾನುವಾದದ ಕುರಿತೂ ನಾವು ಹೇಳಬಹುದಾದ ಮಾತುಗಳಿವು.

ಸನದಿಯವರು ಅನುವಾದಕ್ಕೆಂದು ಎತ್ತಿಕೊಂಡ ಕವನಗಳನ್ನೆಲ್ಲ ಒಟ್ಟಾಗಿ ನೋಡಿದಾಗ ಅವರು ತಮ್ಮ ಕಾವ್ಯ ಪ್ರಕೃತಿಗೆ ಹಾಗೂ ಕಾಣ್ಕೆಗೆ ಸಮ್ಮತವಾದ / ಸಮೀಪದಲ್ಲಿರುವ ಕವನಗಳನ್ನೇ ಆಯ್ದುಕೊಂಡಿರುವುದು ಖಚಿತವಾಗುತ್ತದೆ. ಅವರ 'ನೆಲಸಂಪಿಗೆ' ಕವನದ ಆಶಯಕ್ಕೂ ಅದೇ ಹೆಸರಿನ ಸಂಕಲನದಲ್ಲಿರುವ 'ಪ್ರಕೃತಿಯ ಪಾಠ' (ಬೆನ್ ಜಾನ್ಸನ್)ಎಂಬ ಕವನದ ಆಶಯಕ್ಕೂ ಹತ್ತಿರದ ಸಂಬಂಧವಿದೆ. ಇದೇ ರೀತಿ ತಾಜಮಹಲನಲ್ಲಿರುವ 'ಪ್ರೇಮ ಪ್ರಣಾಲಿ' (-ಶೆಲ್ಲಿ) ಕವನದೊಂದಿಗೆ ಆ ಸಂಗ್ರಹದ ಇನ್ನಿತರ ಕವನಗಳು

ಕುಟುಂಬ ಬಾಂಧವ್ಯವನ್ನು ಹೊಂದಿವೆ. ಹೀಗೆ ಈ ಪಟ್ಟಿಯನ್ನು ವಿಸ್ತರಿಸಬಹುದು. ಅಂದರೆ ಸನದಿಯವರು ಅನುವಾದಿಸಿರುವ ಕವನಗಳು ಪ್ರತಿನಿಧೀಕರಣದ ಪರ್ಯಾಯ ಮಾರ್ಗಗಳನ್ನು ಒದಗಿಸುವುದಕ್ಕಿಂತ ಅವರಿಗೆ ಸಮ್ಮತವಾದ ಕಾವ್ಯಮಾರ್ಗವನ್ನು ಸ್ಥಿರೀಕರಿಸುವ ರಚನೆಗಳಾಗಿವೆ. ಹೀಗಾಗಿಯೇ ಈ ಅನುವಾದಿತ ಕವನಗಳು ಸಂಗ್ರಹದ ಇನ್ನಿತರ ಕವನಗಳೊಂದಿಗೆ ಸಾಮರಸ್ಯದ ಸಹಬಾಳ್ವೆ ನಡೆಸುತ್ತವೆ; ಪೂರಕ/ಪೋಷಕ ಪಾತ್ರ ನಿರ್ವಹಣೆಗೆ ಮುಂದಾಗುತ್ತವೆ. ಸನದಿಯವರೇ ಅನುವಾದಿಸಿರುವ ವಿಟ್‌ಮನ್‌ನ ಈ ಸಾಲುಗಳನ್ನು ಆ ಕವನದ ಸಂದರ್ಭಕ್ಕೆ ಸಂಬಂಧವೇ ಇರದ ಈ ವಾಗ್ವಾದಕ್ಕೆ ಸುಮ್ಮನೇ ತಮಾಷೆಗಾಗಿ ಎಳೆದು ತರುತ್ತಿದ್ದೇನೆ :

'ಹೀಗೆ ನನ್ನವೆ ಗುರುತು ನನಗೆ ಅವು ಸಲಿಸುವವು
ತಮ್ಮವಾಗಿಸಿಕೊಂಡು ನನ್ನ ಸಂಕೇತಗಳನೆಲ್ಲ'.

ತಮಾಷೆಯ ಹೊರತಾಗಿಯೂ ಈ ಸಾಲುಗಳು ಕಾವ್ಯಾನುವಾದವನ್ನು ಕುರಿತ ತಾತ್ವಿಕ ತಿಳಿವಳಿಕೆಯೊಂದನ್ನು ಮಂಡಿಸಲು ಉಪಯುಕ್ತವಾಗಿವೆ. ಅದೆಂದರೆ - ಓದುಗನ ದೃಷ್ಟಿಯಿಂದಲೂ ಸಹ. ಅನುವಾದಿತ ಕವನವೆಂದರೆ ಅವನ ಭಾಷೆಯಲ್ಲಿರುವ ಮತ್ತೊಂದು ಕವನ ಮಾತ್ರ. ಮೂಲಕ್ಕೆ ಆ ಕವನ ಎಷ್ಟು ನಿಷ್ಠವಾಗಿದೆ ಎಂಬುದು ಕೇವಲ ಶೈಕ್ಷಣಿಕ ಆಸಕ್ತಿಯ ಪ್ರಶ್ನೆ ಮಾತ್ರ ಆಗಿರಬಹುದಷ್ಟೇ. ಇಷ್ಟಕ್ಕೂ ಅನುವಾದ ಆಕರ ಭಾಷೆಗೆ ಯಾವ ಕೊಡುಗೆಯನ್ನೂ ನೀಡಲಾರದು. ಅದರ ಕೊಡುಗೆ ಏನಿದ್ದರೂ ಸ್ವೀಕಾರ ಮಾಡಿದ ಭಾಷೆಗೇ. ಹೀಗಾಗಿ ಅನುವಾದಿತ ಕವನ 'ಕವನ'ವಾಗಿಯೇ ಓದಿಸಿಕೊಳ್ಳುತ್ತಿದೆಯೇ ಎನ್ನುವುದೇ ಮುಖ್ಯ ಪ್ರಶ್ನೆಯಾಗುತ್ತದೆ. ಆಧುನಿಕ ನಿರಚನ ಸಿದ್ಧಾಂತ ಹಾಗೂ ವಾಚಕಾಭಿಮುಖ ವಿಮರ್ಶಾ ಪ್ರಸ್ಥಾನಗಳಂತೂ ಮೂಲ

ಲೇಖಕನಲ್ಲಾಗಲಿ ಪಠ್ಯದಲ್ಲಾಗಲಿ ಅರ್ಥನಿಹಿತವಾಗಿರುತ್ತದೆ ಎನ್ನುವುದು ಒಂದು ಭ್ರಮೆ ಎನ್ನುತ್ತವೆ. ಅವುಗಳ ಪ್ರಕಾರ ಓದುವಿಕೆಯ ಪ್ರಕ್ರಿಯೆಯಲ್ಲೇ ಅರ್ಥದ ಉತ್ಪಾದನೆ ಆಗುತ್ತದೆ. ಹಾಗೂ ಪ್ರತಿಯೊಂದು ಓದೂ ಅದರಷ್ಟಕ್ಕೆಯೇ ಸ್ವಯಂಪೂರ್ಣವಾದುದಾಗಿರುತ್ತದೆ. ಈ ದೃಷ್ಟಿಯಿಂದ ಅನುವಾದವನ್ನು ಸಹಿತ ಮೂಲ ಕೃತಿಯ 'ಒಂದು' ಓದು ಅಂತಲೇ ಪರಿಗಣಿಸಬೇಕಾಗುತ್ತದೆ. ಹೀಗಾಗಿಯೇ ಒಂದು ನಿರ್ದಿಷ್ಟ ಸ್ವೀಕಾರ ಭಾಷೆಯಲ್ಲಿ ಒಂದೇ ಕೃತಿಯ ಹಲವು ಅನುವಾದಗಳು ಸಾಧ್ಯ ಹಾಗೂ ಪ್ರತಿಯೊಂದು ಅನುವಾದವೂ ಭಾಷಿಕ ರಚನೆಯೊಂದರ ಅಕ್ಷಯ ಸಾಮರ್ಥ್ಯಕ್ಕೆ ಮತ್ತೊಂದು ನಿದರ್ಶನವನ್ನು ಒದಗಿಸುತ್ತದೆ. ಹಾಗೆಯೇ ಭಾಷೆಯೊಂದರ ವಾಗ್ವಿಶೇಷ ಅದಕ್ಕೇ ಪ್ರತ್ಯೇಕವಾದದ್ದು ಎಂಬುದಕ್ಕೆ ಕೂಡ.

ಸ್ವೀಕಾರ ಭಾಷೆಯೊಂದರಲ್ಲಿ ಒಂದೇ ಕವನದ ಅನುವಾದಗಳು ಭಿನ್ನವಾಗುವುದಕ್ಕೆ ಅನುವಾದಕರು ಮೂಲವನ್ನು ಓದುವ/ಗ್ರಹಿಸುವ ಕ್ರಮದಲ್ಲಾಗುವ ವ್ಯತ್ಯಾಸವೂ ಕಾರಣ ಎನ್ನುವುದಕ್ಕೆ ಒಂದು ಉದಾಹರಣೆ : ಮೂಲ, ಶೇಕ್ಸಪಿಯರ್‌ನ ಸುನೀತದ ಈ ಸಾಲುಗಳು :

Look, what an unthrift in the world doth spend
Shifts but his place, for still the world enjoys it ;

ಇದನ್ನು ಲಕ್ಷ್ಮೀನಾರಾಯಣ ಭಟ್ಟರು ಅನುವಾದಿಸಿರುವುದು ಹೀಗೆ:

ದುಂದು ಬಳಸಿದ್ದು ಸಹ ದಂಡ ಖಂಡಿತ ಅಲ್ಲ,
ಬೇರೆ ಕೈಸೇರಿ ಲೋಕ ಅದನ್ನು ಸವಿಯುವುದು ;

ಈಗ ಸನದಿನವರ ಅನುವಾದ :

ತನ್ನ ನಿಧಿಯನ್ನೆಲ್ಲ ಸೂರೆಗೊಳಿಸಿದವನೊಬ್ಬ
ಅಗಲಿ ಹೋದರು ಜಗವು ಅವನ ಸ್ಮೃತಿ ಸವಿಯುವುದು !

ಅನುವಾದ, ಓದಿನ / ಗ್ರಹಿಕೆಯ ಒಂದು ರೂಪವಾಗಿರುವುದರಿಂದಲೇ ಈ ಭಿನ್ನ ಪಾಠಗಳು ಸಾಧ್ಯವಾಗಿವೆ. ಇದು ಶೇಕ್ಸಪಿಯರ್‌ನನ್ನು ವಿಭಿನ್ನ ಸಂಸ್ಕೃತಿಯ / ಕಾಲಘಟ್ಟದ / ಭಾಷೆಯ ಜಾಯಮಾನಕ್ಕೆ ಒಗ್ಗುವಂತೆ ಅನುವಾದಿಸುವಾಗ ಎದುರಾಗುವ ತೊಡಕಿನಿಂದ ಆದದ್ದಲ್ಲ.

ಮೇಲೆ ಹೇಳಿದ ತೊಡಕನ್ನು ಸನದಿಯವರು ಶೇಕ್ಸಪಿಯರ್‌ನ King Henry V ನಾಟಕದ ಕೆಲವು ಸಾಲುಗಳನ್ನು ಅನುವಾದಿಸುವಾಗ ಎದುರಿಸಿದ್ದಾರೆ. ಆ ಸಾಲುಗಳಲ್ಲಿ balm, ball, sceptre, mace ನಿಂದ ಹಿಡಿದು wretched slave ವರೆಗೆ ಪ್ರತಿ ಶಬ್ದವೂ ಎಲಿಜಬೆಥ್‌ನ ಯುಗದ ಸಾಮಾಜಿಕ - ರಾಜಕೀಯ ಸಂಸ್ಕೃತಿಯ ವಾಸನೆಯನ್ನು ದಟ್ಟವಾಗಿ ಹಿಡಿದಿಟ್ಟುಕೊಂಡವುಗಳಾಗಿವೆ. Phoebus, Elysium, Hyperion ಮೊದಲಾದ ಗ್ರೀಕ್ ಪುರಾಣದ ಅನುಸೂಚನೆಗಳು ಬೇರೆ ಇವೆ. ಮೇಲಾಗಿ ಇಂಗ್ಲೆಂಡಿನ ಅರಸೊತ್ತಿಗೆಯ ಅಂದಿನ ಬವಣೆಗಳನ್ನು ಬಿಚ್ಚಿಡುವ ಆ ಸಾಲುಗಳ ಹಿಂದೆ ನಿರ್ದಿಷ್ಟ ಐತಿಹಾಸಿಕ - ರಾಜಕೀಯ ಸಂದರ್ಭ ಹಾಗೂ ಸಾಂಸ್ಕೃತಿಕ ಪರಂಪರೆ ಗ್ರಹೀತವಾಗಿದೆ. ಏಕೆಂದರೆ ಆ ಸಾಲುಗಳನ್ನು ಹೇಳುತ್ತಿರುವವನೂ ಅವನ್ನು ಕೇಳುತ್ತಿರುವವನೂ ಒಂದೇ ಸಂಸ್ಕೃತಿಗೆ ಸೇರಿದವರು. ಮತ್ತೆ ಆ ಕೃತಿಯ ಸೂಚಿತ ಓದುಗ ಕೂಡ ಅದೇ ಸಂಸ್ಕೃತಿಗೆ ಸೇರಿದವನು. ಹೀಗಾಗಿ ಅಲ್ಲಿ ಸಂವಹನ

ಒಂದು ತೊಡಕಾಗುವುದಿಲ್ಲ. ಆದರೆ ಬೇರೆ ಸಂಸ್ಕೃತಿ / ಕಾಲಘಟ್ಟ / ಭಾಷೆಯಲ್ಲಿ ಅದೇ ಅನುಭವಗಳನ್ನು ಸಂವಹಿಸಬೇಕಾದ ಅನುವಾದಕ ಗ್ರಹೀತಗಳ ಮೊರೆ ಹೋಗುವಂತಿಲ್ಲ. ಇಂತಹ ಸಂದರ್ಭಗಳಲ್ಲಿ ಸನದಿಯವರು ಸ್ಥಾನಿಕ / ಪ್ರಾದೇಶಿಕ ಅನುಭವ ವಿಶೇಷವನ್ನು ಸಾರ್ವತ್ರಿಕ ಅನುಭವದ ನೆಲೆಗೆ ತಂದುಕೊಳ್ಳುತ್ತಾರೆ. ಎಲಿಜಬೆಥ್‌ನ ಪ್ರೇಕ್ಷಕರಿಗೆ / ಓದುಗರಿಗೆ ಗ್ರಹೀತವಾಗಿದ್ದ ರಾಜ - ಗುಲಾಮರ ಕಲ್ಪನೆ ಸನದಿಯವರ ಅನುವಾದದಲ್ಲಿ ಹೆಚ್ಚು ಸಾರ್ವತ್ರಿಕವಾದ ಒಡೆಯ - ಆಳಿನ ಕಲ್ಪನೆಯಾಗುತ್ತದೆ.

ಸನದಿಯವರು ಅನುವಾದದಲ್ಲಿ ಉಪಯೋಗಿಸುವ ಮತ್ತೊಂದು ತಂತ್ರವೆಂದರೆ ಕನ್ನಡ ಓದುಗನಿಗೆ ತೀರ ಅಪರಿಚಿತವಾದ ಹಾಗೂ ಮೂಲ ಕವನದ ಆಶಯವನ್ನು ಗ್ರಹಿಸಲು ತೀರ ಅನಿವಾರ್ಯವಲ್ಲದ ವಿವರಗಳನ್ನು ಕೈ ಬಿಡುವುದು, ಇಲ್ಲವೆ ಓದುಗನಿಗೆ ಪರಿಚಿತವಿರುವ ಸಮಾನ ವಿವರವೊಂದನ್ನು ಆ ಸ್ಥಾನದಲ್ಲಿ ಆದೇಶಿಸುವುದು. ಇದನ್ನು ಪ್ರಾದೇಶೀಕರಣ ಎನ್ನೋಣ. ಶ್ರೀಯವರು ಲಾರ್ಡ್ ಉಲಿನ್‌ನ ಮಗಳ ಪ್ರೇಮ ದುರಂತವನ್ನು ಕಾರಿ ಹೆಗ್ಗಡೆಯ ಮಗಳ ದುರಂತವಾಗಿಸಿದ್ದು ಇದಕ್ಕೆ ಒಂದು ಉದಾಹರಣೆ : ಸನದಿಯವರು ಅನುವಾದಿಸಿರುವ 'ಪ್ರಕೃತಿಯ ಪಾಠ' ಹಾಗೂ 'ಒಂದು ತೆನೆ' ಕವನಗಳಲ್ಲೂ ಪ್ರಾದೇಶೀಕರಣದ ಉದಾಹರಣೆಗಳಿವೆ. 'ಪ್ರಕೃತಿಯ ಪಾಠ' ಬೆನ್ ಜಾನ್ಸನ್‌ನ ಕವನದ ಅನುವಾದ. ಆ ಕವನದಲ್ಲಿ ಓಕ್ ಮರ ಹಾಗೂ ಲಿಲಿ ಹೂಗಳನ್ನು ರೂಪಕವಾಗಿ ಬಳಸುತ್ತ ಕೇವಲ ದೈಹಿಕವಾಗಿ ಬೆಳೆಯುವುದರಿಂದಲಾಗಲಿ ದೀರ್ಘಕಾಲ ಬದುಕುವುದರಿಂದಾಗಲಿ ಮನುಷ್ಯ ಶ್ರೇಷ್ಠನೆನಿಸುವುದಿಲ್ಲ ಎಂದು ಬೆನ್ ಜಾನ್ಸನ್

ಸೂಚಿಸುತ್ತಾನೆ. ಈ ಕವನದ ಲಿಲಿ ಹಾಗೂ ಓಕ್ ಕನ್ನಡದ ಓದುಗರಿಗೆ ಪರಿಚಿತವಲ್ಲ. 'ಪ್ರಕೃತಿಯ ಪಾಠ' ಗ್ರಹಿಸಲು ಅವೇ ಅನಿವಾರ್ಯವೆಂತಲೂ ಇಲ್ಲ. ಹೀಗಾಗಿ ಸನದಿಯವರು ಅನುವಾದದಲ್ಲಿ ಆಲ - ಮಲ್ಲಿಗೆಗಳನ್ನು ಲಿಲಿ - ಓಕ್‌ಗಳ ಸ್ಥಾನದಲ್ಲಿ ಆದೇಶಿಸಿದ್ದಾರೆ.

ಅನುವಾದ ಒಂದು ಓದು ಎಂದಾದ ಮೇಲೆ ಹೇಗೆ ಯಾವುದೇ ಓದಿನಲ್ಲಾದರೂ ಓದುಗನ ಪೂರ್ವಾಗ್ರಹಗಳು ಅವನ ಗ್ರಹಿಕೆಯನ್ನು / ಪ್ರತಿಕ್ರಿಯೆಯನ್ನು ನಿಯಂತ್ರಿಸುತ್ತವೆಯೋ ಅದೇ ರೀತಿ ಅನುವಾದಕನ ಸಾಂಸ್ಕೃತಿಕ ಪರಿಸರವೂ ಅನುವಾದದಲ್ಲಿ ಪ್ರವೇಶ ಪಡೆಯುವುದು ಅನಿವಾರ್ಯ. ಉದಾಹರಣೆಗೆ ಕ್ರಿಸ್ಟಿನಾ ರೊಸಟ್ಟಿಯ 'song' ಕವನದ ಅನುವಾದ. ಆಕೆ ಮರಣಶಯ್ಯೆಯಲ್ಲಿ ಬರೆದ ಈ ಕವನದಲ್ಲಿ ಸಾವನ್ನು ನಿರ್ಭೀತಿಯಿಂದ ಸ್ವಾಗತಿಸಿದ್ದರೂ ಸಹ, ಶೋಕ ಸಂಕೇತಗಳನ್ನು ನಿರಾಕರಿಸಿದ್ದರೂ ಸಹ ಒಂದು ಬಗೆಯ ವಿಷಣ್ಣತೆ ಕವನದುದ್ದಕ್ಕೂ ವ್ಯಾಪಿಸಿಕೊಂಡಿದೆ. ಈ ಕವನದ ಸಾಲುಗಳಿವು:

And dreaming through the twilight
That doth not rise nor set,
Haply I may remember,
And haply may forget

ಸನದಿಯವರ ಅನುವಾದ :

ಮೂಡು ಮುಳುಗುಗಳಿರದ ಮಂದ ಬೆಳಕಿನ ಸೀಮೆ
ಸ್ವಪ್ನದೊಳು ಸುತ್ತುವೊಲು ನಾ ದಾಟುತಿರಲು,
ನಿನ್ನ ನೆನೆಯಲು ಬಹುದು ಒಂದು ಸಾರೆ !

ನೆನೆಯದಿರಲೂ ಬಹುದು - ಹೇಳಲಾರೆ !!

ಇಲ್ಲಿ ಮೂಲದಲ್ಲಿಲ್ಲದ 'ದಾಟುತಿರಲು' ಅನುವಾದದಲ್ಲಿ ಪ್ರವೇಶ ಪಡೆದಿರುವುದನ್ನು ಗಮನಿಸಬೇಕು. ಮರಣಾನಂತರ ಆತ್ಮ ಸುತ್ತುತ್ತಿರುತ್ತದೆ ಎಂಬ ಗ್ರಹಿಕೆಯಿಂದ ಬಂದ ಪದವಿದು. ಹೀಗಾಗಿ ಮೂಲದಲ್ಲಿದ್ದ ಚಿರಶಾಂತಿಯಲ್ಲಿ ನಿದ್ರಿಸುತ್ತಿರುವ ನಂಬಿಕೆ ಅನುವಾದದಲ್ಲಿ ಮಾಯವಾಗಿದೆ. ಮೂಲದ ವಿಷಣ್ಣ ಭಾವವೂ ಸಹ ಮರೆಯಾಗಿದೆ. ಮೂಲದಲ್ಲಿಲ್ಲದ ಉದ್ಗಾರವಾಚಕ ಚಿಹ್ನೆಗಳೂ ಆ ಭಾವವನ್ನು ತಗ್ಗಿಸುವಲ್ಲಿ ನೆರವಾಗಿವೆ.

ಹೀಗಾಗಿ, ತಮಾಷೆಗಾಗಿ ಎಳೆದು ತಂದ ಸಾಲುಗಳು ಸನದಿಯವರ ಕಾವ್ಯಾನುವಾದವನ್ನು ಕುರಿತು ಹಾಗೂ ಭಾಷಾಂತರ ಎಂಬ ಸಾಂಸ್ಕೃತಿಕ ಚಟುವಟಿಕೆಯ ಕುರಿತು ನಾವು ಮಾಡಬಹುದಾದ ಒಂದು ಮಹತ್ವದ statement ಕೂಡ :

"ಹೀಗೆ ನನ್ನವೆ ಗುರುತು ನನಗೆ ಅವು ಸಲಿಸುವವು
ತಮ್ಮವಾಗಿಸಿಕೊಂಡು ನನ್ನ ಸಂಕೇತಗಳನೆಲ್ಲ".

ooo

ಕ್ಷಣದ ತುಡಿತದ ನಕ್ಷೆ : ಮುಂಬೈ ಮಳೆ

ಡಾ. ಕಮಲಾ ಹೆಮ್ಮಿಗೆ

'ಕುಮಾರವ್ಯಾಸನದೋ ಭಾಮಿನಿ
ನನ್ನದೋ ಬರೀ ಮಿನಿ'

ಎಂಬ ಎಚ್. ದುಂಡಿರಾಜ ಚುಟುಕು ಬಹು ಜನಪ್ರಿಯ. ಎಂ. ಅಕಬರ ಅಲಿ, ಗುಂಡ್ಮಿ ಚಂದ್ರಶೇಖರ ಐತಾಳರು, ಎಸ್. ವಿ. ಪರಮೇಶ್ವರಭಟ್ಟರು, ಚಂಪಾ, ಸಿ. ಪಿ. ಕೆ., ವೈಯನ್ಕೆ ಮುಂತಾದವರು 'ಚುಟುಕು' ಪ್ರಕಾರವನ್ನು ಶ್ರೀಮಂತಗೊಳಿಸಿದ್ದಾರೆ. ಇಂಗ್ಲೀಷಿನ ಲಿಮರಿಕ್ಸ್, ಕನ್ನಡದ ಅಣಕವಾಡು ಆಗಿದೆ. ಇದನ್ನೇ ನಾಗವರ್ಮ 'ಇಡುಕುಂಗಬ್ಬ' ಎಂದಿರಬಹುದು.

ಬರಬರುತ್ತಾ ಚುಟುಕುಗಳು ಪತ್ರಿಕೆಯ 'ಫಿಲ್ಲರ್'ಗಳಾಗತೊಡಗಿದವು. ಸೌಜನ್ಯದ ಎಲ್ಲೆ ಮೀರಿದ ರಚನೆಗಳಾಗಿ ಪಾರ್ಥೇನಿಯುಂದಂತೆ ಹುಟ್ಟಿಕೊಂಡವು. ಜಯಂತ ಕಾಯ್ಕಿಣಿಯವರು ಇತ್ತೀಚೆಗೆ ಅಂಕೋಲಾದಲ್ಲಿ ನಡೆದ ಸಭೆಯೊಂದರಲ್ಲಿ 'ಚುಟುಕು ಕವಿಗಳು ಕೇವಲ ಜಾಗ ತುಂಬುವವರು', ಎಂಬುದನ್ನು ಸೋದಾಹರಣವಾಗಿ ವಿವರಿಸಿದಾಗ ಹೌದೆನಿಸಿತು. ಚುಟುಕಾಗೂ ಗುಟುಕಾಗೂ ಅಭೇದ ಕಲ್ಪಿಸಿದವರೂ ಉಂಟು! ಗೋಡೆ ಬರೆಹದ 'ಜಗತ್ತು ಪೂರಬದೆಡೆಗೆ ನಡೆದಿದೆ....'.. ಗೂ ಲಯಬದ್ಧತೆ

ಕಲ್ಪಿಸಿಬಿಟ್ಟಲ್ಲಿ ಅದೂ ಚುಟುಕು ಅಥವಾ ಹನಿಗವನ ಆಗಿಬಿಡುವ ಅಪಾಯವಿದೆ.

ಕೆ. ವಿ. ತಿರುಮಲೇಶ್, ಮುಕ್ತಾಯಕ್ಕ, ದುಂಡಿರಾಜ್, ಕಣವಿಯವರು, ಬಿ. ಆರ್. ಲಕ್ಷ್ಮಣರಾವ್ ಮುಂತಾದ ಕವಿಗಳು ಹನಿಗವನ ಅಥವಾ ಚುಟುಕುಗಳ ಮೂಲಕ, ತಮ್ಮ ಸಾಮಾಜಿಕ ಕಳಕಳಿಯನ್ನೂ ನಿಸರ್ಗ ಸಂದೇಶವನ್ನೂ ಬದುಕಿನ ತಾತ್ವಿಕತೆಯನ್ನೂ ಅಭಿವ್ಯಕ್ತಿಸಿದ್ದಾರೆ. ಅಂಥವರಲ್ಲಿ ಕವಿ ಶ್ರೀ ಬಿ. ಎ. ಸನದಿಯವರೂ ಒಬ್ಬರು. ಅವರು ವಿಮರ್ಶಕರು, ಕತೆಗಾರರು, ನಾಟಕಕಾರರು, ಗ್ರಂಥ ಸಂಪಾದಕರು, ಅನುವಾದಕರು. ಅವರ ಸುಮಾರು ಹನ್ನೆರಡು ಕವನ-ಸಂಕಲನಗಳೂ, 'ಸೂರ್ಯಪಾನ' ಎಂಬ 'ಸಮಗ್ರ ಕಾವ್ಯ' ಸಂಪುಟವೂ ಪ್ರಕಟಗೊಂಡಿವೆ.

ಅವರು ತಮ್ಮ ವ್ಯಕ್ತಿ ಜೀವನದ ಬಹುಪಾಲು ಕಾಲವನ್ನು 'ಮುಂಬೈ'ಯಲ್ಲಿ ಕಳೆದವರು. ಹೀಗಾಗಿ ೧೯೭೪-೭೯ ಈ ಅವಧಿಯಲ್ಲಿ ಹನಿಗವನಗಳನ್ನು ಬರೆದು 'ಕಿರಿದರೊಳ್ ಪಿರಿದರ್ಥ' ಹೊಮ್ಮಿಸಿದ್ದಾರೆ. ಇದಕ್ಕೆ ಮುನ್ನುಡಿ ಬರೆದ ಡಾ. ಶಂಕರ ಮೊಕಾಶಿ ಪುಣೇಕರರು ಮೆಚ್ಚಿಗೆ ಮಾತುಗಳನ್ನಾಡುತ್ತ ಹೀಗೆಂದಿದ್ದಾರೆ : 'ಈ ಕವನಗಳಲ್ಲಿ ಮುಂಬೈ ಜೀವನದ ಪ್ರಾಮಾಣಿಕ ವರ್ಣನೆ ಇದೆ. ಕಣ್ಣಿಗೆ ಕಟ್ಟುವಂಥ ಕಾಂಕ್ರೀಟ್ ಪ್ರತಿಮೆಗಳಿವೆ. ಇಲ್ಲಿ ಕಾಂಕ್ರೀಟ್' ಅನ್ನು ಎಚ್ಚರದಿಂದ ಬರೆದಿದ್ದಾರೆ. ಕಾನ್‌ಕ್ರೀಟಾದ ಎಂದೂ ಆಧುನಿಕತೆಯ ನಗರ ಬದುಕಿನ... ಎಂದೂ ಶ್ಲೇಷೆಗೈದಿದ್ದಾರೆ.

'ಮುಂಬೈ ಮಳೆ'ಯಲ್ಲಿ ಸನದಿಯವರು ತಮ್ಮ ಹೊರಗಣ್ಣು ಹಾಗೂ ಒಳಗಣ್ಣುಗಳೆರಡೂ ಕಂಡುದನ್ನು ಚಿತ್ರಿಸಿದ್ದಾರೆ. ಅವು

ಶಬ್ದವೆಂಬ ಇಟ್ಟಿಗೆ ಪೇರಿಸಿದಂತಿಲ್ಲದೇ 'ಪದಸಂಪದದ ಸಂಭ್ರಮ'ವೇ ಆಗಿವೆ.

ಚುಟುಕುಗಳನ್ನವರು 'ಹನಿಗವನ'ವೆಂದು ಕರೆದುಕೊಂಡು ಮೊದಲಿಗೆ ಉದ್ದೇಶವನ್ನೂ ಸ್ಪಷ್ಟಪಡಿಸುತ್ತಾರೆ. 'ದಿನದ ಮುಸಾಫರಿಯಲ್ಲಿ ಒಂದು ಕ್ಷಣದನುಭವ....' ಮುಂತಾಗಿ ಅದು ಚಿರವಾದ್ದಲ್ಲ. ಕೆಲಕಾಲ ಬಿಟ್ಟು ನೋಡಿದರೆ ಹೊಸ ನೋಟವನ್ನೇ ಕೊಡಬಹುದು. ಒಟ್ಟು ಚಿಂತಿಸಲು ಹಚ್ಚುವ ಉದ್ದೇಶ ಈ 'Honeyಗವನ' ಗಳಿಗಿದೆ. ಡಾ. ರಂ. ಶ್ರೀ ಮುಗಳಿಯವರು ಅವರ ಸುನೀತಗಳ ಸಂಕಲನವಾದ 'ಆಶಾಕಿರಣ'ದಲ್ಲಿ ಅಭಿಪ್ರಾಯಪಟ್ಟಂತೆ ಇವರ ಕಾವ್ಯಶಕ್ತಿಗೆ ಸಾಕಷ್ಟು ಕಹಿಯಾದ ಆದರೂ ಸಿಹಿಯನ್ನು ಕಳೆದುಕೊಳ್ಳದ ಅನುಭವದ ಹಿನ್ನೆಲೆಯಿದೆ. ತಮ್ಮ ಕಾವ್ಯಕ್ಕೆ–

'ಇಲ್ಲ ಜಾತಿಮತಗಳ ತಳಿರು
ತೋರಣದ ಗರಜು!'

ಎಂದು 'ತೋರಣ'ವೆಂಬ ಹನಿಯಲ್ಲಿ ಸನದಿಯವರು ಸ್ಪಷ್ಟ ಹೇಳಿದ್ದಾರೆ. ಇದು ಅವರ ಲಿಬರಲ್ ಮನೋಧರ್ಮವನ್ನೂ ಬಿಂಬಿಸುತ್ತದೆ.

ಕನ್ನಡ, ಉರ್ದು, ಹಿಂದಿ, ಕೆಲಮಟ್ಟಿಗೆ ಮರಾಠಿಯನ್ನೂ ಬಲ್ಲ ಅವರು ಆಡುಭಾಷೆ ಬಳಸುವುದು ಗಮನಾರ್ಹ.

ಮೋಡ

ರುಜು ಹಾಕಿ
ಕಡಲ ಕೈಕುಲುಕಿರಲು
ಬಿಸಿಲ ಕೋಲು

ಆಕಾಶದಾ
ದೇಶಗಳ ದಾರಿ
ಹಿಡಿದಿತ್ತು
ಮೋಡಗಳ ಮಾಲು

ಇಲ್ಲಿ ರುಜು, ಮಾಲು ಇತ್ಯಾದಿ ಶಬ್ದಗಳ ಕನ್ನಡೀಕರಣ, ಸ್ವೀಕರಣ ಭಾವ ಗಮನಿಸಬಹುದು. ಜತೆಗೇ ಮೋಡಗಳ 'ಮಾಲುಗಾಡಿ' ಸಾವಕಾಶವಾಗಿ ಚಲಿಸುವ ಚಿತ್ರವನ್ನೂ ಕಾಣಬಹುದು. ನಗರದ ನಡುವೆಯೇ ಕಾಣಸಿಗುವ ಕಡಲ ಪ್ರಸ್ತಾಪವಂತೂ ಅನೇಕ ಕಡೆ ಬಂದಿದೆ.

ಅನೇಕ ಶೃಂಗಾರ ಕವನಗಳನ್ನು 'ತಾಜಮಹಲು'ದಲ್ಲಿ ಬರೆದಿದ್ದ ಸನದಿಯವರು 'ಮನದ ಸೀಮೆಗಳೆಲ್ಲ ರೇಶಿಮೆಯ ಎಳೆಯಾಗಿ....' ತೋರಿದ ಅನುಭವಗಳನ್ನು ದೊಡ್ಡ ಭಾವಗೀತೆಗಳಲ್ಲಿ ಕಂಡರಸಿದ್ದಾರೆ. ಹನಿಗವನಗಳಲ್ಲೂ ಅಂಥ ಉತ್ಕಟಗಳಿವೆ. 'ಮುಂಬೈ ಮಳೆ'ಯನ್ನೇ ನೋಡೋಣ. ಅದು ಎಷ್ಟು ಅನಿರೀಕ್ಷಿತವಾಗಿ ಬರುತ್ತದೆಂಬುದನ್ನು ತುಂಬ ಚಿತ್ರವತ್ತಾಗಿ ಹೇಳುತ್ತಾರೆ- ಮೈಮರೆತ ಹೆಣ್ಣು, ಜಡೆ ಎಳೆದವನನ್ನು ನೋಡುವ ರೀತಿ 'ಮೊಗದ ಸ್ಲೇಟಿನ ಮೇಲೆ ಮೂಡಿದಕ್ಷರವೋದಿ' ಅದು ತಿಳಿಯುವ ಮುನ್ನವೇ ಮಳೆ ಸುರಿಯುತ್ತದಂತೆ! ಕವಿ ಬಳಸುವ ಅನುಪ್ರಾಸ ಮತ್ತು ಉಪಮೆ, ಮುದ್ದಣ ಮನೋರಮೆಯರನ್ನು ನೋಡಿದ ಅನುಭವ ನೀಡುತ್ತದೆ.

ಪಟಪಟನೆ
ಮುಂದಲೆಗೆ ಮುತ್ತಿಟ್ಟಂತೆ
ಮುಂಬೈ ಮಳೆ!

ಅವರ ಮಡದಿಯೂ ಕರಾವಳಿ (ಉತ್ತರ ಕನ್ನಡ) ಭಾಗದವರೇ. ಹೀಗಾಗಿ ನವಿರಾದ ಮಳೆಗಿಂತ ಅಬ್ಬರಿಸಿ ಸುರಿವ ಮಳೆಗೆ ಅಪರಿಚಿತರಲ್ಲ!

ಹನಿಗವನಗಳಿಗೆ ಇಂಥದೇ ವಸ್ತು ಆಗಬೇಕೆಂದಿಲ್ಲ. ಒಂದು ಮೂಡು ಸಾಕು. A moments monument ಅನ್ನುತ್ತಾರಲ್ಲ ಹಾಗೆ. ಮಾನವೀಯ ಸಂಬಂಧಗಳಿಗೆ ಅಂತಃಕರಣವೇ ಬುನಾದಿ, ವ್ಯಾವಹಾರಿಕತೆಯಲ್ಲ ಎಂಬುದನ್ನು ಕುರಿತು ಚಿಂತಿಸಿದ್ದಕ್ಕೆ ಅನೇಕ ನಿದರ್ಶನ ಸಿಗುತ್ತವೆ.

'ಬೀಜ ಬಿತ್ತಿದರೇನು
ನೆಲಕೆ ನೀರೆರೆಯದೆಯೆ'

ಇದರ ಕೊನೆ, ಅನಿರೀಕ್ಷಿತ ತಿರುವು ಪಡೆಯುತ್ತದೆ. ಹೃದಯ ತಟ್ಟದ ಕ್ರಿಯೆ ಮೆದುಳು ಮುಟ್ಟುವುದಿಲ್ಲ.

ಮನುಷ್ಯ, ನಿತ್ಯದ ಬದುಕಿಗೆ ಕ್ಷಣ ಕ್ಷಣ ಹೋರಾಡಬೇಕಾಗುತ್ತದೆ. ನಮ್ಮದಲ್ಲದ ಸ್ಥಳದಲ್ಲಿ ಅಸ್ತಿತ್ವದ ಶೋಧ ನಡೆಸಬೇಕಾಗುತ್ತದೆ. ಅದನ್ನು 'ನಿತ್ಯವು ಗುದಮುರಿಗೆ' ಎಂದು ರೂಪಕದಲ್ಲಿ ಹೇಳುತ್ತಾ 'ಗಾಳಿಯ ಹಣೆಗೇ ಬೆವರ ಹನಿ' ಎಂಬ ಉತ್ಪ್ರೇಕ್ಷಾಲಂಕಾರದಲ್ಲಿ ಕೊನೆಗೊಳಿಸುವ ರೀತಿ ಚೆನ್ನಾಗಿದೆ. ಬೇಂದ್ರೆಯವರ 'ಬಿಸಿಲು ಕುಣಿದು ಬೆವತದ ಈಗ ಬಂದಾದ ಮಳಿಯ ಹದಕ' ಎಂಬ ಕಾವ್ಯೋಕ್ತಿ ನೆನಪಾಗುತ್ತದೆ.

ಸ್ವತಂತ್ರವಾಗಿರಬೇಕೆನ್ನುವ ಕವಿ ಚಿತ್ತಕ್ಕೆ ಅವರಿವರ ಕೊಡೆ, ನೆರಳು ಬೇಕಿಲ್ಲ. ಅದೊಂದು 'ಭಿಡೆ'. ನೆರಳೂ ಹಿಂಬಾಲಿಸದಂಥ ಸ್ಥಿತಿಯನ್ನು ಕವಿ, ಬಯಸುವುದು 'ನೆರಳು' ಕವಿತೆಯಲ್ಲಿ ಮೂಡಿದೆ.

ಮನಸ್ಸಿಗೆ ಉಲ್ಲಾಸವಿದ್ದರೆ, ಬಾಹ್ಯ ಪ್ರಕೃತಿಯೂ ಚೆಂದಾಗಿ ಕಾಣುತ್ತದೆ.

'ಕಡಲಿನ ಹನಿಹನಿಗೂ
ಹೆದ್ದೊರೆಗಳ ತೇರು' ಎನಿಸುತ್ತದೆ.

ಮುಂಬೈ ಗಡಿಬಿಡಿಯಲ್ಲಿ 'ಸಾಯಲಿಕ್ಕೂ ಪುರಸೊತ್ತಿಲ್ಲ' ಎಂದು ಗೊಣಗುವವರಿರಬಹುದು! ಅಲ್ಲಿನ ಬದುಕು ಎಷ್ಟು ಯಾಂತ್ರಿಕವೆಂದು ಕವಿ ಹೀಗೆ 'ಪನ್' ಮಾಡಿರುವುದು :

'ಸಾಯಲಿಕು ಪುರಸೊತ್ತಿಲ್ಲ
ಎಂದು ಬದುಕಿರುವವರು
ಸಾಯಲಿಕೆ ಪುರಸೊತ್ತಿಲ್ಲ
ಎಂದೆ ಬದುಕಿರುವವರು!'

'ಕಡಲು' ಸದಾ ಜಾಗೃತ ಚೇತನವೆಂಬುದು ಕವಿಯ ಭಾವನೆ. ಬಿಡುವಿರದ್ದು ನಿಜವಾಗಿ ಕಡಲಿಗೆ ಎಂದು ವಿಶ್ಲೇಷಿಸುತ್ತಾರೆ.

ಅಂತ್ಯಪ್ರಾಸ ಬಳಸಿ, ಪರಿಣಾಮ ರಮಣೀಯತೆ ಸಾಧಿಸುವ ಕೌಶಲ ಕವಿಗಿದೆ. ಪ್ರಾಯದಲ್ಲಿ ಬೆವರ ಹನಿಯೂ ಅತ್ತರು....

....ಇಳಿವಯದಲ್ಲಿ ವ್ಯರ್ಥವಲ್ಲವೆ ಅತ್ತರೂ? -ಎಂಬಲ್ಲಿ ಅತ್ತರು (ಪರಿಮಳ ದ್ರವ್ಯ) ಅತ್ತರೂ (ಅಳುವುದೂ) ವ್ಯರ್ಥ ಎಂಬಲ್ಲಿ ಇಂಥ ಚಾತುರ್ಯ ಕಾಣುತ್ತೇವೆ.

ರಾಜಕಾರಣಿ, ಸಮಾಜಸೇವಕರನ್ನು, ಬಂಡವಾಳ ಶಾಹಿಗಳನ್ನೂ ಅವರು ಕವನದ ಸೂಜಿಯಿಂದ ಚುಚ್ಚದೇ ಬಿಟ್ಟಿಲ್ಲ.

ಗದ್ದುಗೆಯಲ್ಲಿ ಏಡಿ, ಕೆಸರು ಗದ್ದುಗೆ ಏರುವ ಚಿತ್ರ, ಮಿಡತೆ ಬೆಳೆ ಹುಲುಸಿದ್ದಲ್ಲಿ ತೆನೆ ಸೊಕ್ಕಿದಲ್ಲಿ ದಾಳಿ ಮಾಡುವ ಚಿತ್ರ ಪರೋಕ್ಷವಾಗಿ ಇಂಥ ಕೆಲಸಗೈದಿವೆ.

ಕೆಲವೆಡೆ, ಅತ್ಯುತ್ತಮ ಶಬ್ದಚಿತ್ರಗಳನ್ನು ನೀಡಿ, ಹೇಳದೇ ಉಳಿದದ್ದು ಕಾವ್ಯ ಎಂಬ ಮಾತನ್ನು ನಿಜವಾಗಿಸಿದ್ದಾರೆ ಕವಿ-

ಒಳಗೆ ವೇದನೆ ಇದ್ದಾಗ, ರೆಪ್ಪೆ ಮುಚ್ಚಿದರೂ ಒಂದೇ, ತೆರೆದರೂ ಒಂದೇ ಎಂಬ ಹೇಳಿಕೆ, ಉಜ್ವಲ ಕಾವ್ಯ ಪಂಕ್ತಿಯಾಗುವುದು ಇದಕ್ಕೆ ಉದಾಹರಣೆ : 'ಕಾವಲು' ಎಂಬ ನಾಲ್ಕೇ ಸಾಲಿನ ಕವಿತೆ, ಇಲ್ಲೂ 'ಸೇನೆ', 'ಬೇನೆ' ಎಂಬ ಅಂತ್ಯಪ್ರಾಸ ಹೆಚ್ಚಿನ ಮೆರುಗು, ಅನುರಣನೆ ನೀಡಿವೆ-

ತುಂಟತನದ ಪದ್ಯಗಳೂ ಉಂಟು

'ಮೀನಿನಂತೆ ಮೆತ್ತಗಾಗಿ
ಮನೆ ಸೇರಿದ ಜಾಣ।
ಮನೆಯಾಕೆ ಮೀನಾಕ್ಷಿಗೆ ಕಣ್ಣು ಹೊಡೆದ 'ಅತಿಥಿ'

'ಒಳಗೆ', ಎಂಬ ಕವಿತೆ ಬಹುಶಃ ಪ್ರೇಮಿಕೆಯೋರ್ವಳದ್ದೆ?

ಕೋಣೆಯೊಳಗಾರಿಲ್ಲ
ಒಳಗೆ ಬನ್ನಿ
ಹಿತ್ತಲಲಿ ಕೆಮ್ಮುವುದು
ನಮ್ಮ ಮುದಿನಾಯಿ'

ಹಾಗೇ ಜಾರಿದ ಸೆರಗಿಗೆ ಕಾರಣ 'ಗಾಳಿ', ಆದ್ದರಿಂದ ಅವಳು ಬಜಾರಿಯಲ್ಲ ಎಂದು ಹೆಣ್ಣಿನ ಘನತೆ ಹೇಳಿ ಎಚ್ಚರಿಸುವ 'ಹುಷಾರಿಯಂಥವೂ' ಇವೆ.

ಮುಂಬೈಯ ಲೋಕಲ್ ಗಾಡಿಯ ಪಯಣ, ಯಾರಿಗೆ ಗೊತ್ತಿಲ್ಲ? (ಹಾಗೇ ಅಲ್ಲಿನ ಭೂಗತ ಜಗತ್ತಿನ ಬಗೆಗೂ?) ಜನಸಂದಣಿ, ರೂಪುಗೊಳ್ಳುವ ಸಂಬಂಧಗಳು, ಅವಘಡಗಳು ವೈವಿಧ್ಯ ಇತ್ಯಾದಿ. ಅವುಗಳ ಬಗೆಗೆ ಕವಿಗಿರುವ ಅನುಭವ ಅಪಾರ. 'ಲೋಕದ ಲೋಕಲ್ ಗಾಡಿಯಲಿ' ಎಂಬ 'ಮೆಟಾಫರ್ ಮೂಲಕ, ತಾವು ರೋಸಿದ್ದು ಕಂಡದ್ದು ಹೇಳಲಾರೆ.... ಹೇಳದೆಯೂ ಇರಲಾರೆ....' ಎಂದು ಮುಗಿಸುತ್ತಾರೆ.

ಮನುಷ್ಯರ ಮುಖವಾಡಗಳೇ ಮುಖಗಳಾಗಿರುವ ವೈಪರೀತ್ಯವನ್ನು ಕವಿಕಂಡಿದ್ದಾರೆ. 'ಕಂಡ ಭಕ್ತರಿಗೆಲ್ಲ ಕೈ ಮುಗಿದು ಶೆಟ್ಟಿ' ಎಂದು ವಿಷಾದಪೂರಿತವಾಗಿ ಹೇಳುವುದು ಬಹುಶಃ ಭ್ರಮನಿರಸನದಿಂದಲೇ.

ಬಹುಶಃ ಬಾಲ ಕಾರ್ಮಿಕರನ್ನು ಕುರಿತೇ 'ತಟ್ಟಿ' ಎಂಬ ಮೂರೇ ಸಾಲಿನ ಕವಿತೆ ಹುಟ್ಟಿದೆ- ರೊಟ್ಟಿಯ ತುಣುಕು, ಕಾಣುವ ಕನಸು, ಅಸ್ತಿತ್ವಕ್ಕಾಗಿ ನಡೆಸುವ ಹೋರಾಟದ ಕುರಿತದ್ದು.

'ಬೆಳಕು' ಎಂಬ ಪುಟ್ಟ ಪದ್ಯ ಕಲಾತ್ಮಕವಾಗಿ ಉತ್ಕೃಷ್ಟವಾದದ್ದೆನ್ನಬಹುದು. ಬೆಳಗುವ 'ಸೂರ್ಯ' ನನ್ನವರು 'ಸಾಕ್ಷಿ ಪ್ರಜ್ಞೆ'ಯಂತೆ ಪರಿಭಾವಿಸಿದ್ದಾರೆ. ಇರುಳಿನ ಕುಕೃತ್ಯಗಳನ್ನು ಮನಃಸಾಕ್ಷಿ ಮರೆಸಲು ಸಾಧ್ಯವೇ ಎಂಬ ಸೂರ್ಯ ವ್ಯಂಗ್ಯವಾಡುವ ಚಿತ್ರ ಕೊಡುತ್ತಾರೆ. ಬೆಳಕಿಗೊಂದೇ ಭಾಷೆ, ಎಂಬ ಮಾತು ಬೀಜ ಮಾತು! ಬೆಳಕು ಎಲ್ಲವನ್ನೂ ನಿಚ್ಚಳವಾಗಿ ಕಾಣಿಸುತ್ತದೆ. ಅದು ಋಜುತ್ವದ ದ್ಯೋತಕ. ಇದರೊಟ್ಟಿಗೆ ಭೂಮಿ, ಸೂರ್ಯರ ಆವರ್ತನದ ಕುರಿತಾದ ವೈಜ್ಞಾನಿಕ ಒಳನೋಟವೂ ಸಿಗುತ್ತದೆ.

ಬಸವೇಶ್ವರರ ಸ್ವರ್ಗಲೋಕ ಮರ್ತ್ಯಲೋಕವೆಂಬುವು ಬೇರಿಲ್ಲ ಕಾಣಿಭೋ! ಎಂಬ ಮಾತಿಗೆ ಪುಷ್ಟಿ ಎನ್ನುವಂತೆ ಮುಂಬಯಿಯ 'ಝೋಪಡ್ ಪಟ್ಟಿ' ಕುರಿತು ಕವಿ ಕಳವಳಿಸುತ್ತಾರೆ. ನರಕದ ಕಲ್ಪನೆಯೂ ತುಟ್ಟಿ, ಎನಿಸುವಂತೆ ಗಲ್ಲಿಗಲ್ಲಿಗೆ ಕೊಳೆಗೇರಿ ಇವೆ ಎಂದು ಉದ್ಗರಿಸುತ್ತಾರೆ.

'ಅವಸರ' ಮುಂಬೈನ ಗಡಿಬಿಡಿ ಬದುಕನ್ನು ಅನಾವರಣಗೊಳಿಸುವ ಚುಟುಕು. ಮಹಾನಗರಗಳು ಭಯ ಹುಟ್ಟಿಸುತ್ತವೆ- 'ವ್ಯಕ್ತಿತ್ವ ಲಯ'ವಾಗಿಬಿಡುವ ಅಪಾಯವೂ ಉಂಟು. 'ವಿರಾಮವೆಂಬುದು ಅಪರೂಪ ಫಲ'. ಮನುಷ್ಯ ಕೂತರೂ, ನಿಂತರೂ ನೆಲ ಧಾವಿಸುತ್ತಲೇ ಇರುತ್ತದೆ ಎಂಬ ಉತ್ಪ್ರೇಕ್ಷಾಲಂಕಾರ, ವಾಸ್ತವ ಚಿತ್ರ ನೀಡಲೆಂದೇ ಬಳಕೆಯಾಗಿರುವುದು ಸ್ಪಷ್ಟ. ಶವಾಗಾರ, ಕೆಂಪುದೀಪ, ಖಾಲಿ, ಗತಿ- ಇವೆಲ್ಲಾ ಅದೇ ಧಾಟಿಯ ಕವನಗಳು. ಮೈಮಾರಿ ಬದುಕುವವರ ದಾರುಣತೆ ಅನಿವಾರ್ಯಗಳನ್ನು ದಾಖಲಿಸುತ್ತಾರೆ, ಕವಿ ಇಲ್ಲಿ ತೆಳುವಾಗಿ ನಗಿಸುವ ಪದ್ಯಗಳಿಗೂ ಬರವಿಲ್ಲ. ಶೀರ್ಷಾಸನ ಹಾಕಿದವನಿಗೆ ಎಲ್ಲವೂ ತಿರುವು ಮುರುವಾದಂತೆ ಕಾಣುವುದು, ಚಂದ್ರ ಸಾಗರಕ್ಕೆ ಮುತ್ತಿಟ್ಟರೆ, ತೆಂಗು ಸಪ್ಪಳ ಮಾಡಿ ತನ್ನ ಅಸೂಯೆ ತೋರುವುದು, ಗೋಟೂರ ಬಂಗ್ಲೆಗೆ ಕಲ್ಪನಾ ಸಾವಿನಿಂದ ಕೀರ್ತಿ ಬಂದದ್ದು, ಮ್ಯೂಜಿಯಂ ಕೋಣೆಯಲ್ಲಿ ಅಶೋಕ-ವನದ ಸೀತೆ ಭದ್ರವಾಗಿ ಕಾಯ್ದಿಡಲ್ಪಟ್ಟಿರುವುದು ನಗಿಸಿ, ವಿಚಾರಕ್ಕೂ ಹಚ್ಚುತ್ತವೆ.

ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕಲ್ಲವೆ? ಆಪರೇಷನ್ ಕೊಠಡಿಯಲ್ಲಿ ಸೂಜಿಮದ್ದೇ ಜೀವ ಉಳಿಸುತ್ತದೆ ಎಂಬ ಚಿತ್ರ... ಇವೆಲ್ಲವೂ ಸನದಿಯವರ ಸೂಕ್ಷ್ಮ ಜೀವನ ನಿರೀಕ್ಷೆಯನ್ನೂ ಮೃದು ಹೃದಯವನ್ನು ವ್ಯಕ್ತಪಡಿಸುತ್ತವೆ.

'ಎದೆಗುದಿ' ಉತ್ತರ ಕರ್ನಾಟಕದಲ್ಲಿ ಸಾಮಾನ್ಯರೂ ಬಳಸುವಂಥ ಮಾತು. ಎಲ್ಲರಿಗೂ ಒಂದಲ್ಲಾ ಒಂದು ಚಿಂತೆ ಇರುವುದೇ ಎಂಬ ಸಾರ್ವಕಾಲಿಕ ಸತ್ಯವನ್ನು, ಲೋಕಾನುಭವದ ನೋವನ್ನು ಕವಿ 'ಎದೆಗುದಿ'ಯಲ್ಲಿ ಬಿಂಬಿಸುತ್ತಾರೆ.

'ನೆನಪಿನ ಓರಿಯೊಳಗ
ಮಿಣಕ್ಯಾವ ಎಣ್ಣೀ ದೀಪ'

ಎಂಬ ಬೇಂದ್ರೆಯವರ ಮಾತನ್ನು ನೆನಪಿಸುತ್ತದೆ 'ಮಸಕು'.

ಪ್ರೌಢವ್ಯಕ್ತಿ, ಒಂದೆಡೆ ಕೂತು ತನ್ನ ತಲೆಮಾರಿನ ಎಲ್ಲವನ್ನೂ ನೆನಪು ಮಾಡಿಕೊಳ್ಳುವ ಸಹಜ ಚಿತ್ರಣ ಇಲ್ಲಿದೆ.

ಮಸಕೋ ಮಸಕು
ಬದುಕಿನ ರೂಪ
ಮನದ ಮಾಡದಲಿ
ಮಿಳಿಮಿಳಿ ದೀಪ

ಹಳವಂಡದ ಚಿತ್ರವನ್ನು ತುಂಬ ಸರಳ ಶಬ್ದಗಳು ನೀಡುತ್ತವೆ.

'ಗುಲಗಂಜಿ' ಎಂಬ ಕವಿತೆ ಸನದಿಯವರ ಕಾವ್ಯಕಟ್ಟುವ ಕಲೆಗೆ ಸಮರ್ಥ ನಿದರ್ಶನ. ಅಪರಂಜಿಯನ್ನೇ ತೂಗುವ 'ಗುಲಗಂಜಿ' ಶ್ರೇಷ್ಠ ಎಂಬ ಸತ್ಯವನ್ನು ಮನಗಾಣಿಸುತ್ತದೆ. ಇದು ಕಣ್ಕಟ್ಟಲ್ಲ, ಆದರೂ ಪರಡಿಯಲ್ಲಿ ಸರಿದೂಗುತ್ತವೆ. ಅಂಥ ಮಾನ-ಗುಲಗಂಜಿಯದು!

ಒಟ್ಟಾರೆ ೧೧೪ ಹನಿಗವನಗಳ ಸಂಕಲನ, ಲೇವಡಿಗೆ, ಭರ್ತ್ಸನೆಗೆ ಎಲ್ಲೂ ಬಳಕೆಯಾಗಿಲ್ಲದೆ, ಬದುಕಿನ 'ಕ್ಷಣಿಕ ಸತ್ಯ'ಗಳನ್ನು ತೋರಿಸುತ್ತದೆ. ಆಡುನುಡಿಯ ಸೊಗಡು ಹೆಚ್ಚಿನ ಮೆರುಗಿತ್ತಿದೆ.

ಪ್ರಚಾರ, ವಿಡಂಬನೆಗಿಂತ ಕಂಡದ್ದನ್ನು ಇನ್ನೊಬ್ಬರಿಗೆ ಮುಟ್ಟಿಸುವ ವೇದ್ಯವಾಗಿಸುವ ತವಕ ಎದ್ದು ಕಾಣುತ್ತದೆ. ಅವರು ಎಲ್ಲೂ ತೀರ್ಪು ಕೊಡುವುದಿಲ್ಲ. ಮೂದಲಿಸುವುದಿಲ್ಲ. ಮುಂಬೈ ಮಳೆಯ ಅಬ್ಬರ ಕಾಣಿಸುತ್ತಾರೆ, ಕೇಳಿಸುವುದಿಲ್ಲ! ನವೋದಯ, ನವ್ಯ, ಪುನರ್‌ನವೋದಯ, ಸಮನ್ವಯಗಳಿಂದ ಒಳ್ಳೆಯ ಅಂಶಗಳನ್ನು ಸ್ವೀಕರಿಸಿ (ಚೆನ್ನವೀರ ಕಣವಿ, ಗಂಗಾಧರ ಚಿತ್ತಾಲ, ಅರವಿಂದ ನಾಡಕರ್ಣಿ ಮುಂತಾದವರಂತೆ) ಜೀವನದ ಪರಿಶುದ್ಧತೆಯ ಕಡೆಗೆಯೇ ಮುಖ ಮಾಡಿ, ಕನಸಿದವರು ಸನದಿಯವರು. ಸಂವತ್ಸರ, ವಿಶೇಷಾಂಕ, ಸಂಚಿಕೆಗಳ ಕವಿ, ಕೂಡಾ ಇವರಲ್ಲ. ಮುಂಬಯಿಯ ಜನಜಂಗುಳಿಯಲ್ಲಿ ಹೇಗಿದ್ದರೋ ಹಾಗೆ ಈಗ ಕುಮಟೆಯಲ್ಲೂ ಧ್ಯಾನಸ್ಥರಾಗಿ, ಎಲ್ಲ ಸಾಹಿತ್ಯಕೂಟಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಸಮಾನ ಅಂಶವೆಂದರೆ, ಎದೆಯ ಕಡಲು, ಹೊರಗಿನ ಕಡಲು ಸಮಾನಾಂತರವಾಗಿ ಹರಿಯುತ್ತಿರುವುದು. ಕಡಲು ಬತ್ತೀತೆ? ಕುಡಿಯಲು ಬರದಿರಬಹುದು. ಕಣ್ಣಿನ, ಮನಸ್ಸಿನ ಬರವನ್ನಂತೂ ಇಂಗಿಸಬಲ್ಲುದಲ್ಲ?

ooo

ತಪನಿಂದ ತಾವರೆಯ ಸಾಧನೆ

ಡಾ. ಬಸವರಾಜ ಸಾದರ

ಸದುವಿನಯದ ನದಿ ಸನದಿಯವರ ಕಾವ್ಯ. ಬದುಕಿನ ನೀತಿ ಮತ್ತು ಬರಹದ ರೀತಿ ಎರಡರಲ್ಲೂ ಗುತ್ತಾದ ಒಳಹೆಣಿಕೆಯನ್ನು ಸಹಜವಾಗಿಯೇ ಸಾಧಿಸಿರುವ ಅವರ ಕಾವ್ಯದ್ದು ನಿಜವಾದ ಅರ್ಥದಲ್ಲಿ ಸಮನ್ವಯ ಮಾರ್ಗ, ಸಹಜ ಮತ್ತು ಸರಳ ಅಭಿವ್ಯಕ್ತಿಯಲ್ಲೇ ಸಮತೆ-ಸಮನ್ವಯ-ಶಾಂತಿ ಮತ್ತು ಒಟ್ಟಾರೆ ಒಂದು ಅನಾತಂಕಿತ, ಸುಂದರ ವ್ಯವಸ್ಥೆಯನ್ನು ಧೇನಿಸುವ ಅವರ ಕವಿತೆಗಳು ನೇರವಾಗಿ ಓದುಗನ ಎದೆಯೊಂದಿಗೇ ಸಂವಾದಕ್ಕಿಳಿದು, ತಮ್ಮ ಆಶಯ-ಅರ್ಥಗಳನ್ನು ಎಳೆಯೆಳೆಯಾಗಿ ಬಿಚ್ಚಿ ತೋರಿಸುತ್ತವೆ. ಅವರ ಅಸಂಕೀರ್ಣ ಕಾವ್ಯಲೋಕ, ವಿಮರ್ಶೆಯ ಕಠಿಣ ಲೋಕಕ್ಕೆ ಮೃದುತ್ವದ ಪಾಠ ಕಲಿಸುವ ವಿನಯ ಗುಣದ್ದು. ಇಂಥ ಅವರ ಕಾವ್ಯಕೃಷಿಗೆ ಸಂಬಂಧಿಸಿದ ಕೆಲವು ಪೂರಕ ಹಾಗೂ ಪ್ರೇರಕ ಅಂಶಗಳನ್ನಿಲ್ಲಿ ಗಮನಿಸಬಹುದು.

ನವೋದಯದಿಂದ ಆರಂಭವಾದ ಹೊಸಗನ್ನಡದ ಕಾವ್ಯಯಾನವು ಪ್ರಗತಿಶೀಲ, ನವ್ಯ, ದಲಿತ, ಬಂಡಾಯದ ಘಟ್ಟಗಳಲ್ಲಿ ಹಾಯ್ದುಬಂದು ಮತ್ತೆ ಈಗ ನವೋದಯ ಧೋರಣೆಯೇ ಪ್ರಧಾನವಾದ ಒಂದು ಸಮ್ಮಿಶ್ರ ನೆಲೆಗೆ ತಲುಪಿದೆ.

ಹೊಸಗನ್ನಡ ಕಾವ್ಯದ ಈ ಚಾರಿತ್ರಿಕ ನಡೆಯೊಂದಿಗೆ ಸನದಿಯವರ ಕಾವ್ಯದ ಗತಿಯನ್ನು ಹೋಲಿಸಿ ನೋಡಿದಾಗ ಆಶ್ಚರ್ಯಕರ ಸತ್ಯವೊಂದರ ದರ್ಶನವಾಗುತ್ತದೆ. ಸನದಿಯವರದು ಮೂಲತಃ ಮತ್ತು ಮುಖ್ಯತಃ ನವೋದಯಕ್ಕೆ ಒಲಿದ ಕವಿಮನ. ಅವರ ಒಟ್ಟು ಕಾವ್ಯಾಭಿವ್ಯಕ್ತಿಯಲ್ಲಿ ಪ್ರಧಾನವಾಗಿ ಎದ್ದು ಕಾಣುವುದೇ ನವೋದಯ ನಮೋಧರ್ಮ. ಒಂದೊಮ್ಮೆ ನವೋದಯಕ್ಕೆ ಒಲಿದ ಅವರ ಕವಿಮನ, ಹೊಸಗನ್ನಡ ಕಾವ್ಯ ಏನೆಲ್ಲ ಅವಸ್ಥಾಂತರಗಳನ್ನು ಪಡೆದಾಗಲೂ, ತನ್ನ ಮೂಲಸ್ವಭಾವವನ್ನು ಬದಲಿಸದೆ, ಇಂದಿಗೂ ನವೋದಯವನ್ನೇ ಅಪ್ಪಿರುವ ಮನೋಧರ್ಮವಾಗಿರುವುದು ಎತ್ತಿ ಹೇಳಬೇಕಾದ ಅನನ್ಯತೆ. ಅವರ ಆರಂಭದ ಕವನ ಸಂಕಲನಗಳಲ್ಲಿರುವ-

ಸಂಸ್ಕೃತಿಯ ಸರ್ವಾಧಿಕಾರಿಯೊಲು ಕುಣಿಯುವುದು
ಯಾವ ನಾಡಿಗು ಸಲ್ಲ ! ಯಾರ ಹಿತವೇನಲ್ಲ !
ನಮ್ಮದಿದು-ನಿಮ್ಮದದು ಎಂಬ ಭೇದವೆ ಹೊಲ್ಲ !
ಎಲ್ಲರೊಳಬಯಕೆಗಳ ಸಂಗಮದಿ ಸವಿಯಿಹುದು !
ಮಾನಾಭಿಮಾನಗಳು ನುಡಿ ಬುರುಡಿಯೊಳಗಿಹವೇನು ?
ಕೂಡಿ ಬಾಳ್ ತೀಡಿಕೊಳೆ ಸುರಿದೀತು ಹೂಜೇನು ![1]

ಎಂಬ ಹಾಗೂ-

ಹಿರಿಯರೋ, ಕಿರಿಯರೋ, ಹರಯದವರೇ ಇರಲಿ
ಯಾರು ನಡೆದರು ದಾರಿ ಸರಳವಿರಲಿ
ಅವರಿವರ ಹಿತಕೆಂದು ಹೆರವರನಿಸಿಕೆ ಕೊಂದು
ಅನ್ಯಾಯ-ಬೀಜಗಳ ಬಿತ್ತದಿರಲಿ
....

೧. ಬಿ. ಎ. ಸನದಿ : ಆಶಾಕಿರಣ : ಸೂರ್ಯಪಾನ : ಪುಟ ೨೩

ಬೆರಳ ರಕ್ಷಣೆಗೆಂದು ಕೈತುದಿಗೆ ಉಗುರಿರಲು
ಎದುರು ಮೊಗ ಪರಚಲಿಕೆ ಬಳಸದಿರಲಿ !
ತಮ್ಮ ಬದುಕಿನ ಕಾಲ ಬೆಳೆಸಿಕೊಳ್ಳಲಿಕಿರುವ
ಬಲ ಅಬಲಜೀವಿಗಳ ನುಂಗದಿರಲಿ ![೨]

ಈ ತೆರನಾದ ನವೋದಯದ ಆದರ್ಶ ಮತ್ತು ಆಶಾವಾದದ ತೊರೆ ಅವರ ಕಾವ್ಯದೃಷ್ಟಿಯುದ್ದಕ್ಕೂ ಹರಿಯುತ್ತ ಬಂದು ತೀರ ಇತ್ತೀಚಿನ ಸಂಕಲನದಲ್ಲೂ

ವಿಶ್ವ ಪರಿವಾರದಲ್ಲಿ
ಸಕಲರಿಗೂ ಸ್ವಾಗತ !
ಮತಮತಗಳ ತಿರುಳಿನಲ್ಲಿ
ಕಂಡನಿತೂ ಸಹಮತ !
ಭಿನ್ನವೆಂದು ಬಗೆದರೂನು
ಸಹಜೀವನ ಸಮ್ಮತ !
ಪರಕೀಯತೆ ಪರದೆಯಾಚೆ
ಯಾವುದೇಕೆ ಪರಮತ ?
ಮನುಜ ಮನುಜನೆಂದು
ಒಪ್ಪಿ ಅಪ್ಪಿಕೊಂಬ ಕ್ಷಣವೆ
ಸಹಜೀವನ ಸಂಕೇತ[3]

ಹೀಗೆ ಮಡುಗಟ್ಟಿರುವುದನ್ನು ಗಮನಿಸಿದರೆ ಸನದಿಯವರ ಮನ ಮತ್ತು ಕಾವ್ಯದಾಳದಲ್ಲಿ ನವೋದಯದ ಪ್ರಭಾವ ಯಾವ ಮಟ್ಟದ್ದಿದೆಯೆಂಬುದರ ಅರಿವಾಗುತ್ತದೆ. ಹೀಗೆ ಅವರಲ್ಲಿ ನಿರಂತರ ಸ್ಥಾಯಿಯಾಗುಳಿದುಕೊಂಡೇ ಬಂದ ಈ ನವೋದಯ

---

೨. ಬಿ. ಎ. ಸನದಿ : ನೆಲಸಂಪಿಗೆ : ಸೂರ್ಯಪಾನ : ಪುಟ ೬೪
೩. ಬಿ. ಎ. ಸನದಿ : ಮರಭೂಮಿ : ಪುಟ ೧೭

ಮನೋಧರ್ಮ ಕೆಲ ವಿಮರ್ಶಕರ ದೃಷ್ಟಿಯಲ್ಲಿ ಸನದಿಯವರ ಮಿತಿಯಾಗಿಯೂ ಕಾಣಬಹುದು. ಆದರೆ, ನವೋದಯದಿಂದ ಆರಂಭವಾದ ಹೊಸಗನ್ನಡ ಕಾವ್ಯ ಎಲ್ಲೆಲ್ಲ ಸುತ್ತಾಡಿ ನವೋದಯ ಧೋರಣೆಯೇ ಪ್ರಧಾನವಾಗುವಂಥ ನೆಲೆಗೆ ಬಂದು ತಲುಪಿರುವುದನ್ನು ಗಮನಿಸಿದರೆ ಸನದಿಯವರು ಅಂದಿನಿಂದ ಇಂದಿನ ವರೆಗೂ ತುಳಿದ ಕಾವ್ಯಮಾರ್ಗ ಸರಿಯಾಗಿಯೇ ಇದೆ ಎಂದು ಹೇಳಬಹುದಾಗಿದೆ. "ಐವತ್ತರ ದಶಕದಲ್ಲೆ ಕನ್ನಡ ಕಾವ್ಯ ಹೊರಳು ಹಾದಿಯಲ್ಲಿದ್ದಾಗಲೂ ಆ ಬಗ್ಗೆ ಮನ ಕದಡಿಕೊಳ್ಳದೆ ತಮ್ಮ ಮನೋಧರ್ಮಕ್ಕೆ ಅನುಗುಣವಾಗಿ, ತಮ್ಮ ಅನನ್ಯತೆಯನ್ನು ಉಳಿಸಿಕೊಂಡು ಬಂದಿದ್ದಾರೆ. ಅನುಭವ ವಿಸ್ತರಿಸಿದಂತೆ, ಅರಿವು ಆಳಕ್ಕಿಳಿದಂತೆ ಅವರ ಕವನಗಳ ಧೋರಣೆಯಲ್ಲಿ ಅಲ್ಪಸ್ವಲ್ಪ ಬದಲಾವಣೆ ಕಂಡುಬಂದರೂ ಸುಪ್ತಸ್ರೋತವಾಗಿ ಹರಿವ ಅವರ ಮೂಲ ಮನೋಧರ್ಮದಲ್ಲಿ ವ್ಯತ್ಯಾಸವಾಗಿಲ್ಲ"[೪] ಎಂಬ ಪ್ರೊ. ಎಂ. ಎಚ್. ಕೃಷ್ಣಯ್ಯ ಅವರ ಮಾತು ಇಲ್ಲಿ ಪೂರಕ. ಮುಂದೆ ಹೊಸಗನ್ನಡ ಕಾವ್ಯದ ವಿವಿಧ ಘಟ್ಟಗಳಲ್ಲಿ ಹುಟ್ಟಿಕೊಂಡ ಹಲವಾರು ಪಂಥ-ಪಂಗಡಗಳ ಬಗೆಗೆ ತಲೆಕೆಡಿಸಿಕೊಳ್ಳದೆ ಮತ್ತು ಅವುಗಳ ಆಕರ್ಷಣೆಗೆ ಬಲಿಯಾಗದೆ ಸನದಿಯವರು ತಮ್ಮ ಏಕನಿಷ್ಠೆಯ ಮಾರ್ಗದಲ್ಲೇ ನಡೆದರು.

ಇನ್ನು, ಇರುವುದೆಲ್ಲವ ಬಿಟ್ಟು ಇಲ್ಲದ್ದನ್ನೆ ಹುಡುಕುವ ನವ್ಯ ಮತ್ತು ನವ್ಯೋತ್ತರ ವಿಮರ್ಶೆ, ನವೋದಯವನ್ನು 'ಅದರದು ಆಕಾಶಯಾತ್ರೆ' ಎಂಬಂತೆ ವಿಡಂಬಿಸುತ್ತಲೇ ಬಂದಿದೆ. ಒಟ್ಟಾರೆ ನವೋದಯವನ್ನು ಕಡೆಗಣ್ಣಿನಿಂದ ನೋಡುವ ಈ ವಾರೆನೋಟಕ್ಕೆ

---

4. ಪ್ರೊ. ಎಂ. ಎಚ್. ಕೃಷ್ಣಯ್ಯ : ಸೋಪಾನ : ಪುಟ 25

ಸನದಿಯವರ ಮನೋಧರ್ಮದ ಹಿನ್ನೆಲೆಯಲ್ಲಿ ಪ್ರೊ. ಎಲ್. ಎಸ್. ಶೇಷಗಿರಿರಾವ್ ಅವರು ಕೊಡುವ ಸಮರ್ಥನೆ ನವೋದಯದ ಶ್ರೇಷ್ಠತೆಯನ್ನೇ ಎತ್ತಿ ತೋರಿಸುವಂಥದ್ದಾಗಿದೆ. "ಶ್ರೀ ಸನದಿಯವರ ಕವನಗಳ ಮನೋಧರ್ಮ ಕನ್ನಡ ನವೋದಯ ಸಾಹಿತ್ಯದ ಮನೋಧರ್ಮ ಎಂದಾಗ ಅವು ಮೌಲಿಕವಲ್ಲದ ಕವನಗಳು ಎಂದೇನು ಅಲ್ಲ. ಕೆಲವು ಕಾರಣಗಳಿಂದ ನವೋದಯದ ಮನೋಧರ್ಮ ಎಂದೂ ಸಾಹಿತ್ಯದಿಂದ ಮರೆಯಾಗುವುದಿಲ್ಲ. ಅದು ಎಂದೂ ನಿಜವಾದ ಕವಿಯಲ್ಲಿ ನಿಜವಾದ ಕಾವ್ಯವನ್ನೇ ಅರಳಿಸುವುದು ಎನ್ನುವುದು ನನ್ನದೊಂದು ನಂಬಿಕೆ. ಅದಕ್ಕೆ ಸಾಕ್ಷ್ಯವನ್ನು ಶ್ರೀ ಸನದಿಯವರ ಕಾವ್ಯದಲ್ಲಿಯೇ ಕಾಣುತ್ತಿದ್ದೇವೆ".[೫] ನವೋದಯದ ಹೆಚ್ಚುಗಾರಿಕೆಯ ಜೊತೆಗೆ ಸನದಿಯವರ ಧೋರಣೆಯ ಮೇಲ್ಮೆಯನ್ನು ಈ ಮಾತು ಸಾರುತ್ತದೆ. ನವೋದಯದ ಆದರ್ಶಪರ ಧೋರಣೆ ಕೆಲವರಿಗೆ ಅವಾಸ್ತವ ಎನ್ನಿಸಬಹುದಾದರೂ ಒಂದು ಸ್ವಸ್ಥ ಮತ್ತು ನೆಮ್ಮದಿಯ ವ್ಯವಸ್ಥೆ ನಿರ್ಮಿಸುವ ಬಯಕೆಯ ಅದರ ಒಟ್ಟಾರೆ ಕಾಳಜಿ ಎಂದಿಗೂ ಸ್ವೀಕಾರಾರ್ಹವೇ ಆಗಿದೆ. ಇಂಥ ನವೋದಯ ಮನೋಧರ್ಮವನ್ನೇ ತಮ್ಮ ಬದುಕು, ಚಿಂತನೆ ಮತ್ತು ಅಭಿವ್ಯಕ್ತಿಯ ಮೂಲದ್ರವ್ಯವನ್ನಾಗಿಸಿಕೊಂಡು ಬಂದದ್ದು ಸನದಿಯವರ ಹೆಚ್ಚುಗಾರಿಕೆ. ಅವರನ್ನು 'ಮಾನವ್ಯ'ಕವಿಯೆಂದೂ, 'ಪುನರ್ನವೋದಯದ ಉಷಃಕಾಲದ' ಕವಿಯೆಂದೂ ಕೆಲವರು ಕರೆದದ್ದುಂಟು. ಈ ಯಾವ ಹೆಸರಿನಿಂದ ಕರೆದರೂ ಅವರ ಒಟ್ಟಾರೆ ಸಾಹಿತ್ಯಾಭಿವ್ಯಕ್ತಿಯಲ್ಲಿ "ನಮ್ಮ ಸಮಗ್ರ ಮುನ್ನಡೆಗೆ ಜೀವಜಲ

---

೫. ಪ್ರೊ. ಎಲ್. ಎಸ್. ಶೇಷಗಿರಿರಾವ್ : ಮರುಭೂಮಿ : ಮುನ್ನುಡಿ ಪುಟ ೫

ನೀಡುವ ಓಯಾಸಿಸ್‌ಗಳನ್ನು ಹುಡುಕುವ'' ಆದರ್ಶ ಧೋರಣೆಯೇ ಎದ್ದು ಕಾಣುತ್ತದೆ. 'ಕವಿ' ಎಂಬ ಕವಿತೆಯೊಂದರಲ್ಲಿ ಅವರು ಕವಿಯನ್ನು ವ್ಯಾಖ್ಯಾನಿಸುವ ರೀತಿ ಹೀಗಿದೆ.

ಕಲ್ಪನೆಯ ಎತ್ತರವ ಭಾವನೆಯ ಬಿತ್ತರವ
ಸಾಧಿಸಲು ಸಂತತವು ಯತ್ನಿಸುವನು
ಸಂಪನ್ನ ಜೀವನದ ಸ್ವಪ್ನಗಳ ಸತ್ಯತೆಯ
ಶೋಧನೆಯ ಸತ್ಪಥದಿ ಸಾಗುವವನು !

ಬಾಳಿನಾಳಕೆ ಇಳಿದು ತಳದ ಕೊಳೆಯನೆ ತೊಳೆದು
ತಿಳಿಗಾಳಿ ಬೀಸಲೆಡೆಗೊಳಿಸಲೆಂದು
ಬಯಸುವನು; ಬಾನಿನಲಿ ಹಕ್ಕಿಯಂತೀಸುವನು
ಹೊಸ ಬಾಳನರಸಿಳೆಗೆ ಇಳಿಸಲೆಂದು !

ಜೀವನದ ವಿಕಸನಕೆ ಮೇಣ್ ಜಗದ ಸಂತಸಕೆ
ಹಾಡುವುದೆ ಕವಿಗಿರುವುದೊಂದು ಧರ್ಮ ![೬]

ಇಲ್ಲಿರುವುದು ಅಪ್ಪಟ ನವೋದಯ ಮನೋಧರ್ಮ. ಅದು ಸನದಿಯವರೊಳಗಿರುವ ಕವಿಯ ಅಂತರಂಗದ ದನಿಯೂ ಹೌದು.

ಕನ್ನಡದ್ದಲ್ಲದ ಹೊರನಾಡಿನಲ್ಲಿದ್ದುಕೊಂಡೇ ಕನ್ನಡದಲ್ಲಿ ಕಾವ್ಯ (ಸಾಹಿತ್ಯ) ಕೃಷಿ ಮಾಡಿರುವುದು ಸನದಿಯವರ ಮತ್ತೊಂದು ಮಹತ್ವದ ಅನನ್ಯತೆ. ಅವರ ಇಡಿಗಂಟು ಇರುವುದೇ ಕನ್ನಡದಲ್ಲಿ. ಹೊರನಾಡಿನಲ್ಲಿದ್ದೇ ಅವರು ಕನ್ನಡದ ಈ ಇಡಿಗಂಟನ್ನು ನಿರಂತರ ವೃದ್ಧಿಸಿಕೊಳ್ಳುತ್ತ ಬಂದದ್ದು ಎತ್ತಿ ಹೇಳಬೇಕಾದಂತಹ ಸಾಧನೆ. ಹೊರನಾಡಿಗರೊಂದಿಗೆ ಬೆರೆತು ಆ ಬದುಕಿನ ವ್ಯಾಪಕ ಅನುಭವವನ್ನು ಪಡೆದ ಸನದಿಯವರು ಆ ಮೂಲಕವೇ ತಮ್ಮ

೬. ಬಿ. ಎ. ಸನದಿ : ಸೂರ್ಯಪಾನ : ಪುಟ ೫೪

ಕಾವ್ಯಾಭಿವ್ಯಕ್ತಿಗೆ ಒಂದು ವಿಶಿಷ್ಟವೆನ್ನಬಹುದಾದ ಹೊಸತನವನ್ನು ಸಂಪಾದಿಸಿಕೊಂಡರು. ಹೋದಲ್ಲೆಲ್ಲ ಎಲ್ಲರನ್ನೂ ಪ್ರೀತಿಯಿಂದ ಅಪ್ಪಿ, ಒಪ್ಪಿಕೊಳ್ಳುವ ಅವರ ವಿಶಾಲ ಮನೋಭಾವ ಅವರಲ್ಲಿ ಹೊರನಾಡು-ಅನ್ಯನಾಡೆಂಬ ಭಾವನೆಯನ್ನು ಬಿತ್ತಲೇಯಿಲ್ಲ. ಇದೆಲ್ಲದರ ಒಟ್ಟು ಪರಿಣಾಮವನ್ನು ಡಾ. ತಾಳ್ತಜೆ ವಸಂತಕುಮಾರ ಅವರು "ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ, ಅವರಿಗಿರುವ ವ್ಯಾಪಕವಾದ ಜೀವನಾನುಭವ, ಉದ್ಯೋಗದ ನಿಮಿತ್ತ ಊರಿನಿಂದ ಊರಿಗೆ ಸುತ್ತುತ್ತಿದ್ದ ಸನದಿಯವರು ಹೋದಲ್ಲೆಲ್ಲ ಜನಮಾನಸದೊಡನೆ ಜೀವಂತವಾದ ಸಂಬಂಧಗಳನ್ನು ಸ್ಥಾಪಿಸಿಕೊಂಡವರು; ಎಲ್ಲ ರೀತಿಯ ಕಟ್ಟುಪಾಡುಗಾಳಾಚೆಗೆ ಮಾನವೀಯತೆಯನ್ನು ಅನ್ವೇಷಿಸಿದವರು; ಅದರಲ್ಲಿ ಸಾಕಷ್ಟು ಸಫಲರೂ ಆದವರು. ಈ ವೈವಿಧ್ಯಮಯವಾದ ಪ್ರಪಂಚದ ವಿವಿಧ ಮುಖಗಳಿಗೆ ಅವರ ಸಾಹಿತ್ಯವೂ ಸ್ಪಂದಿಸುತ್ತದೆ. ಮಾತ್ರವಲ್ಲ, ಈ ನಿಕಟ ಒಡನಾಟವು ಅವರಲ್ಲಿ ಮೂಡಿಸಿದ ಸಾಮಾಜಿಕ ಎಚ್ಚರವನ್ನು ಅವರು ತಮ್ಮ ಬರವಣಿಗೆಯಲ್ಲೂ ಕಾಯ್ದಿಟ್ಟುಕೊಂಡಿದ್ದಾರೆ. ಆದುದರಿಂದಲೇ ಅವರ ಬರಹಗಳಲ್ಲಿ ಕಟ್ಟುವ, ಬೆಸೆಯುವ, ಸೇತುವೆಗಳಾಗುವ ಆಶಯಗಳೇ ತುಂಬಿಕೊಂಡಿವೆ. ಸ್ವಸ್ಥ ಸಮಾಜದ ರಚನೆಗೆ, ರಕ್ಷಣೆಗೆ ಇಂಥ ಸ್ವಚ್ಛ ಮನಸ್ಸುಗಳ ಸತ್ವಪೂರ್ಣ ಸಾಹಿತ್ಯದ ಅಗತ್ಯವನ್ನು ನಾವೆಲ್ಲರೂ ಮನಗಾಣತ್ತೇವೆ"[೭] ಎಂದು ತುಂಬ ಅರ್ಥವತ್ತಾಗಿ ಸಂಗ್ರಹಿಸಿದ್ದಾರೆ. ಸನದಿಯವರ ಕಾವ್ಯಕ್ಕೆ ಇಂಥ ಹಿನ್ನೆಲೆ ದೊಡ್ಡ ಶ್ರೀಮಂತಿಕೆಯನ್ನು ತಂದುಕೊಟ್ಟಿದೆ.

---

೭. ಡಾ. ತಾಳ್ತಜೆ ವಸಂತಕುಮಾರ : ಸೋಪಾನದ ಸಂಪಾದನೆ : ಪುಟ ೯

ಇದೆಲ್ಲ ನಿಜ, ಆದರೆ ಸನದಿಯವರಿಗೆ ತಮ್ಮ ಕಾವ್ಯ ಕನ್ನಡಿಗರಿಗೆ ತಲುಪಿಲ್ಲವೇನೋ ಎಂಬ ಸಣ್ಣ ಕೊರಗು ಬಾಧಿಸಿದಂತಿದೆ. "ಕಳೆದ ೪೦ ವರ್ಷಗಳಿಂದ ಅರ್ಧಕ್ಕೂ ಮಿಕ್ಕಿದ ಕಾಲಾವಧಿಯಲ್ಲಿ ಹುಟ್ಟಿದ ನನ್ನ ಕಾವ್ಯ ಹೊರನಾಡಿನ ಬೆಳೆ. ಅಂತೆಯೇ ಅದು ಒಳನಾಡಿನ 'ಕಣ್ಣಿನಿಂದ ದೂರ ಮನಸಿನಿಂದ ದೂರ' (out of sight out of mind) ಉಳಿದಿದ್ದರೆ ಆಶ್ಚರ್ಯವಿಲ್ಲ."[೮] ಎಂಬ ಮಾತನ್ನು ಅವರು ಆಡಿದ್ದದೆ. ಅವರ ಈ ಬಗೆಯ ಕೊರಗಿಗೆ ಕಾರಣವೇ ಇಲ್ಲವೆಂದು ಖಂಡಿತವಾಗಿ ಹೇಳಬಹುದು. ಕನ್ನಡ ನಾಡು ಸನದಿಯವರನ್ನು ಹೊರನಾಡಿಗೆ ದತ್ತು ಕೊಟ್ಟಿಲ್ಲ, ಮರೆತಿಲ್ಲ, ಬದಲಾಗಿ ಅವರ ಸೃಜನಶೀಲ ಸಾಮರ್ಥ್ಯದ ಹಿನ್ನೆಲೆಯಲ್ಲಿ ಸಾಹಿತ್ಯ ಮತ್ತು ಸಾಂಸ್ಕೃತಿಕ ರಾಯಭಾರದಲ್ಲಿ ಉನ್ನತಿಕೆ ಸಾಧಿಸಿದಾಗ, ಯಶಸ್ವಿಯಾದಾಗ ಈ ನಾಡು ಅವರನ್ನು ಪ್ರೀತಿಯಿಂದ ಬರಮಾಡಿಕೊಂಡಿದೆ. 'ಹೊರನಾಡ ಕನ್ನಡಿಗ' ಎಂಬುದು ಅವರನ್ನು ಗುರುತಿಸಲು ಮತ್ತು ಗೌರವಿಸಲು ಕಾರಣವಾಗಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ. ಹೀಗಾಗಿ ಅವರು ಈಗ ತಮ್ಮ ಕಾವ್ಯ (ಸಾಹಿತ್ಯ) ಕನ್ನಡಿಗರಿಗೆ ಅಥವಾ ಒಳನಾಡಿಗರಿಗೆ ತಲುಪಿಲ್ಲವೆಂದು ಕೊರಗು ವ್ಯಕ್ತಪಡಿಸುವ ಅಗತ್ಯವಿಲ್ಲ. ಅವರು ಹಾಗೆ ವ್ಯಕ್ತಪಡಿಸಿದ ಕೊರಗಿನ ಕೊನೆಯ ಭಾಗದಲ್ಲಿ "ಹಾಗೆಂದು ಒಳನಾಡಿನಲ್ಲಿರುವ ಎಲ್ಲ ಕವಿಗಳ ಕಾವ್ಯವನ್ನು ಎಲ್ಲ ರಸಿಕರೂ ಸಮಾನ ಆಸಕ್ತಿಯಿಂದ ಗಮನಿಸುತ್ತಾರೆಂಬ ಗ್ರಹಿಕೆಯೂ ಸಲ್ಲ" ಎಂಬ ಮಾತು ಇದೆ. ಇದು ನಿಜವಾದ ಸಂಗತಿ. ಗುಣಾತ್ಮಕವಾದದ್ದು ಕಣ್ಣಳತೆಯಿಂದ ದೂರವಿದ್ದರೂ ತನ್ನ ಕಂಪಿನಿಂದ ಗಮನ ಸೆಳೆಯುತ್ತದೆ. ಆದರೆ

---

೮. ಬಿ. ಎ. ಸನದಿ : ಸೂರ್ಯಪಾನ : 'ನನ್ನ ನುಡಿ'ಯಲ್ಲಿ ಪುಟ III

ಕಳಪೆಯಾದದ್ದು ಕಣ್ಣೆದುರೇ ನರ್ತನ ಮಾಡಿದರೂ ಕಾಣುವುದಿಲ್ಲ. ಸನದಿಯವರು ಮತ್ತು ಅವರ ಸಾಹಿತ್ಯ ಹೊರನಾಡ ಬೆಳೆಯಾಗಿದ್ದರೂ ಕನ್ನಡಿಗರ ಹೃನ್ಮನಗಳಲ್ಲಿ ಸ್ಥಾಪಿತವಾಗಿರುವುದಕ್ಕೆ ಬಹುಮುಖ್ಯ ಕಾರಣ ಅವರ ವ್ಯಕ್ತಿತ್ವ ಮತ್ತು ಅಭಿವ್ಯಕ್ತಿಯಲ್ಲಿರುವ ಹಿರಿಗುಣಗಳಿಂದಾಗಿ ಎಂದರೆ ಅತಿಶಯೋಕ್ತಿಯಲ್ಲ. " ಬದುಕಿನ ಬಗ್ಗೆ ಗಾಢವಾದ ಅನುರಕ್ತಿಯನ್ನು ಮಾನವೀಯ ಸಂಬಂಧಗಳ ಬಗ್ಗೆ ಅದಮ್ಯವಾದ ಶ್ರದ್ಧೆಯನ್ನೂ ಉಳಿಸಿಕೊಂಡು ಬಂದ ಸನದಿಯಂಥವರು ಸಾಹಿತ್ಯಿಕವಾಗಿ ಮಾತ್ರವಲ್ಲ ಸಾಂಸ್ಕೃತಿಕವಾಗಿಯೂ ನಮಗೆ ಮುಖ್ಯರಾಗುತ್ತಾರೆ. ದೂರದ ಮುಂಬೈನಲ್ಲಿದ್ದೂ ಸನದಿಯವರು ಕಳೆದ ಹಲವು ದಶಕಗಳ ಕಾಲಮಾನದಲ್ಲಿ ಕನ್ನಡ ಸಹೃದಯರ ಜತೆಗೆ ತಮ್ಮನ್ನು ಬೆಸದುಕೊಂಡಿರುವುದು ಈ ಬಗೆಯ ಮಾನವೀಯ ಪ್ರೀತಿಯ ಸಂಬಂಧಗಳಿಂದಲೇ"[೯] ಎಂಬ ಡಾ. ಜಿ. ಎಸ್. ಶಿವರುದ್ರಪ್ಪ ಅವರ ಹೇಳಿಕೆ ಈ ಸಂದರ್ಭದಲ್ಲಿ ತುಂಬ ಅರ್ಥಪೂರ್ಣವೆನಿಸುತ್ತದೆ.[೧೦]

ಸಾಹಿತ್ಯದ ವಿಷಯವಾಗಿ ಮಾತನಾಡುವಾಗ ಸಾಹಿತಿಯು ಹುಟ್ಟಿ ಬಂದ ಧರ್ಮ, ಜನಾಂಗದ ಬಗ್ಗೆ ಪ್ರಸ್ತಾಪಿಸುವುದು ಔಚಿತ್ಯಪೂರ್ಣವಾಗಲಿಕ್ಕಿಲ್ಲ. ಹಾಗೂ ಅದು ಅಗತ್ಯವೂ ಆಗಲಿಕ್ಕಿಲ್ಲ. ಅಂತೆಂದೇ ಸನದಿಯವರು 'ಮುಸ್ಲಿಂ ಜನಾಂಗದಿಂದ ಬಂದವರು' ಎಂದು ಹೇಳಲು ಅವರ ಅತ್ಯಾತ್ಮೀಯ ಸ್ನೇಹಿತರು ಹಾಗೂ ಕನ್ನಡ ವಿಮರ್ಶೆ ಹಿಂಜರಿದಂತಿದೆ. ಈ ಹಿಂಜರಿಕೆಗೆ ಬಹಳ ಮುಖ್ಯ ಕಾರಣವಾಗಿರುವುದು ಸನದಿಯವರು ಜನಾಂಗಾತೀತವಾಗಿ

---

೯. ಡಾ. ಜಿ. ಎಸ್. ಶಿವರುದ್ರಪ್ಪ : ಸಂಭವ : ಮುನ್ನುಡಿಯಲ್ಲಿ

೧೦. ಈಗಂತೂ ಅವರು ಕರ್ನಾಟಕಕ್ಕೆ ಬಂದು (ಕುಮಟಾದಲ್ಲಿ) ನೆಲೆಸಿದ್ದಾರೆ.

ಎಲ್ಲರೊಂದಿಗೆ ಬೆರೆತದ್ದು, ಬೆಳೆದದ್ದು ಮತ್ತು ಉಳಿದದ್ದು. ಈ ಮಾತುಗಳಲ್ಲಿ ಈ ಅಂಶವನ್ನು ನಾನು ಪ್ರಧಾನವಾಗಿ ಪ್ರಸ್ತಾಪಿಸುತ್ತಿರುವೆ. ಮುಖ್ಯವಾಗಿ ಎತ್ತಿ ಹೇಳಬೇಕಾದ ವಾಸ್ತವವೆಂದರೆ ಸನದಿಯವರ ಇಡಿ ಸಾಹಿತ್ಯರಾಶಿಯನ್ನು ಹತ್ತಾರು ಬಾರಿ ತಿರುವಿ ಹಾಕಿದರೂ ಅಲ್ಲೆಲ್ಲೂ ಅವರು ಮುಸ್ಲಿಂ ಜನಾಂಗದವರೆಂದು ಗುರುತಿಸಬಹುದಾದ ಕುರುಹುಗಳಿಲ್ಲದಿರುವುದು. ಇದು ಸನದಿಯವರ ವ್ಯಕ್ತಿತ್ವ ಮತ್ತು ಅಭಿವ್ಯಕ್ತಿಯ ಅತೀ ಮುಖ್ಯವಾದ ಅನನ್ಯತೆಯೆಂದು ನನ್ನ ಭಾವನೆ. ತಾನು ಮುಸ್ಲಿಂ ಜನಾಂಗದಿಂದ ಬಂದವ ಎಂಬುದನ್ನವರು ಪ್ರಜ್ಞಾಪೂರ್ವಕವಾಗಿ, ಎಚ್ಚರಿಕೆಯಿಂದ ಹಾಗೂ ಮುತುವರ್ಜಿನಿಂದ ಮುಚ್ಚಿಡುವುದಿಲ್ಲ; ಬದಲಾಗಿ ಅವರ ಬದುಕಿನ ಆಳದಲ್ಲೇ ಬೇರು ಬಿಟ್ಟಿರುವ 'ಸಮನ್ವಯ' ಮನೋಧರ್ಮ ಅವರಿಗರಿವಿಲ್ಲದಂತೆಯೇ ಈ ಕೆಲಸ ಮಾಡಿಸುತ್ತದೆ. 'ಸಾಹಿತ್ಯದಲ್ಲಿ ಮುಸ್ಲಿಂ ಪ್ರಜ್ಞೆ' ಎಂಬ ಪ್ರತ್ಯೇಕವಾದ ಲೇಬಲ್ ಹಚ್ಚಿಕೊಂಡ ಸಾಹಿತ್ಯವಿಮರ್ಶೆಯ ಉಪಕ್ರಮವೊಂದು ಕನ್ನಡದಲ್ಲಿ ಬೆಳೆದು ಬಂದಿದೆ. ಮುಸ್ಲಿಂ ಜನಾಂಗದ ಒಳ-ಹೊರಗನ್ನು ಚಿತ್ರಿಸುವ ಲೇಖಕರ ಸಾಹಿತ್ಯ ಕೃತಿಗಳ ವಿಶ್ಲೇಷಣೆಗೆ ಇಂಥ ವಿಮರ್ಶೆ ಪೂರಕವಾಗಿರಬಹುದು. ಆದರೆ, ಈ ಬಗೆಯ ಮಾನದಂಡವನ್ನಿಟ್ಟುಕೊಂಡು ಸನದಿಯವರ ಕಾವ್ಯ ಅಥವಾ ಸಾಹಿತ್ಯವನ್ನು ಪರಾಮರ್ಶಿಸ ಹೊರಟರೆ ಅಲ್ಲಿ ಸಿಗುವುದು ಸೊನ್ನೆ ಮಾತ್ರ. ಅಷ್ಟರ ಮಟ್ಟಿಗೆ ಸನದಿಯವರು ಅಂಥದ್ದನ್ನೆಲ್ಲ ಮೀರಿದ್ದಾರೆ.

ಸನದಿಯವರ ವ್ಯಕ್ತಿತ್ವ ಮತ್ತು ಸಾಹಿತ್ಯದ ಮೇಲೆ ಕನ್ನಡ ವಚನಕಾರರ ಗಾಢವಾದ ಪ್ರಭಾವವಿದೆ. ಜೊತೆಗೆ, ಹಿಂದೂ-ಮುಸ್ಲಿಮರು ಐಕ್ಯತೆಯೊಂದಿಗೆ ಬಾಳಿದ ಸಮನ್ವಯ ಪರಿಸರದ

ಪ್ರಭಾವವಿದೆ. ಇದೆಲ್ಲಕ್ಕೂ ಮಿಗಿಲಾಗಿ ಅವರ ವ್ಯಕ್ತಿತ್ವದಲ್ಲಿಯೇ ಎಲ್ಲ ಜನರನ್ನು 'ಮಾನವರನ್ನಾಗಿ' ಕಾಣುವ, ಗುರುತಿಸುವ, ಗೌರವಿಸುವ ಒಂದು ವಿಶಾಲ ಮನೋಧರ್ಮವಿದೆ. ಹೀಗಾಗಿಯೇ, ಅವರು ಎಲ್ಲೂ ತಮ್ಮ ಹುಟ್ಟಿನ, ಅಥವಾ ಧರ್ಮ-ಜನಾಂಗದ ಬಗ್ಗೆ ಮಾತಾಡುವುದಿಲ್ಲ; ಬದಲಾಗಿ ಅದರ ವಸ್ತುನಿಷ್ಠ ವಿಮರ್ಶಕರಾಗುತ್ತಾರೆ.

ದಿನಕೆ ಐದೈದು ಸಲ ತಪ್ಪದೆಯೆ ಪ್ರಾರ್ಥಿಸುವ
ಕುಳಿತಲ್ಲಿ ನಿಂತಲ್ಲಿ ನಿನ್ನನ್ನೆ ಕೀರ್ತಿಸುವ
ಉಂಡದ್ದು ಕುಡಿದದ್ದು ನಿನ್ನ ದಯೆಯಿಂದೆನುವ
ನಯದ ಅಭಿನಯದಲ್ಲಿ ನಿಷ್ಣಾತರಾದವರ ಕಂಡಿರುವೆ ತಂದೆ
ನೀನಲ್ಲದನ್ಯರಿಗೆ ತಲೆಬಾಗುವವರಲ್ಲ
ಇದೊ ನಮ್ಮ ಮನಸ್ಸಾಕ್ಷಿ, ಬಲಸಾಕ್ಷಿ, ಛಲಸಾಕ್ಷಿ
ಮುಂದಲೆಯ ಮೇಲಿನ ಕಪ್ಪುಕಲೆ ಸಾಕ್ಷಿ, ಹೆಚ್ಚೇನು
ನಿನಗೆ-ನಿನಗೊಬ್ಬನಿಗೇ ಸಂಪೂರ್ಣ ಶರಣು
ಎಂಬುವವರಿಬ್ಬಗೆಯ ಕಂಡಿರುವೆ ತಂದೆ
ಇಂಥವರ ವರ್ತನೆಯ ವರ್ತುಲದ ಪರಿಘದಲಿ
ಬಿಂದುವಾದರೆ ಮಾತ್ರ ನೀನೊಲಿವುದುಂಟೆ ?
ಅಂದಿಗೂ ಇಂದಿಗೂ ಇದೆ ನನ್ನ ತಂಟೆ ![೧೧]

ಸನದಿಯವರ ಇಲ್ಲಿನ ಪ್ರಶ್ನೆ ಮತ್ತು ತಂಟೆಯ ಹಿಂದಿರುವ ಕಾಳಜಿ ಎಂಥದೆಂಬುದನ್ನು ಬಿಡಿಸಿ ಹೇಳಬೇಕಿಲ್ಲ. "ತಾನೊಬ್ಬ ಮುಸ್ಲಿಂ ಕವಿ ಎಂಬುದನ್ನು ಪ್ರಜ್ಞಾಪೂರ್ವಕವಾಗಿ ಆಹ್ವಾನಿಸಿಕೊಂಡು ಬರೆಯದೆ, ನಮ್ಮಲ್ಲೊಬ್ಬರಾಗಿ ನಿಜ ಪ್ರಜಾಪ್ರಭುತ್ವವಾದಿ ಕವಿಯಾಗಿ ಸನದಿ ಬರೆದಿದ್ದಾರೆ, ಎನ್ನುವುದು

೧೧. ಬಿ. ಎ. ಸನದಿ : ಮನೆ ಮನೆಗೆ ಬೆಲಿ : ಸೂರ್ಯಪಾನ : ಪುಟ ೩೭

ಇಂದಿನ ಸನ್ನಿವೇಶದಲ್ಲಿ ಮಹತ್ವದ್ದು. ಈ ಅಂಶದಿಂದ ಈ ಕವಿ ನಮಗೆಲ್ಲ ಹೆಚ್ಚು ಆತ್ಮೀಯರೂ ಆಗುತ್ತಾರೆ. ಕೇವಲ ಮನುಷ್ಯರಾಗಿ ಅನುಭವಿಸಿದ್ದನ್ನು ತನ್ನ ತಾಯ್ನುಡಿಯಲ್ಲಿ ಇಡುವ ನಿಸ್ಪೃಹತೆ ಅಂಥ ಹಿರಿಮೆ ವ್ಯಕ್ತಿತ್ವದಲ್ಲಿದ್ದಾಗ ಮಾತ್ರ ಸಾಧ್ಯ"[೧೨] ಎಂಬ ಡಾ. ಟಿ. ಜಿ. ಭಟ್ಟ ಹಾಸಣಗಿಯವರ ಮಾತು ಸನದಿಯವರ ಆ ಬಗೆಯ ಅನನ್ಯತೆಯನ್ನೇ ಸಾರುತ್ತದೆ.

ಇದಕ್ಕೂ ಮುಂದೆ ಹೋಗಿ ಹೇಳಬೇಕಾದ ವಾಸ್ತವವೆಂದರೆ, ಈ ನೆಲದಲ್ಲಿ ಆಗಾಗ ತಲೆದೋರುವ ಹಿಂದೂ-ಮುಸ್ಲಿಮರ ಸಂಘರ್ಷ, ಅದರಿಂದಾಗುವ ಸಾವು-ನೋವು, ಹಾನಿಗಳು ಮತ್ತು ಅದರ ಪರಿಣಾಮವಾಗಿ ಉಂಟಾಗುವ ಅಶಾಂತಿಯು ಸನದಿಯವರ ಮನಸ್ಸಿಗೆ ರೇಜಿಗೆ ತಂದಿದೆ. ಈ ಬಗೆಯ ಭೇದ-ಭಾವಗಳಿಗೆ ಅವರು ಹಿಂದೂ ಮುಸ್ಲಿಮರ ನಡುವೆ ನಡೆಯುವ ಸಂಘರ್ಷ ಕುರಿತಾಗಿ ಅತ್ಯಂತ ಖೇದ ವ್ಯಕ್ತಪಡಿಸುತ್ತಾರೆ. ಅಂಥ ಸಂಘರ್ಷ ಹುಟ್ಟು ಹಾಕುವವರಿಗೆ ಕೆಲವು ಮೂಲಭೂತ ಪ್ರಶ್ನೆಗಳನ್ನು ಹಾಕುತ್ತಾರೆ. ಅವರು ಹಲವಾರು ಕವನಗಳು ಇದಕ್ಕೆ ಸಾಕ್ಷಿಯಾಗಿವೆ.

ರಾಷ್ಟ್ರ ಪ್ರೇಮದಲಿ
ಹಿಂದೂ-ಮುಸ್ಲಿಂ ಗೆರೆಗಳ ಕೊರೆಯುವ
ನಾಯಕರೆ !
ಯಾವ ದೇಶದಲಿ ಮೈದಾಳಿದ್ದು
ನಿಮ್ಮ ಜೀವಕೋಶ ?
ಯಾವ ವೇಷದಲಿ ಹೊರಹೊಮ್ಮಿದ್ದು
ಈ ಬಗೆ ಭಾವಾವೇಶ ?[೧೩]

---

೧೨. ಡಾ. ಟಿ. ಜಿ. ಭಟ್ಟ ಹಾಸಣಗಿ : ಸೋಪಾನ : ಪುಟ ೧೨೫

೧೩. ಬಿ. ಎ. ಸನದಿ : ಮರಭೂಮಿ : ಪುಟ ೨೭

ಅಗಿಯಲಾರು ಹುಗಿಯಲಾರು
ಸುಡಲಿಕಾರು ಗತಿಯಿಲ್ಲದ ಹೆಣದ ನಿಬ್ಬಣ
ಗುರುತು ಸಿಗದ ಶವ ಯಾರದು ?
ಯಾರದು ಈ ರಕ್ತತರ್ಪಣ ?
ಹುಟ್ಟಿನಲ್ಲಿ ಯಾವ ಜಾತಿ
ಸತ್ತಮೇಲೆ ಯಾವ ಜಾತಿ ?
ಯಾವ ದೈವ ಯಾವ ಧರ್ಮ ಭೂಮಿ-ಬಾನಿಗೆ
ರಕ್ತದ ಈ ಕಡಲಿನಲ್ಲಿ ಶಾಂತಿ ಯಾರಿಗೆ ?[೧೪]

ಇಂಥ ಪ್ರಶ್ನೆಗಳನ್ನು ಅವರು ಹಾಕುವದು ಒಬ್ಬ ಮುಸ್ಲಿಂ ಗನಾಂಗದ ವ್ಯಕ್ತಿಯಾಗಿ ಅಲ್ಲ, ಮಾನವೀಯ ಕಳಕಳಿಯಿರುವ ಒಬ್ಬ ವಿಶಾಲಹೃದಯದ ಕವಿಯಾಗಿ. ಸನದಿಯವರು ನಮಗೆಲ್ಲ ಬಂಳ ದೊಡ್ಡವರಾಗಿ ಕಾಣುವದು ಈ ಕಾರಣಕ್ಕಾಗಿ. ಹೀಗೆ ಹೇಳುತ್ತ ಹೋಗಬಹುದಾದ ಹಲವಾರು ಅನನ್ಯತೆಗಳ ಆಗರವಾಗಿರುವ ಸನದಿಯವರು ಕನ್ನಡದ ಮಹತ್ವದ ಲೇಖಕರಾಗಿ ಕಳೆದ ಐವತ್ತಕ್ಕೂ ಮಿಕ್ಕಿ ವರ್ಷಗಳಿಂದ ನಿರಂತರವಾಗಿ ಸಾಹಿತ್ಯಕೃಷಿ ಮಾಡುತ್ತಲೇ ಬಂದಿದ್ದಾರೆ. ಸನದಿಯವರು ಯಾವುದೇ ಜನಾಂಗದಿಂದ ಬಂದಿರಲಿ, ಕನ್ನಡವಲ್ಲದ ಹಿನ್ನೆಲೆಯಲ್ಲಿ ನಾವು ಅವರನ್ನು ಗುರುತಿಸುವುದು ಮತ್ತು ಗೌರವಿಸುವುದು ಅವರು ಒಬ್ಬ ಆಶಾವಾದಿಯಾದ, ಮಾನವೀಯ ಹೃದಯಸಂವೇದನೆಯುಳ್ಳ ಅಪ್ಪಟ ಕನ್ನಡ ಸಾಹಿತಿಯೆಂದು. ಇಂಥ ಸನದಿಯವರು ಕಥೆ, ಶಿಶುಸಾಹಿತ್ಯ, ನಾಟಕ, ಸಂಪಾದನೆ, ವಿಮರ್ಶೆ, ಹರಟೆ, ಅನುವಾದ ಇತ್ಯಾದಿ ಪ್ರಕಾರಗಳಲ್ಲಿ ಸಾಕಷ್ಟು ಕೃಷಿ ಮಾಡಿದ್ದರೂ ಅವರ ಪ್ರಧಾನ ಆಸಕ್ತಿ ಇರುವುದು

---

೧೪. ಬಿ. ಎ. ಸನದಿ : ಮರುಭೂಮಿ : ಪುಟ ೨೭

ಕಾವ್ಯದಲ್ಲಿ. ಅವರು ಕನ್ನಡ ಸಾಹಿತ್ಯಲೋಕಕ್ಕೆ ಹೆಚ್ಚು ಪರಿಚಿತರಾಗಿರುವುದು ಒಬ್ಬ ಕವಿಯಾಗಿ.

'ಆಶಾಕಿರಣ' (೧೯೫೭) ದಿಂದ ಹಿಡಿದು 'ಮರುಭೂಮಿ' (೧೯೯೮)ಯ ವರೆಗೆ ಸನದಿಯವರು ಈ ವರೆಗೆ ಒಟ್ಟು ೧೩ ಕವನ ಸಂಕಲನಗಳನ್ನು ಹೊರತಂದಿದ್ದಾರೆ. ಸುನೀತ (ಅಷ್ಟಷಟ್ಪದಿ), ಭಾವಗೀತೆ, ಮುಕ್ತಛಂದ, ಹನಿಗವನ ಹೀಗೆ ವಿವಿಧ ರೂಪಗಳಲ್ಲಿ ಅವರ ಕಾವ್ಯ ಬಿಚ್ಚಿಕೊಂಡಿದೆ. ಸರಳ, ಸುಂದರ ಮತ್ತು ಲಲಿತ ಗುಣದ ಅವರ ಕಾವ್ಯದಲ್ಲಿ ಎದ್ದುಕಾಣುವ ಮಹತ್ವದ ಅಂಶವೆಂದರೆ ಲಯಗಾರಿಕೆ. ಸನದಿಯವರ ವ್ಯಕ್ತಿತ್ವದಲ್ಲಿರುವ ನೆಲದೊಂದಿಗಿನ ಪ್ರೀತಿ, ಶಿಸ್ತು, ಸರಳತೆಗಳು ಅವರ ಕಾವ್ಯದ ಲಕ್ಷಣಗಳೂ ಆಗಿವೆ. ಎಲ್ಲೂ ಸಂದಿಗ್ಧ ಮತ್ತು ಸಂಕೀರ್ಣವಾಗದ ಅವರ ಕಾವ್ಯಾಭಿವ್ಯಕ್ತಿ, ಮಿತ್ರ ಸಮ್ಮಿತದ ರೀತಿಯಲ್ಲಿ ನಮ್ಮನ್ನು ಆತ್ಮೀಯವಾಗಿ ತಟ್ಟುತ್ತದೆ. ಅಷ್ಟೇ ಸುಲಭವಾಗಿ ತನ್ನ ಮುಖ್ಯ ನೆಲೆಗೆ ಕರೆದೊಯ್ಯುತ್ತದೆ. ಒಂದಿಷ್ಟು ವಿವರಣಾತ್ಮಕವೇ ಅನ್ನಿಸಬಹುದಾದ ಅವರ ಕವನಗಳು ಕೆಲವೊಮ್ಮೆ ದಿನಸಿಯಂಗಡಿಯ ಹಾಗೆ ಎಲ್ಲವನ್ನೂ ತೆರೆದಿಡುತ್ತ ಹೋಗುವುದುಂಟು. ಹೀಗೆ ಮಾಡುವುದರ ಹಿಂದೆ ಸನದಿಯವರಿಗೆ ತಾವು ಕವನ ಮಾಡಹೊರಟ ವಸ್ತುವಿನ ಎಲ್ಲಾ ಮಗ್ಗುಲಗಳನ್ನು ತೆರೆದು ತೋರಿಸುವ ಹಂಬಲವಿರುವುದನ್ನು ಗುರುತಿಸಬಹದು, ಹೀಗೆ ಮಾಡಿದರೆ ಕಾವ್ಯದ ಪರಿಣಾಮ ಹೆಚ್ಚು ಸಾಂದ್ರವಾಗಬಹುದೆಂಬ ಆಶಯವೂ ಅವರಿಗಿದ್ದಂತೆ ತೋರುತ್ತದೆ. ಸನದಿಯವರ ಕವನಗಳ ವಸ್ತುವಿನ ವ್ಯಾಪ್ತಿಗೆ ಮಿತಿಯೇ ಇಲ್ಲ. ತಮ್ಮ ಅನುಭವಕ್ಕೆ ದಕ್ಕುವ ಯಾವದೇ ವಿಷಯಕ್ಕೂ ಅವರು ಕಾವ್ಯಾತ್ಮಕ ಅಭಿವ್ಯಕ್ತಿ ಕೊಡುವುದನ್ನು ಕಾಣಬಹುದು. ಅವರ ಈ ಒಟ್ಟಾರೆ. ಕ್ರಿಯೆಯ ಹಿಂದೆ ತುಡಿಯುವುದು ಮಾತ್ರ ಒಬ್ಬ

ಸುಧಾರಣಾವಾದಿಯ ಸಮನ್ವಯ ಗುಣ, ವ್ಯಕ್ತಿ, ಸಮಾಜ, ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದಲ್ಲಿರುವ ಆತಂಕ, ಕ್ಷುದ್ರತೆ, ಕೆಡಕುಗಳನ್ನು ಮತ್ತು ಒಟ್ಟಾರೆ ಸ್ಥಗಿತ ಸ್ಥಿತಿಯನ್ನು ತಮ್ಮ ಕಾವ್ಯದ ಮೂಲಕ ಬಿಚ್ಚಿಟ್ಟು ಅವುಗಳನ್ನು ಚಲನಶೀಲ ನೆಲೆಗೆ ತರುವಲ್ಲಿ ತಮಗಿರುವ ಹೃದಯಸ್ಥ ಆಸಕ್ತಿಯನ್ನು ಅವರು ಪ್ರಕಟಿಸುತ್ತಾರೆ. ಈ ಆಸಕ್ತಿಯಲ್ಲಿ ಮತ್ತು ಅದನ್ನು ಮತ್ತೆ ಮತ್ತೆ ಗಟ್ಟಿಯಾಗಿ ಪ್ರಕಟಿಸುವಲ್ಲಿ ಅವರು ಒಬ್ಬ ಆಶಾವಾದಿಯಾಗಿ ಕಾಣುತ್ತಾರೆ. ಆಶಾವಾದ ಅವರ ಒಟ್ಟು ಕಾವ್ಯದ ಒಂದು ಪ್ರಮುಖ ಮೌಲ್ಯವೇ ಆಗಿದೆ.

ನಾಟಕದ ವೇಷ-ಭೂಷಣವುಳಿದು
ನಿತ್ಯಜೀವನಕಿಳಿದು
ತಿಳಿದು ನಡೆದರೆ ಬದುಕು ಸೊಗದ ಬೀಡು[೧೫]

'ಕಾಯ್ದು' ನೋಡುವುದೊಂದೆ ನಮ್ಮ ಪಾಲಿಗೆ ತಪವು
ತಂದರೂ ತರಬಹುದು ಹಸಿರು ಸುದ್ದಿಯ ಹೊತ್ತು
ಬರುವ ಸುಗ್ಗಿ[೧೬]

ಹೊಂಡ ಬಳಿಯುವ ಕೆಲಸ ಮುಗಿಯಿತೋ
ತಾ ಮತ್ತೆ ಹೊಸನೀರು ಬರಬಹುದು
ಕೊಳಕು ವಾಸನೆ ಕಾಲ್ದೆಗೆಯಬಹುದು
ಊರ ಗಾಳಿಗೆ ಕೊಂಚ ನೆಮ್ಮದಿಯೆ ಸಿಗಬಹುದು
ಹೊಸ ಮಳೆಗೆ ಹೊಂಡದೆದೆ ತೆರೆಯಬಹುದು
ಹೊಸಗಾಳಿ ಹೊಸ ನೀರ ಕೈ ಕುಲುಕಬಹುದು[೧೭]

---

೧೫. ಬಿ. ಎ. ಸನದಿ : ಪ್ರತಿಬಿಂಬ : ಸೂರ್ಯಪಾನ : ಪುಟ ೨೨೮
೧೬. ಬಿ. ಎ. ಸನದಿ : ಧ್ರುವಬಿಂದು : ಸೂರ್ಯಪಾನ : ಪುಟ ೨೦೬
೧೭. ಬಿ. ಎ. ಸನದಿ : ಸಂಭವ : ಸೂರ್ಯಪಾನ : ಪುಟ ೪೪೯

ಇಂದು ನಾಳೆಗಳಲ್ಲಿ ಜೀವಕಾದರು ಮರಣ
ಎಂದೆಂದು ಶಾಶ್ವತವೆ ಜೀವನಾಶಾಕಿರಣ[೧೮]

ಇಲ್ಲೆಲ್ಲ ಅವರ ಆಶಾವಾದವೇ ಪ್ರಧಾನವಾಗಿರುವುದನ್ನು ಅತ್ಯಂತ ಸರಳವಾಗಿ ಗುರುತಿಸಬಹುದು. ಇಂಥ ಆಶಾವಾದವನ್ನು ವ್ಯಕ್ತಪಡಿಸುವಾಗ ಅವರು ಎಲ್ಲೂ ಆಕ್ರೋಶಭರಿತರಾಗುವುದಿಲ್ಲ. ಹುಸಿ ಭರವಸೆ ಕೊಡುವ ಡಾಂಭಿಕರಾಗುವುದಿಲ್ಲ. ಅದು ಅವರ ಅಂತರಂಗದ ಅಪೇಕ್ಷೆಯಾಗಿ, ನಯ-ವಿನಯ-ಪ್ರೀತಿಯ ರೂಪದಲ್ಲೇ ಅಭಿವ್ಯಕ್ತಿ ಪಡೆಯುತ್ತದೆ. ಇದು ಕವಿ ಸನದಿಯವರ ಸಾತ್ವಿಕ ಮನಸ್ಸಿಗೆ ಸಾಕ್ಷಿಯಾಗುತ್ತದೆ. ಚೀನಾ ಯುದ್ಧದ ಸಂದರ್ಭದಲ್ಲಿ ರಚಿತವಾದ ಅವರ ರಾಷ್ಟ್ರಪ್ರೇಮದ ಕವಿತೆಗಳಲ್ಲಿ ಒಂದಿಷ್ಟು ಅತಿಯಾದ ಹುಮ್ಮಸ್ಸು, ಆವೇಶ, ಉದ್ವೇಗಗಳು ಕಾಣುತ್ತವೆಯಾದರೂ ಅದು ಸಾಮಯಿಕ ಅಗತ್ಯವಾಗಿತ್ತೆಂದು ತೋರುತ್ತದೆ. ಸನದಿಯವರ ದಾಂಪತ್ಯಗೀತೆಗಳಂತೂ ಒಂದು ಸುಂದರ ಮತ್ತು ಮಧುರ ವಾತಾವರಣವನ್ನೇ ನಿರ್ಮಿಸುತ್ತವೆ. ಅವರ ರಸಿಕ ಹೃದಯದ ಅಭಿವ್ಯಕ್ತಿಯಾಗಿ ಮೂಡಿಬಂದಿರುವ ಸಾಂಸಾರಿಕ ಕವನಗಳು ನರಸಿಂಹಸ್ವಾಮಿಯವರ ಕವಿತೆಗಳನ್ನು ನೆನಪಿಗೆ ತರುತ್ತವೆ.

ಹೀಗೆ ಕನ್ನಡ ಕಾವ್ಯದಲ್ಲಿ ತಮ್ಮದೇ ಆದ ವಿಶಿಷ್ಟ ಹೆಜ್ಜೆಗಳನ್ನು ಮೂಡಿಸಿರುವ ಸನದಿಯವರು 'ಆಶಾಕಿರಣ' (೧೯೫೭) ದಿಂದ ಹಿಡಿದು 'ಸಂಭವ' (೧೯೯೧)ದ ವರೆಗೆ ತಮ್ಮ ೧೨ ಸಂಕಲನಗಳನ್ನು ಸಂಗ್ರಹಿಸಿ 'ಸೂರ್ಯಪಾನ' (೧೯೯೫)ವೆಂಬ ಸಮಗ್ರ ಸಂಪುಟವನ್ನು ಹೊರತಂದಿದ್ದಾರೆ. ಈ ಸಮಗ್ರ ಸಂಪುಟ

---

೧೮. ಬಿ. ಎ. ಸನದಿ : ಆಶಾಕಿರಣ : ಸೂರ್ಯಪಾನ : ಪುಟ ೨೯

ಬಂದ ನಂತರ 'ಮರುಭೂಮಿ' (೧೯೯೮) ಪ್ರಕಟವಾಗಿದೆ. ತಮ್ಮ ಕಾವ್ಯರಚನೆಯ ಆರಂಭದ ಹಂತದಲ್ಲಿಯೇ ಅವರು ಶಿಶುಗೀತೆಗಳನ್ನೂ ರಚಿಸಿದ್ದುಂಟು. ಗುಲಾಬಿ ಗೊಂಚಲು (೧೯೫೫), ಗೃಹಪಂಚಮಿ (೧೯೫೫), ಜಿಲೇಬಿ ಝಣ್ ಝಣ್ (೧೯೫೭), ಹೂವಿನ ಹುಡುಗಿ (೧೯೭೦) ಹಾಗೂ ಬಹುಮಾನ - ಇವು ಅವರ ಶಿಶುಗೀತೆಗಳ ಸಂಕಲನಗಳು. ಮಕ್ಕಳಿಗೆ ಇಷ್ಟವಾಗುವ ವಸ್ತು ಹಾಗೂ ಅವರ ಮನಸ್ಸಿಗೆ ಮುದನೀಡುವ ಲಯಗಾರಿಕೆಯಿಂದ ಕೂಡಿರುವ ಈ ಗೀತೆಗಳು ಶಿಶುಸಾಹಿತ್ಯ ಕ್ಷೇತ್ರಕ್ಕೆ ಮಹತ್ವದ ಕಾಣಿಕೆಗಳೇ ಆಗಿವೆ. ಗಂಭೀರ ಕಾವ್ಯದ ಕಡೆಗೆ ಅವರ ಗಮನ ಹರಿದ ಮೇಲೆ ಯಾಕೋ ಅವರು ಮುಂದೆ ಶಿಶುಕಾವ್ಯ ಬರೆಯಲಿಲ್ಲ. ಬರೆಯಬಹುದಿತ್ತೇನೋ !

ಬೇರೆ ಬೇರೆ ಭಾಷೆಯಿಂದ ಸನದಿಯವರು ಅನುವಾದಿಸಿದ ಹಲವಾರು ಕವನಗಳು ಅವರ ವಿವಿಧ ಸಂಕಲನಗಳಲ್ಲಿ ಅಲ್ಲಲ್ಲಿ ಸೇರಿಕೊಂಡಿವೆ. ಅನುವಾದಿತ ಸ್ವತಂತ್ರ ಸಂಕಲನಗಳಾಗಿಯೂ ಪ್ರಕಟಗೊಂಡಿವೆ. ಕವಿಗಳ ಮೂಲ ಆಶಯುಗಳನ್ನು ಕವಿಹೃದಯದಿಂದಲೇ ಪುನಸ್ಸೃಷ್ಟಿಸುವ ಕಾರಣ ಅವರ ಅನುವಾದಿತ ಕವನಗಳೂ ಸ್ವಂತ ರಚನೆಗಳ ಹಾಗೆಯೇ ತೋರುತ್ತವೆ. ಇಲ್ಲಿ ಮುಖ್ಯವಾಗಿ ಹೆಸರಿಸಲೇಬೇಕಾದದ್ದು 'ಲಿಂಕನ್ ಕವಿತೆಗಳು' (೧೯೯೯) ಎಂಬ ಅವರ ಅನುವಾದಿತ ಸಂಕಲನವನ್ನು. ಅಮೇರಿಕದ ೧೬ ನೆಯ ರಾಷ್ಟ್ರಾಧ್ಯಕ್ಷ ಹಾಗೂ ಪ್ರಖರ ಪ್ರಜಾಪ್ರಭುತ್ವವಾದಿ ಅಬ್ರಹಾಂ ಲಿಂಕನ್‌ರ "The Pomes of Abraham Lincon" ಎಂಬ ಅಪರೂಪದ ಸಂಕಲನದಲ್ಲಿರುವ ಮೂರು ಕವನಗಳನ್ನು ಸನದಿಯವರು ಇಲ್ಲಿ ಮೂಲ ಕವನಗಳ ಸತ್ವಕ್ಕೆ ಧಕ್ಕೆ ತಟ್ಟದ ಹಾಗೆ ಕನ್ನಡಿಸಿದ್ದಾರೆ. ಮೂಲದ ಲಯಗಾರಿಕೆಯೊಂದಿಗೆ ಲಿಂಕನ್‌ರ ಜೀವನ

ದರ್ಶನವನ್ನೂ ಈ ಅನುವಾದಗಳು ಸಮರ್ಥವಾಗಿ ಹಿಡಿದಿಟ್ಟಿವೆ. ಲಿಂಕನ್‌ರ ಬಾಲ್ಯ ಸ್ಮೃತಿಗಳ ಮೆಲುಕು, ಮೃತ್ಯುವಿನ ಬಗೆಗಿನ ಅವರ ವೈಚಾರಿಕ ನಿಲವು, ಬೇಟೆಯೊಂದರಲ್ಲಿ ಸಾಹಸ ಹಾಗೂ ಅಲ್ಲಿ ಕಾಣುವ ಹಾಸ್ಯ - ಈ ಅಂಶಗಳನ್ನು ಒಳಗೊಂಡಿರುವ ಇಲ್ಲಿನ ಮೂರೂ ಕವನಗಳು ಕುತೂಹಲಕಾರಿ ಸಂಗತಿಗಳನ್ನು ಲಯಬದ್ಧವಾಗಿ ಬಿತ್ತರಿಸುತ್ತವೆ. ಕನ್ನಡಾನುವಾದಗಳ ಕೊನೆಯಲ್ಲಿ ಮೂಲ ಇಂಗ್ಲೀಷ್ ಕವನಗಳನ್ನೂ ಕೊಟ್ಟಿರುವುದು ಔಚಿತ್ಯಪೂರ್ಣ. ಸನದಿಯವರು ಸಮರ್ಥ ಅನುವಾದಕರೆಂಬುದನ್ನು ಈ ಅನುವಾದಗಳು ಪುಷ್ಟೀಕರಿಸುತ್ತವೆ.

ಸನದಿಯವರ ಒಟ್ಟಾರೆ ಕಾವ್ಯಕೃಷಿಯನ್ನು 'ತಪನಿಂದ ತಾವರೆಯ ಸಾಧನೆ' ಎಂದು ಖಂಡಿತವಾಗಿ ಗುರುತಿಸಬಹುದು. ಹೀಗೆ ಗುರುತಿಸುವುದರ ಹಿಂದೆ ವಿಶಿಷ್ಟ ಅರ್ಥವಿದೆ. ಸನದಿಯವರು ಹೂವುಗಳ ಬಗ್ಗೆ ತುಂಬ ಪ್ರೀತಿಯನ್ನಿಟ್ಟುಕೊಂಡವರು. ತಮ್ಮ ಕಾವ್ಯಪ್ರಗತಿಯ ಮಾನಕ್ಕೆ ಅವರು ಬಳಸಿಕೊಂಡದ್ದು ಭಿನ್ನ ಭಿನ್ನ ಹೂವುಗಳನ್ನೆ.

> ನನ್ನೆದೆಯ ನೆಲ ಸೀಳಿ ಭಾವ ಸೌರಭ ತಾಳಿ
> ಮೊಳೆಯಿತಿದೊ ನಗೆಗುಡಿಯ ನೆಲಸಂಪಿಗೆ [೧೯]

ಎಂದೆನ್ನುವ ಸನದಿಯವರು ತಮ್ಮ ಹೃದ್ಭೂಮಿಯಿಂದ ಮೊಳೆತರಳಿದ ಮೊದಲ ಕಾವ್ಯಪುಷ್ಪವನ್ನು ನೆಲಸಂಪಿಗೆಗೆ ಸಮೀಕರಣಗೊಳಿಸಿದ್ದಾರೆ. ನೆಲ ಸಂಪಿಗೆ ನೆಲಕ್ಕಂಟಿಕೊಂಡೇ ಅರಳುವ ಸುಂದರ, ಸುವಾಸನೆಯ ಪುಷ್ಪ. ಮುದನೀಡುವ ಸುವಾಸನೆಯಿದ್ದರೂ ನೆಲಬಿಟ್ಟು ಮೇಲೇಳದೆ ಅದರ ಆಯುಷ್ಯವೂ ತೀರ ಚಿಕ್ಕದು. ಇಂಥ

೧೯. ಬಿ. ಎ. ಸನದಿ : ನೆಲಸಂಪಿಗೆ : ಸೂರ್ಯಪಾನ : ಪುಟ ೫೬

ಪುಷ್ಪಕ್ಕೆ ತಮ್ಮ ಆರಂಭಿಕ ಕಾವ್ಯವನ್ನು ಹೋಲಿಸಿಕೊಂಡ ಸನದಿಯವರ ಸ್ವವಿಮರ್ಶೆ ಅರ್ಥಪೂರ್ಣವಾದದ್ದು. ತನ್ನ ಕಾವ್ಯ ನೆಲದೊಂದಿಗೆ ಗಾಢಸಂಬಂಧ ಹೊಂದಿರುವುದೆಂಬ ವಾಸ್ತವವನ್ನು ಸೂಚ್ಯವಾಗಿ ಹೇಳುತ್ತಲೆ, ಅದರ ನೆಲೆ ಮತ್ತು ಕಾಲಗಳು ಮಾತ್ರ ತುಂಬ ಸೀಮಿತವಾದವೆಂಬುದನ್ನು ಅವರು ಗುರುತಿಸಿಕೊಳ್ಳುತ್ತಾರೆ. ಇನ್ನೂ ಒಂದಿಷ್ಟು ಮುಂದೆ ಹೋಗಿ "ಹಿಂದೊಮ್ಮೆ ದಿನ ಬೆಳಗಾದರೆ, ನೆಲಕ್ಕಂಟಿಕೊಂಡಿದ್ದೇ ಮುಗಿಲೆಡೆಗೆ ಮೊಗವೆತ್ತಿ ನಿಲ್ಲುವ 'ನೆಲಸಂಪಿಗೆ'ಯಾಗಿ ಅರಳಲಾರಂಭಿಸಿದ ನನ್ನ ಕಾವ್ಯವಿಂದು ನಿರಂತರ ಬೆಳಕಿಗಾಗಿ ಹಾತೊರೆಯುತ್ತ ನಡುಹಗಲಿನ ಸುಡುಬಿಸಿಲಿನಲ್ಲೂ ತಲೆಯೆತ್ತಿ ನಿಲ್ಲುವ 'ಸೂರ್ಯಪಾನ'ವಾಗಿ ಅರಳಿದ ಬಗೆ....[೨೦] ಎಂದು ಅತ್ಯಂತ ಸ್ಪಷ್ಟವಾಗಿ ಹೇಳಿರುವ ಅವರು ತಮ್ಮ ಕಾವ್ಯ ಅಡೆತಡೆಗಳನ್ನೆದುರಿಸಿಯೂ ಬೆಳಕಿಗೆ ಹಂಬಲಿಸಿ, ಆಕಾಶದತ್ತ ಮುಖಮಾಡಿ ಸೂರ್ಯನಿಗೆ ಮುಖಾಮುಖಿಯಾಗುವ ಸೂರ್ಯಪಾನದಂತೆ ಬೆಳೆಯಿತೆಂದು ಸೂಚಿಸುತ್ತಾರೆ. ಸನದಿಯವರ ಕಾವ್ಯವರ್ಧನೆ ಹಾಗೂ ಕಾವ್ಯಕ್ರಿಯೆಯನ್ನು ಪ್ರತೀಕಾತ್ಮಕವಾಗಿ ಸಂಕೇತಿಸುವ ಈ ಪುಷ್ಪಗಳ ಸಾಲಿನಲ್ಲಿ ತಾವರೆಯೂ ಒಂದು. ಅದು 'ನೆಲಸಂಪಿಗೆ' ಹಾಗೂ 'ಸೂರ್ಯಪಾನ'ದಷ್ಟೇ ವಿಶಿಷ್ಟವಾದದ್ದು ಕೂಡ. ಕೆಸರು ಮತ್ತು ಮಲೆತ ಮಲಿನ ನೀರಿನಲ್ಲಿ ಅಸ್ತಿತ್ವ ಹೊಂದಿರುವ ಅದು ಅವೆಲ್ಲವುಗಳ ನಡುವಿದ್ದೂ ಅವುಗಳನ್ನು ಅಂಟಿಸಿಕೊಳ್ಳದೆ ಬೆಳೆದು, ತಲೆಯೆತ್ತಿ, ನೋಡಿದವರ ಕಣ್ಣು ಮನಸ್ಸುಗಳಿಗೆ ಮುದ ನೀಡುತ್ತದೆ. ಅದು ಅಲುಗಾಡದೆ ಅರಳಿ ನಿಲ್ಲುವ ಪರಿ ತಪಸ್ಸಿನ ರೀತಿಯದೇ ಆಗಿರುತ್ತದೆ. ನಿರ್ಲಿಪ್ತತೆ ಮತ್ತು

---

೨೦. ಬಿ. ಎ. ಸನದಿ : ನೆಲಸಂಪಿಗೆ : ಸೂರ್ಯಪಾನ : ನನ್ನ ನುಡಿ : ಪುಟ IV

ಸೌಂದರ್ಯದ ಪ್ರತೀಕದಂತಿರುವ 'ತಾವರೆ'ಯನ್ನೇ ಹೋಲುತ್ತವೆ ಸನದಿಯವರ ವ್ಯಕ್ತಿತ್ವ ಮತ್ತು ಕಾವ್ಯ. ಕಸ-ಕೆಸರು-ಕೊಳೆ ತುಂಬಿದ ವಿಕೃತ ವ್ಯವಸ್ಥೆಯಲ್ಲಿದ್ದುಕೊಂಡೇ ಸನದಿಯವರು ಕಾವ್ಯತಪಸ್ಸು ಮಾಡಿದವರು. ಹಾಗಿದ್ದೂ ಈ ಕಸ-ಕೆಸರು-ಕೊಳೆಯನ್ನು ಅವರೆಂದೂ ಅಂಟಿಸಿಕೊಳ್ಳಲಿಲ್ಲ. ಬದಲಾಗಿ ಅಂಥ ವ್ಯವಸ್ಥೆಯನ್ನು ಬದಲಿಸುವ ಮತ್ತು ಸುಧಾರಿಸುವ ಸದಾಶಯದಿಂದಲೇ ಕಾವ್ಯಕೃಷಿ ಮಾಡಿದರು. ಇದನ್ನೆಲ್ಲ ಸಂಕೇತಿಸುವ ಉದ್ದೇಶದಿಂದಲೇ ಅವರ ಕಾವ್ಯ ಕೃಷಿಯನ್ನು 'ತಪ ನಿಂದ ತಾವರೆಯ ಸಾಧನೆ' ಎಂದು ಕರೆದದ್ದು. ಅದು ಸನದಿಯವರ ಬದುಕು, ಅವರ ಕಾವ್ಯಸಾಧನೆಯ ನಿರಂತರತೆ, ಏಕಾಗ್ರತೆ ಹಾಗೂ ಸದುದ್ದೇಶ ಇವೆಲ್ಲವನ್ನೂ ಏಕತ್ರವಾಗಿಯೇ ಪ್ರತಿನಿಧಿಸುವ ರೂಪಕ.

> ಕೊಳದ ನೊರೆ-ತೊರೆ ಮಿಂಚಿ ಮೋಹ ಬೀರಿದರೂನು
> ತಪ ನಿಂದ ತಾವರೆಗೆ ಸಾಟಿಯೇನು[೨೧]

ಎಂಬ ಪ್ರಶ್ನೆ ಸಾರ್ಥಕವೇ ಆಗುತ್ತದೆ. ಉತ್ತರವನ್ನು ಬಿಚ್ಚಿಹೇಳುವ ಅಗತ್ಯವಿಲ್ಲವೆನಿಸುತ್ತದೆ. ಈ ಅನನ್ಯತೆ ಅನುಭವಕ್ಕೆ ದಕ್ಕುವುದು ಸನದಿಯವರ ಕಾವ್ಯಸಮುದ್ರದಲ್ಲಿ ಈಸತೊಡಗಿದಾಗ ಮಾತ್ರ.

ooo

---

೨೧. ಬಿ. ಎ. ಸನದಿ : ನೆಲಸಂಪಿಗೆ : ಸೂರ್ಯಪಾನ : ಪುಟ ೨೩೦

ಬಿ. ಎ. ಸನದಿ ಅವರ ಕೃತಿಗಳು

ಕವಿತೆ

ಆಶಾಕಿರಣ
ನೆಲಸಂಪಿಗೆ
ತಾಜಮಹಲು
ಹಿಮಗಿರಿಯ ಮುಡಿಯಲ್ಲಿ
ವೀರಕಂಕಣ
ಧ್ರುವಬಿಂದು
ಪ್ರತಿಬಿಂಬ
ಸೀಮಾಂತರ
ಮುಂಬೈ ಮಳೆ
ಮನೆಮನೆಗೆ ಬೇಲಿ
ಗೀತಗುಂಜನ
ಸಂಭವ
ಸೂರ್ಯಪಾನ(ಸಮಗ್ರಕಾವ್ಯ)
ಸಪ್ತರಂಗ (ಆಯ್ದ ಕವನಗಳು)
ನಮ್ಮ ಪ್ರೀತಿ
ಮರುಭೂಮಿ
The Thirsty Words

ಕಥೆ

ನೀರಿಲ್ಲದ ನಲ್ಲಿ
ಅನುಭವ

ವಿಮರ್ಶೆ

ಜಾನಪದ ಕಾವ್ಯದೃಷ್ಟಿ
ಇಲ್ಲಿ ಸಲ್ಲುವವರು
ಕಲೆ ಮತ್ತು ಮನುಷ್ಯ ಸಂಸ್ಕೃತಿ

ವ್ಯಕ್ತಿ ಚಿತ್ರ

ವಿನೋದ - ವಿಚಾರ
ಗೌರವ

ಶಿಶು ಸಾಹಿತ್ಯ

ಗುಲಾಬಿ ಗೊಂಚಲು
ಗೃಹ ಪಂಚಮಿ
ಹೂವಿನ ಹುಡಗಿ
ಜಿಲೇಬಿ ಝಣ್ ಝಣ್
ಬಹುಮಾನ

ಹರಟೆ

ನಂದೊಂದ್ಮಾತು

ಸಂಪಾದಿತ

ವಿಜಯ ದುಂದುಭಿ

ಸನ್ಮಾನ

ಶರಣ ಪ್ರಸಾದ

ತುಂಗಾತರಂಗ

ಮುಂಬಯಿ ಕತೆಗಳು

ನಾಟಕ

ಬಂದೆಯಾ ಬಾ ರಾಯಾ

ನೀಲಾಂಬಿಕಾ

ಅನುವಾದ

ನಮ್ಮ ಭಾರತ ದೇಶ

ರಕ್ತಮಾಂಗಲ್ಯ

ಮಹಾವೀರ

ಬಾಲ ಪಟ್ಟ ಫಜೀತಿ

ತಾನಸೇನ

ಮಿರ್ಝಾ ಗಾಲಿಬ್

ಬಾಬಾ ಸಾಹೇಬ್ ಅಂಬೇಡಕರ

ಲಿಂಕನ್ ಕವಿತೆಗಳು

ಕ್ರಿಯೆ ಮತ್ತು ಸಂಬಂಧ

ಸಂಚಾರಿ

***

ಸನದಿ ಸಾಹಿತ್ಯ ಸಮೀಕ್ಷೆ :

ಮಾನವ್ಯ ಕವಿ

ಲೇ. ಡಾ. ಗೌರೀಶ ಕಾಯ್ಕಿಣಿ

ಸೋಪಾನ

ಸಂ. ಡಾ. ತಾಳ್ತಜೆ ವಸಂತಕುಮಾರ್ ಮತ್ತು ಕೆ. ಚಂದ್ರಮೌಳಿ

ಸನದಿ ಸಾಹಿತ್ಯ ಸಮೀಕ್ಷೆ :

ಸಂ. ಡಾ. ಗುರುಪಾದ ಮರಿಗುದ್ದಿ

ಸನದಿ ಜೀವನ-ಸಾಧನೆ :

ಸ್ನೇಹ ಸಂಪದ

ಸಂ. ಜ್ಯೋತಿ ಹೊಸೂರ

ಶ್ರೀ ಬಿ. ಎ. ಸನದಿ ಸಮಗ್ರ ಅಧ್ಯಯನ (ಪಿಎಚ್.ಡಿ. ಪ್ರಬಂಧ)

ಡಾ. ದಾಕ್ಷಾಯಿಣಿ ಉಕ್ಕಲಿ